
# ಕಲ್ಯಾಣ ಕಿರಣ

ಅಗಸ್ಟ್ 2003 | ಬೆಲೆ ರೂ. 5-00/-





ಪರಮ ಪೂಜ್ಯ ಲಿಂ|| ಮಹಾಜಗದ್ಗುರು ಲಿಂಗಾನಂದ ಮಹಾ ಸ್ವಾಮೀಜಿಯವರ
73ನೇ ಜಯಂತ್ಯೋತ್ಸವ ದಿ. 31-8-2003

ಓಂ ಶ್ರೀ ಗುರು ಬಸವಲಿಂಗಾಯ ನಮಃ
866666

ಸಂಪುಟ- 34 ಬಸವ ಶಕೆ 870 ಆಜೀವ ಸದಸ್ಯತ್ವ 500 ರೂ
ಸಂಚಿಕೆ -8 ಆಗಸ್ಟ್ 2003 ವಾರ್ಷಿಕ ಚಂದಾ 50/- ರೂ

## * ಬೆಳಗನುಟ್ಟು ಬಯಲಾದ ಮಹಾಜ್ಯೋತಿಗಳು *

ಉಟ್ಟ ಸೀರೆಯ ಹರಿದು ಹೋದಾತ ನೀನಲಾ ಬಸವಣ್ಣ !
ಮೆಟ್ಟಿದ ಕೆರಹ ಕಳೆದು ಹೋದಾತ ನೀನಲಾ ಬಸವಣ್ಣ !
ಕಟ್ಟಿದ ಮುಡಿಯ ಬಿಟ್ಟು ಹೋದಾತ ನೀನಲಾ ಬಸವಣ್ಣ !
ಸೀಮೆ ಸಂಬಂಧವ ತಪ್ಪಿಹೋದಾತ ನೀನಲಾ ಬಸವಣ್ಣ !
ಲಿಂಗಕ್ಕೆ ಮಾಡಿದುದ ಸೋಂಕದೆ ಹೋದೆಯಲ್ಲಾ ಬಸವಣ್ಣಾ !
ಜಂಗಮಕ್ಕೆ ಮಾಡಿದ ಮಾಟವ ಕೈಯಲ್ಲಿ ಹಿಡಿದುಕೊಂಡು
ಹೋದೆಯಲ್ಲಾ ಬಸವಣ್ಣಾ !
ಬೆಳಗನುಟ್ಟು ಬಯಲಾದೆಯಲ್ಲಾ ಬಸವಣ್ಣ !
ಆ ಬಸವಣ್ಣಂಗೆ ಶರಣೆಂಬ ಪದವನೇ ತೋರು ಕಂಡಾ ಕಲಿದೇವರ ದೇವಾ.

- ವೀರಗಣಾಚಾರಿ ಮಡಿವಾಳ ಮಾಚಿದೇವರು

ಬಂದೆ ಅವ್ವಾ ನೀಲಾಂಬಿಕೆ ಸುಜ್ಞಾನದ ಸತಿಯಾಗಿ
ನಿಂದೆ ನೀನು ಬಸವೇಶನ ಬಾಳಿನಲ್ಲಿ ಜೊತೆಯಾಗಿ,
ಪೃಥ್ವಿಗಗ್ಗಳ ಚೆಲುವೆ, ಯೋಗದಲ್ಲಿ ನಿನ್ನದೆಂಥ ನಿಲುವೆ ? ಇದು
ಪ್ರಥಮಾಚಾರ್ಯ ಬಸವೇಶನ ಸಮವೇಗದಲ್ಲಿ ಹೆಜ್ಜೆ ಇಟ್ಟ ಫಲವೆ ?
ಕನ್ನೆ ನಿನ್ನ ಕೈವಿಡಿದೂ ಶಿವನ ನೆರೆದ ಪತಿಯ ಕಂಡು
ಕನಲಲಿಲ್ಲ, ಮುನಿಯಲಿಲ್ಲ, ಕೆನೆಯಲಿಲ್ಲ, ಕಂದಲಿಲ್ಲ, ಎದೆಗುಂದಲಿಲ್ಲ.
ಪತಿಗೇ ತಾಯಾಗಿ, ಪಿತನಿಗೆ ಸುತೆಯಾದ ಮಹಾಮಾತೆ
ಜ್ಯೋತಿ ಬಸವಣ್ಣನ ಮಹಾಮನೆಯ ಬೆಳಗಿದ ಸುವಿಖ್ಯಾತೆ
ಕಂಗಳ ನೋಟವ ಲಿಂಗದಲ್ಲಿ ನೆಟ್ಟು ಬಯಲಾದ ಮೂರ್ತಿಯೆ
ಸಂಗನ ಬಸವಣ್ಣನ ಹೃದಯದೊಳು ಬೆರೆದ ಮಹಾಜ್ಯೋತಿಯೆ
ಅಕ್ಕಮಹಾದೇವಿಯ ಸುಚಿತ್ತದ ಪುತ್ಥಳಿಯನ್ನಾಗಿ ಕಂಡ ತಾಯಿಯೆ
ಚೊಕ್ಕ ನಿಲುವಿನ ನೀನು ಎಂದೆಂದೂ ನಮ್ಮೆಲ್ಲರಿಗೂ ಮಾತೆಯೆ !

- ಬಸವಾತ್ಮಜೆ

★ ಕಲ್ಯಾಣ ಕಿರಣ ★

ಸಂಪುಟ - 34 ಬಸವ ಶಕೆ 870 ಆಜೀವ ಸದಸ್ಯತ್ವ 500 ರೂ

ಸಂಚಿಕೆ - 8 ಆಗಸ್ಟ್ 2003 ವಾರ್ಷಿಕ ಚಂದಾ 50 ರೂ

ಲೇಖನಗಳು ಕಿರಣಗನ್ನಡಿ





## ಬಸವ ವಾಣಿ

ಭಕ್ತಿಯೆಂಬ ಪೃಥ್ವಿಯ ಮೇಲೆ ಗುರುವೆಂಬ ಬೀಜವಂಕುರಿಸಿ,
ಲಿಂಗವೆಂಬ ಎಲೆಯಾಯಿತ್ತು, ವಿಚಾರವೆಂಬ ಹೂವಾಯಿತ್ತು,
ಆಚಾರವೆಂಬ ಕಾಯಾಗಿತ್ತು, ನಿಷ್ಪತ್ತಿ ಎಂಬ ಹಣ್ಣಾಗಿತ್ತು,
ನಿಷ್ಪತ್ತಿಯೆಂಬ ಹಣ್ಣು ತಾನು ತೊಟ್ಟು ಕಳಚಿ ಬೀಳುವಲ್ಲಿ
ಲಿಂಗದೇವಾ ತನಗೆ ಬೇಕೆಂದು ಎತ್ತಿಕೊಂಡ

KALYANA KIRANA- Reg. No. 19988/70. Monthly Magazine printed and published by B.Shambulingaiah. at Prabhudeva Printing Press, Basava Gangotri, Kumbalgodu, Bangalore-560074. Phone : 8437234

ತ್ವರಿತ ವ್ಯವಹಾರಕ್ಕೆ ಬಸವ ಮಂಟಪದ ವಿಳಾಸಕ್ಕೆ ಬರೆಯಿರಿ:
ದೂರವಾಣಿ: 3325335/3322790

ಬಸವ ಮಂಟಪ, 2035
20ನೆಯ ಮುಖ್ಯರಸ್ತೆ, ಎರಡನೆಯ ಬ್ಲಾಕ್
ರಾಜಾಜಿನಗರ, ಬೆಂಗಳೂರು-560010



### ಬಸವ ಧರ್ಮದ ಮಹಾಜಗದ್ಗುರು ಪೀಠ

ಮಹಾಮನೆ ಮಹಾಮಠ
ಕೂಡಲ ಸಂಗಮ - 587115
ತಾ - ಹುನಗುಂದ, ಜಿಲ್ಲೆ - ಬಾಗಲಕೋಟೆ

## ಬಸವ ತತ್ತ್ವ ಪರೀಕ್ಷೆ ಕುರಿತ ಸೂಚನಾ ಪತ್ರ

ಶರಣ ಬಂಧುಗಳೇ,

ಬಸವ ಧರ್ಮ ಪೀಠದ ಆಶ್ರಯದಲ್ಲಿ ಬಸವ ತತ್ವ ಪರೀಕ್ಷೆಗಳನ್ನು ನಡೆಸಲಾಗುತ್ತಿದೆ. ಧರ್ಮಪಿತ ಬಸವಣ್ಣನವರ ಮತ್ತು ಅವರ ಸಮಕಾಲೀನ ಶರಣರ ದಿವ್ಯ ಸಂದೇಶ, ತತ್ತ್ವಗಳು ಹಾಗೂ ಶರಣ ಪರಂಪರೆ, ಸಂಸ್ಕೃತಿ -ಇವುಗಳ ಪರಿಚಯ ಮಾಡಿಕೊಡುವುದೇ ಈ ಪರೀಕ್ಷೆಗಳ ಉದ್ದೇಶವಾಗಿದೆ.

ಚಿಕ್ಕ ಮಕ್ಕಳಿಂದ ದೊಡ್ಡವರವರೆಗೆ ಎಲ್ಲರೂ ಶ್ರೀ ಗುರು ಬಸವಣ್ಣನವರ ದಿವ್ಯ ಜೀವನ, ಸಂದೇಶಗಳನ್ನು, ಅವರು ಕೊಟ್ಟ ಪ್ರಗತಿಪರ ಧರ್ಮದ ಆಳ-ಹರಹುಗಳನ್ನು ತಿಳಿಯುವುದು ಅಗತ್ಯವಿದೆ. ಪರೀಕ್ಷೆಯ ಮೂಲಕವಾಗಿ ಇದು ಸುಲಭ ಸಾಧ್ಯವಾಗುವುದು. ರಾಷ್ಟ್ರೀಯ ಬಸವ ದಳದ ಎಲ್ಲಾ ಶಾಖೆಗಳವರು, ರಾಷ್ಟ್ರ ಕಲ್ಯಾಣ ವಿದ್ಯಾರ್ಥಿ ಗಣಗಳವರು ಹೆಚ್ಚಿನ ಆಸಕ್ತಿವಹಿಸಿ ತಮ್ಮ ಕೇಂದ್ರಗಳಿಂದ ಹೆಚ್ಚು ಜನರನ್ನು ಪರೀಕ್ಷೆಗೆ ಕೂರಿಸಬೇಕು. ಶಾಲೆ, ಕಾಲೇಜುಗಳಿಗೆ ಭೇಟಿ ನೀಡಿ ಪರೀಕ್ಷೆಗಳ ಬಗ್ಗೆ ಮಾಹಿತಿ ನೀಡಿ ಹೆಚ್ಚು ವಿದ್ಯಾರ್ಥಿಗಳಿಗೆ ಪರೀಕ್ಷೆಯಲ್ಲಿ ಭಾಗವಹಿಸಲು ಉತ್ತೇಜಿಸಬೇಕು. ಇದರಿಂದ ಧರ್ಮದ ಬಗ್ಗೆ ಅತ್ಯುತ್ತಮ ತಿಳುವಳಿಕೆ ಉಂಟಾಗುವುದು. ವಿದ್ಯಾರ್ಥಿಗಳು ಮಾತ್ರವಲ್ಲದೆ ಇನ್ನಿತರರೂ ಹೆಚ್ಚಿನ ಆಸಕ್ತಿವಹಿಸಿ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಬೇಕೆಂದು ಹಾರೈಸುತ್ತೇವೆ. ತ್ವರಿತಗತಿಯ ಪತ್ರೋತ್ತರ ವ್ಯವಹಾರಗಳಿಗಾಗಿ ಕೆಳಗಿನ ವಿಳಾಸಕ್ಕೆ ಸಂಪರ್ಕಿಸಬೇಕೆಂದು ಕೋರುತ್ತೇವೆ.

ಪೂಜ್ಯ ಶ್ರೀಮನ್ ನಿರಂಜನ
ಮಹಾಜಗದ್ಗುರು ಮಾತೆ ಮಹಾದೇವಿ
ಪೀಠಾಧ್ಯಕ್ಷೆ, ಕೂಡಲ ಸಂಗಮ

**ವ್ಯವಹರಿಸುವ ವಿಳಾಸ :**
ಪೂಜ್ಯ ಶ್ರೀ ಮಾತೆ ಕಸ್ತೂರಿದೇವಿ
ಬಸವ ಗಂಗೋತ್ರಿ
ಮೈಸೂರು ರಸ್ತೆ , ಕುಂಬಳಗೋಡು-560074
ಬೆಂಗಳೂರು ದಕ್ಷಿಣ

# ಬಸವ ಬೀಡಿನಿಂದ ಅಮೆರಿಕಾ ನಾಡಿಗೆ

## ಪ್ರವಾಸ ಕಥನ - ಭಾಗ 1 - ಮಾತಾಜಿ, ಆಸ್ಟಿನ್, ಯು.ಎಸ್.ಎ

ಕಲ್ಯಾಣ ಕಿರಣ ಮಾಸಪತ್ರಿಕೆಯಲ್ಲಿ ಹೆಚ್ಚಿನ ವಿಶೇಷ ವಿವರಗಳು ಬರಬಹುದು ಎಂದು ನಮ್ಮ ಆತ್ಮೀಯರು ಕಾಯುವುದು ಸ್ವಾಭಾವಿಕ. ಏಕೆಂದರೆ ಅಷ್ಟೊಂದು ಆತ್ಮೀಯತೆ, ಅಭಿಮಾನಗಳಿಂದ ನಮ್ಮನ್ನು ಬೀಳ್ಕೊಟ್ಟಿದ್ದರು. ಬೆಂಗಳೂರಿನ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ಕಿಕ್ಕಿರಿದು ಸೇರಿ, ಹೂ ಮಾಲೆಗಳಲ್ಲಿ ನನ್ನನ್ನು ಮುಳುಗಿಸಿ, ಮನದುಂಬಿ ಕಾಣಿಕೆ ಕೊಟ್ಟು ಬೀಳ್ಕೊಟ್ಟುದಲ್ಲದೆ ಬೆಂಗಳೂರು ನಗರದ ವಿಮಾನ ನಿಲ್ದಾಣಕ್ಕೆ ಸಹ ಬಂದು ಆತ್ಮೀಯ ವಿದಾಯ ಹೇಳಿದ್ದರು. ಅವರ ಅಭಿಮಾನ-ಆತ್ಮೀಯತೆ ಮತ್ತು ಅದರೊಳಗಣ ನಿರೀಕ್ಷೆ ಇವನ್ನು ಅಳೆಯಲು ಸಾಧ್ಯವೇ ಇಲ್ಲ.

ಸಹಾರಾ 216 ಏರ್‌ಲೈನ್ಸ್ ಮೂಲಕ ಬೆಂಗಳೂರು ಬಿಟ್ಟಾಗ ರಾತ್ರಿ ಒಂಭತ್ತುವರೆ ದಾಟಿತ್ತು. ಎಂಟು ಗಂಟೆ ಐವತ್ತು ನಿಮಿಷಕ್ಕೆ ಬಿಡಬೇಕಾದ ವಿಮಾನ 9-50 ಕ್ಕೆ ಹೊರಟು ಮುಂಬಯಿಗೆ ಬಂದಾಗ ಆಗಲೇ ಹನ್ನೊಂದರ ಹತ್ತಿರ. ಅಂದು ದೆಹಲಿಯಿಂದ ಬೆಂಗಳೂರಿಗೆ ವಿಮಾನ ಬಂದುದೇ ತಡವಾಗಿ. ನಮ್ಮ ಜೊತೆಗೆ ಬಂದವರಲ್ಲಿ ಕೆಲವರನ್ನು ತುಂಬಾ ದೂರದವರೆಗೆ ಬಿಟ್ಟಿದ್ದರಿಂದ ಅವರೇ ನನ್ನ ಕೈ ಬ್ಯಾಗ್‌ಗಳನ್ನು ಹಿಡಿದುಕೊಂಡು ಬರುತ್ತ ನಾನು ಒಳಗೆ ಹೋಗುವಾಗ ನನ್ನ ಕೈಗೆ ಕೊಟ್ಟರು. ಸ್ವಲ್ಪ ಹೊತ್ತಿನಲ್ಲೇ ವಿಪರೀತ ಭಾರವಾಯಿತು. ನನ್ನ ಜೊತೆಗೆ ಯಾರೂ ಹೊರಟಿರಲಿಲ್ಲ. ಮುಖ್ಯ ಕಾರಣ ನಾನು ಕರೆದೊಯ್ಯಬೇಕೆಂದು ನಿರ್ಧರಿಸಿದ್ದ ಮೂವರಿಗೂ ವೀಸಾ ಸಿಕ್ಕಿರಲಿಲ್ಲ. ಸೆಪ್ಟೆಂಬರ್ 11 ರಂದು ವಿಶ್ವ ವಾಣಿಜ್ಯ ಗೋಪುರ ಜೆಹಾದಿಗಳ ವಿಮಾನದ ಡಿಕ್ಕಿಯಿಂದ ನುಚ್ಚುನೂರಾಗಿ ನೆಲಕ್ಕೆ ಉರುಳಿದ ದಿನದಿಂದ ಅಮೆರಿಕಾದವರಿಗೆ ಭಯವೋ ಭಯ. ಹೀಗಾಗಿ ಅಕ್ಟೋಬರ್ ತಿಂಗಳಿಂದ ವೀಸಾ ಕೊಡುವುದನ್ನು ಬಹಳ ಬಿಗಿ ಮಾಡಿದ್ದಾರೆ. ಜೊತೆಗೆ ಇಲ್ಲಿಗೆ ಬಂದ ಭಾರತೀಯರು, ಏಷಿಯನ್ನರು ಹೇಗಾದರೂ ಅಲ್ಲಿ ಇಲ್ಲಿ ನುಸುಳಿ ಕೆಲಸಗಳಿಗೆ ಸೇರಿಕೊಂಡು ಈ ದೇಶದಲ್ಲಿಯೇ ಝಂಡಾ ಹೊಡೆಯಲು ಪ್ರಯತ್ನಿಸುತ್ತಾರೆ ಎಂಬ ಆತಂಕ. ಹೀಗಾಗಿ ಐವತ್ತು-ಐವತ್ತೈದು ವರ್ಷದ ಕೆಳಗಿನವರಿಗೆ ವೀಸಾ ಕೊಡಲು ಹಿಂಜರಿಯುತ್ತಾರೆ.

ನಾನು ಒಬ್ಬಳೇ ಹೊರಡಬೇಕಾದಾಗ ನಮ್ಮ ಎಲ್ಲ ಸದ್ಭಕ್ತರು, ಅಭಿಮಾನಿಗಳು ಬಹಳ ಹಠ ತೆಗೆದರು. "ನಿಮ್ಮೊಬ್ಬರನ್ನೇ ಕಳಿಸುವುದಿಲ್ಲ. ಪ್ರಯಾಣ ಮುಂದಕ್ಕೆ ಹಾಕಿರಿ. ನಿಮ್ಮೊಟ್ಟಿಗೆ ಹೋಗಲು ಜೇರೆಯವರಿಗೆ ವೀಸಾ ಸಿಗುವವರೆಗೂ ನೀವು ಹೋಗೋದು ಬೇಡ" ಎಂದು ಎಲ್ಲರ ಆಗ್ರಹ. "ಹಿಂದೆ ನಾನು 1976ರಲ್ಲಿ ಇಂಗ್ಲೇಡ್‌ಗೆ ಒಬ್ಬಳೇ ಹೋಗಿದ್ದೆ. ಆಗ ಇನ್ನೂ ಚಿಕ್ಕ ವಯಸ್ಸು 30 ವರ್ಷ; ಈಗ ವಯಸ್ಸಾಗಿದೆ. ಅನುಭವ ಪಕ್ವವಾಗಿದೆ. ಅಲ್ಲಿ ಹೋದ ತಕ್ಷಣ ಶರಣೆ. ಯೋಗೀಶ್ವರಿ ಬಂದಿರುತ್ತಾರೆ. ಏನೂ ಕಷ್ಟವಾಗದು" ಎಂದು ಎಷ್ಟು ಮನವೊಲಿಸಿದರು ಒಪ್ಪಲಿಲ್ಲ.



"ಆಗ ವಯಸ್ಸು ಸಣ್ಣದು. ಆರೋಗ್ಯ ಚೆನ್ನಾಗಿತ್ತು. ಈಗ ಡಯಾಬಿಟೀಸ್, ಬಿ.ಪಿ. ಇವೆ. ಹೀಗಾಗಿ ಆತಂಕ" ಎಂದು ಎಲ್ಲರ ಒತ್ತಾಯ. ನಮಗೆ ಸ್ಪಾನ್ಸರ್ ಮಾಡಿರುವ ಶರಣೆ. ಯೋಗೀಶ್ವರಿ ಅವರ ತಾಯಿ ಶರಣೆ. ಸುಜಯಾದೇವಿ ಸಹ ಇದೇ ಆತಂಕ ವ್ಯಕ್ತ ಪಡಿಸಿದರು. ಆಗ ನೆರವಿಗೆ ಬಂದವರು ಅವರ ಹಿರಿಯ ಮಗಳು ರಾಧಿಕಾ. ಅವರು ಫೋನ್ ಮಾಡಿ, ನಿಮ್ಮ ಜೊತೆ ಹೋಗಲು ಯಾರಿಗೂ ವೀಸಾ ಸಿಕ್ಕಿಲ್ಲ ಎಂದು ತಿಳಿಯಿತು. ನಿಮ್ಮೊಬ್ಬರನ್ನೇ ಕಳಿಸಲು ಯಾರಿಗೂ ಇಷ್ಟವಿಲ್ಲ. ನನಗೆ ಹತ್ತು ವರ್ಷದ ವೀಸಾ ಇದೆ. ನಾನೇ ನಿಮ್ಮ ಸಂಗಡ ಬರುತ್ತೇನೆ" ಎಂದಾಗ ಎಲ್ಲರಿಗೂ ಆಶ್ಚರ್ಯ-ಆನಂದ. ಸುಜಯಾದೇವಿ, ಯೋಗೀಶ್ವರಿ ಎಲ್ಲರೂ ಸಂತೋಷ ಪಟ್ಟರು. ರಾಧಿಕಾ ಅವರು ಸಾಕಷ್ಟು ವ್ಯಾಪಕವಾಗಿ ವಿಶ್ವ ಪ್ರವಾಸ ಮಾಡಿ ಅನುಭವ ಇದ್ದವರು. ಡೆಕ್ಕನ್ ಹೆರಾಲ್ಡ್‌ದಲ್ಲಿ ಪತ್ರಿಕಾ ವರದಿಗಾರರು-ಬರಹಗಾರರೂ ಆಗಿ ಕೆಲಸ ಮಾಡಿದ್ದವರು. ತಮ್ಮ ಪ್ರವಾಸದ ಖರ್ಚನ್ನು ತಾವೇ ವಹಿಸಿಕೊಳ್ಳುವುದಾಗಿಯೂ ಹೇಳಿದರು. ಅವರು ಇದ್ದಕ್ಕಿದ್ದಂತೆಯೇ ಹೊರಡುವ ನಿರ್ಧಾರ ತೆಗೆದುಕೊಂಡದ್ದರಿಂದ ನನ್ನ ಜೊತೆಗೇ ಬೆಂಗಳೂರಿನಿಂದ ಹೊರಡಲು ಅವರಿಗೆ ಸಾಧ್ಯವಿರಲಿಲ್ಲ. ಅವರು ಸೋಮವಾರ ದಿ. 17-6-2003 ರಂದು ಮುಂಬಯಿಗೆ ಬಂದು ಸೇರಿಕೊಳ್ಳುವವರಿದ್ದರು. ಹೀಗಾಗಿ ಬೆಂಗಳೂರಿಂದ ಒಬ್ಬಳೇ ಹೊರಡಬೇಕಾಯಿತು.

ನಾನು ಬೇಡವೆಂದು ಹೇಳಿ, ಹೊರಗೆ ತೆಗೆದುಹಾಕಿದ್ದ ಎಷ್ಟೋ ಸಾಮಾನುಗಳನ್ನು ನನಗೆ ಗೊತ್ತಾಗದಂತೆ ಸದ್ಭಕ್ತರು, ಶಿಷ್ಯರು ಕೈ ಚೀಲಗಳಲ್ಲಿ ಸೇರಿಸಿಬಿಟ್ಟಿದ್ದಾರೆ. ಒಳಗೆ ಕುಳಿತು ನೋಡುತ್ತೇನೆ ದ್ರಾಕ್ಷಿ, ಗೊಡಂಬಿ, ಉತ್ತುತ್ತಿ, ಇವನ್ನೆಲ್ಲ ಏನು ಮಾಡಬೇಕು ? ಇದನ್ನೆಲ್ಲ ಬಿಸಾಡಲೆ ? ಇಷ್ಟು ಬೆಲೆ ಬಾಳುವ ವಸ್ತುವನ್ನು ಬಿಸಾಡುವುದು ಹೇಗೆ ? ಯಾರಿಗಾದರೂ ಕೊಡೋಣವೆ ? ಎಲ್ಲರೂ ಅಂತರರಾಷ್ಟ್ರೀಯ ಪ್ರಯಾಣಿಕರು. ಗೇಟ್ ಮೂಲಕ ಜನರನ್ನು ವಿಮಾನದ ಕಡೆಗೆ ಹೋಗಲು ಬಿಡತೊಡಗಿದರು. ನಿಯಮದಂತೆ ಸಾಲಿನಲ್ಲಿ ನಿಂತೆ. ಬಾಗಿಲಲ್ಲಿ ಚೆಕ್ಕಿಂಗ್ ಮಾಡುತ್ತಿದ್ದ ಅಧಿಕಾರಿ ಓರ್ವ ಮಹಿಳಾ ಅಧಿಕಾರಿಗೆ ಸೂಚನೆ ಕೊಟ್ಟು ಕಳಿಸಿದರು, "ಒಂದು ಕಡೆ ಕುಳಿತಿರಲಿ. ವಿಮಾನದವರೆಗೆ ನಾನು ಕರೆದೊಯ್ಯುತ್ತೇನೆ" ಎಂದು. ಮನಸ್ಸಿಗೆ ನಿರಾಳವೆನಿಸಿತು. ಎಲ್ಲರೂ ಗೇಟ್ ಮೂಲಕ ಒಳಹೋದಾಗ ಆತ ಬಂದು ನನ್ನ ಕೈ ಬ್ಯಾಗ್‌ಗಳನ್ನು ತೆಗೆದುಕೊಂಡು, ಕರೆದೊಯ್ದು. ಒಂದು ಬಸ್ಸು ಜನರಿಂದ ತುಂಬಿದಾಗ ಆತ ಇನ್ನೊಂದು ಬಸ್ ತರಲು ಸೂಚಿಸಿ, ನಿಂತು ಹೋಗುವುದು ತಪ್ಪಿಸಿ, ಕುಳಿತು ಕೊಳ್ಳಲು ಅನುಕೂಲ ಮಾಡಿದ್ದಲ್ಲದೆ ವಿಮಾನದವರೆಗೂ ಬಂದು ಕೈ ಬ್ಯಾಗ್‌ಗಳನ್ನು ಗಗನ ಸಖಿಯ ಕೈಲಿ ಕೊಟ್ಟು "ಇವರಿಗೆ ಸಹಾಯ ಮಾಡಿ" ಎಂದು ಹೋದ ಆತನಿಗೆ ಧನ್ಯವಾದ ಹೇಳಿದೆ.

ಇನ್ನು ಮುಂಬಯಿಯಲ್ಲಿ ಇವನ್ನು ಹಿಡಿದು ಎಷ್ಟು ದೂರ ನಡೆಯಬೇಕೋ ಎಂದು ಚಿಂತಿಸುತ್ತಲೇ ಇಳಿದೆ. ಬಸ್ಸಲ್ಲಿ ಕುಳಿತು ಟರ್ಮಿನಲ್ ಗೇಟ್ ಸಮೀಪವೇ ಇಳಿದು ಮೆಟ್ಟಿಲು ಹತ್ತಿ ಗೇಟ್ ಒಳಗೆ ಕಾಲಿಡುತ್ತಿದ್ದಂತೆಯೇ ಓರ್ವ ವ್ಯಕ್ತಿ ಬಂದು ನಮಸ್ಕರಿಸಿ ಕೈಯೊಳಗಿನ ಬ್ಯಾಗ್‌ಗಳನ್ನು ತಗೊಂಡರು. ಇದೇ ಮೊದಲ ಬಾರಿ ನೋಡಿದ್ದು. ಮುಖದ ಚಹರೆಯಿಂದ

ಜಲಪುರ ಇರಬೇಕು ಎಂದು ಊಹಿಸಿದೆ. ಪೂಜ್ಯ ಅಪ್ಪಾಜಿಯವರ ಬಾಲ್ಯ ಸ್ನೇಹಿತರು. ಪಿ. ಎಂ. ಜಲಪುರ ಅವರು ಬಾಗೇವಾಡಿ ಸಮೀಪದ ಬಸವನ ಹಟ್ಟಿ ಗ್ರಾಮದವರು. ಬಹಳ ಹಿಂದೆಯೇ ಮುಂಬಯಿಗೆ ಹೋಗಿ ರೈಲ್ವೆ ಇಲಾಖೆಯಲ್ಲಿ ಸೇರಿದವರ ಅವರ ಮುಖ ಚಹರೆಯೇ ಇವರಲ್ಲಿ. ಶರಣ. ಪಿ. ಎಂ. ಜಲಪುರರ ಮಗ ಮತ್ತು ಶರಣ. ಆರ್. ಬಿ. ಹೆಬ್ಬಳ್ಳಿಯವರ ಮಗಳನ್ನು ಕೊಟ್ಟು ವಿವಾಹ ಮಾಡಲಾಗಿದೆ. ಇನ್ನೊಂದು ವಿಶೇಷವೆಂದರೆ ಅವರು ಒಂದು ಏರ್‌ಲೈನ್ಸ್‌ದಲ್ಲೇ ಅಧಿಕಾರಿಯಾಗಿರುವುದರಿಂದ ಪೂರ್ತಿ ಒಳಗಿನವರೆಗೆ ಬರಲು ಅವರಿಗೆ ಅವಕಾಶ ಉಂಟು. ಹೀಗಾಗಿ ಗೇಟ್‌ವರೆಗೆ ಬಂದು ಕೈಯೊಳಗಿನ ಸಾಮಾನು ತೆಗೆದುಕೊಂಡು, ಬ್ಯಾಗೇಜ್ ವಿಭಾಗಕ್ಕೆ ಹೋಗಿ ಸೂಟ್‌ಕೇಸ್ ಮುಂತಾದ್ದು ತೆಗೆದುಕೊಂಡು ಕರೆದೊಯ್ದರು. ಅಷ್ಟು ಹೊತ್ತಿಗೆ ಆರ್.ಬಿ. ಹೆಬ್ಬಳ್ಳಿಯವರ ಮಗ ಅಶೋಕ ಕಾರ್ ತೆಗೆದುಕೊಂಡು ಬಂದಿದ್ದರು. ಅವರೊಡನೆ ನಮ್ಮ ಸಂಸ್ಥೆಯ ಮಾತೆ ಮಂಗಳಾದೇವಿ, ಮಾತೆ ಜ್ಞಾನೇಶ್ವರಿ, ಶರಣ. ಮಂಜುನಾಥ ಸಹ ಎ.ಆರ್.ಎಲ್ ಬಸ್ಸಿನಲ್ಲಿ ಪ್ರಯಾಣಿಸಿ ವಿಮಾನ ನಿಲ್ದಾಣಕ್ಕೆ ಬಂದಿದ್ದರು. ಕಾರಿನಲ್ಲಿ ಅಂಬರನಾಥ್ ತಲುಪುವಷ್ಟರಲ್ಲಿ ರಾತ್ರಿ ಒಂದೂವರೆ. ಆರ್. ಬಿ. ಹೆಬ್ಬಳ್ಳಿ ಕಾಯುತ್ತಲಿದ್ದರು. ಸ್ವಾಗತಿಸಿ, ಪೂಜೆ-ಪ್ರಸಾದದ ವ್ಯವಸ್ಥೆ ಮಾಡಿದರು.

ಮರುದಿನ ಭಾನುವಾರ, ಸಾಮೂಹಿಕ ಪ್ರಾರ್ಥನೆ-ಶರಣ ಸಂಗಮದ ದಿವಸ ಹೆಬ್ಬಳ್ಳಿಯವರು ಅಲ್ಲಿ ಸಹ ಬೀಳ್ಕೊಡುಗೆ ಕಾರ್ಯಕ್ರಮ ಏರ್ಪಾಡು ಮಾಡಿದ್ದರು. ಮುಂಬೈ ಸಮ್ಮೇಳನದಲ್ಲಿ ಪರಿಚಿತರಾದ ಶರಣ ಬಂಧುಗಳಲ್ಲದೆ ಪೂನಾದಿಂದ, ಥಾನಾದಿಂದ ಅನೇಕ ಶರಣರು ಆಗಮಿಸಿದ್ದರು. ಪ್ರಾರ್ಥನೆಯ ನಂತರ ಪ್ರವಚನ. ಹೆಬ್ಬಳ್ಳಿಯವರು ಸ್ವಾಗತಿಸಿ, ಪರಿಚಯ ಮಾಡಿಕೊಟ್ಟರಲ್ಲದೆ, ಅಂಬರನಾಥದ ಬ್ರಹ್ಮಕುಮಾರಿ ಸಂಸ್ಥೆಯ ಶಾಖೆಯ ಮುಖ್ಯಸ್ಥೆ ಮಂಗಳಾದೇವೀಜಿ ಅವರಿಂದ ಶಾಲನ್ನು ಹೊದ್ದಿಸಿ ಸತ್ಕರಿಸಿದರು. ಬಂದವರಿಗೆಲ್ಲ ಸಿಹಿ ಮತ್ತು ಪಾನಕ ಕೊಡಲು ಏರ್ಪಾಡು ಮಾಡಿದ್ದರು. ಅನೇಕರು ಭಕ್ತಿಪೂರ್ವಕವಾಗಿ ಕಾಣಿಕೆಗಳನ್ನು ಕೊಟ್ಟರು.

ಬೆಳಗಿನ ಜಾವ ಎರಡು ಗಂಟೆಗೆ ಬ್ರಿಟಿಷ್ ಏರ್‌ವೇಸ್‌ದ BA 138 ವಿಮಾನದಲ್ಲಿ ಪ್ರಯಾಣ ಮುಂದುವರಿಸಬೇಕಿತ್ತು. ರಾತ್ರಿ 10 ಗಂಟೆಗೆಲ್ಲ ಅಲ್ಲಿಗೆ ಹೆಬ್ಬಳ್ಳಿಯವರ ಮಗ ಕರೆದೊಯ್ದರು. ಅವರ ಅಳಿಯ ಜಲಪುರರು ಆಗಮಿಸಿದ್ದರು. ನಮ್ಮೊಡನೆ ಎಷ್ಟು ಲಗೇಜ್ ಒಯ್ಯಬಹುದೆಂಬ ಬಗ್ಗೆ ಒಬ್ಬೊಬ್ಬರು ಒಂದು ರೀತಿಯಲ್ಲಿ ಸಲಹೆ ಕೊಟ್ಟಿದ್ದರು. ನಮ್ಮ ಸಾಮಾನುಗಳಲ್ಲಿ ಮುಖ್ಯವಾಗಿ ಪುಸ್ತಕ, ಕೆಸೆಟ್ಟು, ನನ್ನ ಅಧ್ಯಯನದ ಪುಸ್ತಕ ಪ್ರಧಾನವಾಗಿದ್ದವು. ಅಂತರ ರಾಷ್ಟ್ರೀಯ ಪ್ರಯಾಣಿಕರು ಎರಡು ಸೂಟ್‌ಕೇಸ್ ಸಂಗಡ ಒಯ್ಯಬಹುದು. ಒಂದೊಂದು 32 ಕೆ.ಜಿ.ಯಂತೆ, ಅಂದರೆ 64 ಕೆ.ಜಿ. ಉಚಿತವಾಗಿ ಹೋಗುತ್ತದೆ. ಕೈಯಲ್ಲಿ ಒಯ್ಯುವ ಬ್ಯಾಗ್ ಐದು ಕೆ.ಜಿ.ಯಷ್ಟಿರಬಹುದು. ತಾವೇ ಕೊಂಡೊಯ್ಯುವಂತಿರಬೇಕು. ಇದಕ್ಕೆ ಮೀರಿದರೆ 1 ಕೆ.ಜಿಗೆ ರೂ. 700 ರಂತೆ ಹಣ ಕಟ್ಟಬೇಕು. ಈ ಲೆಕ್ಕದ ಪ್ರಕಾರ ನಮ್ಮ ಬಳಿ ಇದ್ದುದು ಸುಮಾರು ರೂ. 25,000 ರಷ್ಟು ಎಕ್ಸ್‌ಟ್ರಾ ಬ್ಯಾಗೇಜ್. ಹೊರಗಡೆ ಒಂದೆಡೆ



ಕಾರು ನಿಲ್ಲಿಸಿ ಸಾಮಾನು ಅತಿ ಅವಶ್ಯವಿರುವುದು ಮಾತ್ರ ಒಯ್ಯೋಣ ಎಂದು ಸೂಟ್‌ಕೇಸಲ್ಲಿ ಜೋಡಿಸಲೆಂದು ಬಿಚ್ಚುತ್ತೇವೆ. ಒಳಗೆ ಬ್ರಹ್ಮಾಂಡವೇ ಅಡಗಿದೆ ! ರಾಗಿ ಮಾಲ್ಟ್, ಜೋಳದ ಹಿಟ್ಟು, ರಾಗಿ ಹಿಟ್ಟು, ಚಟ್ನಿ ಪುಡಿಗಳು, ಕಾರದ ಪುಡಿ, ಇಡ್ಲಿ ರವೆ ಇತ್ಯಾದಿ ಇತ್ಯಾದಿ. ಆಗಲೇ ಒಂದು ಸಲ ಕಣ್ಣಾಡಿಸಿ ಶಿಷ್ಯರು ಮತ್ತು ಪ್ರೀತಿಯ ಭಕ್ತರು ಇಟ್ಟಿದ್ದ ಸಾಮಾನುಗಳನ್ನೆಲ್ಲ ಸೂಟ್‌ಕೇಸ್‌ನಿಂದ ಎತ್ತಿ ಹಾಕಿದ್ದೆ. ಕಾರದ ಮಂಡಕ್ಕಿ, ಹುರಿದ ಅವಲಕ್ಕಿ, ಜಾಮೂನು ಎಲ್ಲ ತಂದಿದ್ದರು. ತೆಳ್ಳನೆಯ ಜೋಳದ ರೊಟ್ಟಿ, ಶೇಂಗಾ ಚಟ್ನಿ ತಂದು ತುಂಬಾ ಚೆನ್ನಾಗಿ ಮಾಡಿಕೊಂಡು ಬಂದಿರುವುದಾಗಿಯೂ, ಒಯ್ಯಲೇಬೇಕೆಂದು ಆಗ್ರಹಿಸಿದ್ದರು. "ನೋಡ್ರಿ, ಊಟ-ತಿಂಡಿಗಾಗಿ ನಾನು ಹೋಗುತ್ತಿಲ್ಲ. ಅಲ್ಲಿ ಎಲ್ಲಾ ಸಿಗುತ್ತೆ. ಇಂಡಿಯನ್ ಸ್ಟೋರ್ಸ್‌ಗಳಲ್ಲಿ ನಮ್ಮ ದೇಶದ ಎಲ್ಲ ಸಾಮಾನು ಇರುತ್ತವೆ. ನಾನು ಇಲ್ಲಿಂದ ಒಯ್ಯುವುದು ಹಾಸ್ಯಾಸ್ಪದವಲ್ಲವೆ ? ನನ್ನ ಅಧ್ಯಯನದ ಪುಸ್ತಕ, ಇತರರಿಗೆ ಬೇಕಾದ ಮಾರಾಟದ ಪುಸ್ತಕ, ಕೆಸೆಟ್ಟು ಒಯ್ಯುವುದು ಅತಿ ಮುಖ್ಯ" ಎಂದು ಗದರಿಕೊಂಡೇ ಹೇಳಿದ್ದೆ. ಆದರೂ ಹೆಣ್ಣು ಮಕ್ಕಳು ಒಬ್ಬರಿಗೊಬ್ಬರು ಪಿಸುಗುಟ್ಟಿ ಮಾತಾಡಿಕೊಂಡು 'ಮಾತಾಜಿಯವರಿಗೆ ತಿಳಿಸಬೇಡಿರಿ" ಎಂದು ಮುಂಬೈಗೆ ಕಳಿಸಲು ಬಂದವರಿಗೆ ಸೂಚನೆ ನೀಡಿದ್ದರು. ಮತ್ತೆ ಎದುರಿಗೆ ನಿಂತು ಈ ಎಲ್ಲಾ ಸಾಮಾನುಗಳನ್ನು ಅಲ್ಲೇ ಉಳಿಸಿ, ಅವನ್ನೆಲ್ಲ ವಾಪಸ್ಸು ಒಯ್ಯುವಂತೆ ಹೇಳಿ ನಮ್ಮೊಡನೆ ತರಬೇಕಾದ ಸಾಮಾನು ಹೊಂದಿಸುವಷ್ಟರಲ್ಲಿ ಸಾಕು ಸಾಕಾಯಿತು. ಅತಿ ಭಕ್ತಿಯೂ ಎಷ್ಟು ತೊಂದರೆ ಕೊಡುತ್ತದೆ ಎಂಬುದಕ್ಕೆ ಇದು ಉತ್ತಮ ಉದಾಹರಣೆ.

ಬೆಂಗಳೂರಿನಿಂದ ಬರಬೇಕಾಗಿದ್ದ ರಾಧಿಕಾ ಇನ್ನೂ ಬಂದಿರಲಿಲ್ಲ. ಬೆಂಗಳೂರಿಗೆ ಫೋನ್ ಮಾಡಿಸಿದಾಗ ಸಹಾರಾದಲ್ಲಿ ಹೊರಟಿರುವುದಾಗಿ ಹೇಳಿದರು. ಅಂದು ಮಳೆ ಮೋಡವಿದ್ದ ಕಾರಣ ಇಳಿಯಲು ವಿಮಾನಕ್ಕೆ ತುಸು ಅನಾನುಕೂಲವಾಗಿ ಮೇಲೆ ಬಹಳ ಹೊತ್ತು ಸುತ್ತಾಡಿ ಇಳಿಯಿತಂತೆ. ಡೊಮೆಸ್ಟಿಕ್ ಏರ್‌ಪೋರ್ಟ್‌ದಿಂದ ಅಂತರರಾಷ್ಟ್ರೀಯ ಛತ್ರಪತಿ ಶಿವಾಜಿ ಏರ್ ಪೋರ್ಟ್‌ಗೆ ಒಳಗೇ ರಸ್ತೆ ಇದ್ದು, ರಾಧಿಕಾ ಅವರು ಬಂದರು. ಅಷ್ಟರಲ್ಲಿ ನಾನು ಒಳಗೆ ಹೋಗಿ ಲಗೇಜ್ ತೂಕ ಮಾಡಿಸಿ, ಬೋರ್ಡಿಂಗ್ ಕಾರ್ಡ್ ಸಹ ಪಡೆದು, ಕೆಳ ಅಂತಸ್ತಿನಲ್ಲಿರುವ ಲಾಂಜ್‌ನಲ್ಲಿ ಕಾಯುತ್ತ ಕುಳಿತಿದ್ದೆ. ನಾನು ಹೊರಗೇ ಇರಲು ತಡವಾಗುತ್ತದೆ ಎಂಬ ಆತಂಕ. ಅವರನ್ನು ನೋಡಿ, ಗುರುತಿಸುವವರು ನಮ್ಮಲ್ಲಿ ಯಾರೂ ಇರಲಿಲ್ಲ. ಅಷ್ಟರಲ್ಲಿ ಒಳಬಂದ ಅವರು ಕಾವಿಬಟ್ಟೆಯ ಮಂಗಳಾಳನ್ನು ಗಮನಿಸಿ ಪರಿಚಯ ಮಾಡಿಕೊಂಡಿದ್ದು ಸಮಯಕ್ಕೆ ಸರಿಯಾಗಿ ಬ್ರಿಟಿಷ್ ಏರ್‌ವೇಸ್ ವಿಮಾನವು ಲಂಡನ್ ಮುಖವಾಗಿ ಹೊರಟಿತು. ಬೆಳಗಿನ ಜಾವ ಎರಡುಗಂಟೆ ಹದಿನೈದು ನಿಮಿಷಕ್ಕೆ ವಿಮಾನ ಹತ್ತುತ್ತೇವೆ. ಲಂಡನ್‌ಗೆ ಹೋಗಲು 9 ಗಂಟೆ 50 ನಿಮಿಷ ಹಿಡಿಯುತ್ತದೆ. ಸ್ವಲ್ಪ ಹೊತ್ತಿನಲ್ಲೇ ಬೆಳಕಾಗುವುದರಿಂದ ನಾವು ಪೂರ್ತಿ ಹಗಲಿನಲ್ಲೇ ಪ್ರಯಾಣ ಮಾಡುವಂತಾಗುತ್ತದೆ. ಅಲ್ಲಿಂದ ಅಂದರೆ ಪೂರ್ವದಿಂದ ಬರುವಾಗ ಒಂದು ದಿನ ಹೆಚ್ಚಾಗುತ್ತದೆ. ಇಲ್ಲಿಂದ ಹೋಗುವಾಗ ಒಂದು ದಿನವನ್ನು ಕಳೆದುಕೊಂಡಂತಾಗುತ್ತದೆ. ಲಂಡನ್ನಿನ ಹೀಥ್ರೋ

ಏರ್‌ಪೋರ್ಟ್‌ಗೆ, ಬರುವಷ್ಟರಲ್ಲಿ ನಮ್ಮ ಗಡಿಯಾರವನ್ನು ನಾಲ್ಕೂವರೆ ಗಂಟೆ ಕಾಲ ಮುಂದಕ್ಕೆ ಓಡಿಸಬೇಕಾಗುತ್ತದೆ. ಮುಂಬೈದಿಂದ ಲಂಡನ್‌ವರೆಗೆ BA 138 ವಿಮಾನದಲ್ಲಿ ಬಂದೆವು. ಮುಂದೆ ಲಂಡನ್‌ನಿಂದ ಚಿಕಾಗೋಗೆ ಬ್ರಿಟಿಷ್ ಏರ್‌ವೇಸ್‌ನ BA 295 ವಿಮಾನವನ್ನು ಹತ್ತಬೇಕಾಗಿತ್ತು. 4 ನೇ ನಂಬರ್ ಟರ್ಮಿನಲ್‌ದಲ್ಲಿ ಇಳಿದು 5ನೆಯ ಟರ್ಮಿನಲ್‌ದಲ್ಲಿ ಇರುವ ವಿಮಾನದ ಬಳಿಗೆ ಹೋಗಲು ಸಾಕಷ್ಟು ದೂರ ಕ್ರಮಿಸಬೇಕು. ಅದಕ್ಕಾಗಿ ಟ್ರೇನ್‌ಗಳು ಸಹ ಒಳಗೇ ಇವೆ. ಸುಂದರವಾದ ಚಿಕ್ಕ ಚಿಕ್ಕ ಟ್ರೇನ್‌ಗಳವು - ನಡೆಯಲಾಗದ ಅಂಗವಿಕಲರಿಗೆ, ವಯಸ್ಕರಿಗೆ ತಳ್ಳುವ ಗಾಲಿ ಕುರ್ಚಿಗಳೂ ಉಂಟು ಮತ್ತು ಒಳಗೇ ಸಂಚರಿಸುವ ಕಾರಿನ ತರಹದ ವಾಹನಗಳೂ ಉಂಟು. ಶುಲ್ಕ ತುಂಬಿದರೆ ಎರಡೂ ಲಭ್ಯ.

ಲಂಡನ್‌ನಲ್ಲಿ ಇಳಿದಾಗ ಬೆಳಗಿನ 7-35 : ಹೊಂಬಿಸಿಲು ಬಿದ್ದಿತ್ತು. ಕೆಲವೊಂದು ಫ್ಲೈಟ್‌ಗಳ ಮಧ್ಯೆ ತುಂಬ ಸಮಯವಿದ್ದಾಗ ನಗರ ವೀಕ್ಷಣೆಗೆ ಅನುಕೂಲ ಉಂಟು. ನಮಗೆ ಸಮಯ ಜಾಸ್ತಿ ಇರಲಿಲ್ಲ ಮತ್ತು ಆ ಯೋಜನೆಯೂ ಇರಲಿಲ್ಲ. ಚಿಕಾಗೋ ಕಡೆ ಹೊರಡುವ ವಿಮಾನ ಸರಿಯಾಗಿ ಬೆಳಿಗ್ಗೆ 9-20 ಗಂಟೆಗೆ ಹೊರಟಿತು. ಮುಂದೆ 8 ಗಂಟೆ 35 ನಿಮಿಷ ಪ್ರಯಾಣ. ಚಿಕಾಗೋದಲ್ಲಿ ಬಂದು ಇಳಿದಾಗ ಬೆಳಿಗ್ಗೆ 11-55 ಗಂಟೆ. ಲಂಡನ್‌ಗಿಂತ ಸಮಯದಲ್ಲಿ ತುಂಬಾ ಬದಲಾವಣೆ ಇತ್ತು. ಪುನಃ ಗಡಿಯಾರವನ್ನು 6 ತಾಸುಗಳ ಕಾಲ ಬದಲಿಸಬೇಕು. ಅಮೆರಿಕಾದಲ್ಲಿ ಇಳಿದ ಮೊದಲ ಏರ್‌ಪೋರ್ಟ್‌ದಲ್ಲಿ ಲಗ್ಗೇಜ್ ಚೆಕ್ಕಿಂಗ್ ಇರುತ್ತದೆ. ಕೆಲವೊಮ್ಮೆ ಕಸ್ಟಮ್ಸ್‌ದಲ್ಲಿ ತುಂಬಾ ಕಿರಿಕಿರಿ ಮಾಡುತ್ತಾರಂತೆ. ನಮಗೇನೂ ಹೆಚ್ಚಿನ ಸಮಯ ಹಿಡಿಯಲಿಲ್ಲ. ಬ್ಯಾಗೇಜ್ ಪರೀಕ್ಷಿಸಿ ಪುನಃ ತಮ್ಮ ವಶಕ್ಕೆ ತೆಗೆದುಕೊಳ್ಳುತ್ತಾರೆ. ಕೈಯಲ್ಲಿರುವ ಬ್ಯಾಗ್‌ಗಳನ್ನೂ ಸಹ ಕೂಲಂಕುಷವಾಗಿ ತನಿಖೆಗೆ ಒಳಪಡಿಸುತ್ತಾರೆ. ಸೆಪ್ಟಂಬರ್ 11 ರ ಘಟನೆಯ ನಂತರವಂತೂ ಅಮೆರಿಕನ್ನರಿಗೆ ತಮ್ಮ ನೆರಳೇ ತಮಗೆ ಭಯವನ್ನು ಉಂಟು ಮಾಡುವ ಪರಿಸ್ಥಿತಿ ಇದೆ. ಹೀಗೆ ಸಮಗ್ರ ತನಿಖೆಯಾದ ನಂತರ ಡೊಮೆಸ್ಟಿಕ್ ಟರ್ಮಿನಲ್‌ಗೆ ಹೋಗಿ ಅಮೆರಿಕನ್ ಏರ್‌ಲೈನ್ಸ್ ಹಿಡಿಯಬೇಕು. ಚಿಕಾಗೋದಿಂದ ಆಸ್ಟಿನ್‌ಗೆ, ಬೆಂಗಳೂರಿಂದ ಡೆಲ್ಲಿಗೆ ಇರುವಷ್ಟು. ದೂರ ಸುಮಾರು ಎರಡೂವರೆ ತಾಸು ಪ್ರಯಾಣ. ಮಧ್ಯಾಹ್ನ 2 ಗಂಟೆ 50 ನಿಮಿಷಕ್ಕೆ AA 2075 ಏರ್‌ಲೈನ್ಸ್‌ದಲ್ಲಿ ಕುಳಿತು ಸಂಜೆ 5 ಗಂಟೆ 27 ನಿಮಿಷಕ್ಕೆ ಆಸ್ಟಿನ್‌ದಲ್ಲಿದ್ದೆವು. ಬೆಂಗಳೂರಿಂದ ಮುಂಬಯಿ 1-35 ನಿಮಿಷ, ಮುಂಬಯಿಯಿಂದ ಲಂಡನ್ 9 ಗಂಟೆ 50 ನಿಮಿಷ, ಲಂಡನ್‌ದಿಂದ ಚಿಕಾಗೋ 8-35 ನಿಮಿಷ, ಚಿಕ್ಯಾಗೋದಿಂದ ಆಸ್ಟಿನ್ 2 ಗಂಟೆ 35 ನಿಮಿಷ. ಮಧ್ಯೆ ಮಧ್ಯೆ ಹತ್ತುವುದು, ಇಳಿಯುವುದು, ಓಡಾಟ ಬಹಳವಿರುತ್ತದೆ. ಬ್ರಿಟಿಷ್ ಏರ್‌ವೇಸ್‌ದ ವಿಮಾನಗಳಲ್ಲಿ ನಮ್ಮ ಎದುರಿಗೆ ಚಿಕ್ಕ ಚಿಕ್ಕ ಟಿ.ವಿಗಳಿದ್ದು ಅವರಲ್ಲಿ ಅನೇಕ ಸಿನಿಮಾ, ಕಾರ್ಟೂನ್ ಚಿತ್ರ ಇರುತ್ತವೆ. ಒಂದು ವಿಶೇಷವೆಂದರೆ ಒಂದು ಮ್ಯಾಪ್ ಇದ್ದು ನಮ್ಮ ವಿಮಾನ ಯಾವ ದೇಶ, ಸಮುದ್ರದ ಮೇಲೆ ಹಾರುತ್ತಿದೆ ಎಂಬುದನ್ನು ನಿರಂತರವಾಗಿ ತೋರಿಸುವುದೇ



ಅಲ್ಲದೆ ಹೊರಗಿನ ತಾಪಮಾನ (temperature) ಏನು ? ಎಷ್ಟು ಎತ್ತರದಲ್ಲಿ ವಿಮಾನ ಹಾರುತ್ತಿದೆ ? ಹೊರಗೆ ಗಾಳಿಯವೇಗ ಏನಿದೆ ಎಂಬುದನ್ನು ತೋರಿಸುತ್ತದೆ. ಒಂದೆರಡು ಸಲ ಹೊರಗೆ ಗಾಳಿಯ ವೇಗ ಬಹಳ ಇದ್ದು ವಿಮಾನವು ಭೇದಿಸುವಾಗ ವಿಮಾನ ಅತ್ತ ಇತ್ತ ಹೊಯ್ದಾಡಿದಾಗ ಭಯವಾಗುವುದುಂಟು. ಅಂಥ 2-3 ಸಂದರ್ಭಗಳಲ್ಲಿ ಸೀಟ್ ಬೆಲ್ಟ್ ಕಟ್ಟಿಕೊಳ್ಳಲು ಗಗನ ಸಖಿಯರು ಅವಸರಿಸಿದರು. ಮುಂಬೈ-ಲಂಡನ್ ಮಧ್ಯೆ ಸಾಗುವಾಗ ಬೆಳಕಾಗುತ್ತಲೇ ನಾನು ಸ್ಪಂಜ್ ಬಾತ್ ಮಾಡಿ, ಬಟ್ಟೆ ಬದಲಾಯಿಸಿ ಇಷ್ಟಲಿಂಗ ಪೂಜೆ ಮಾಡಿಕೊಂಡೆನು. ಶುದ್ಧ ಸಸ್ಯಾಹಾರ ಎಂದು ನಮ್ಮ ಟಿಕೆಟಲ್ಲಿ ಕಾಣಿಸಿದ್ದರಿಂದ ನನಗೆ ಕೊಟ್ಟ ತಿಂಡಿ, ಊಟಗಳ ಪ್ಯಾಕ್ ಮೇಲೆ ನನ್ನ ಹೆಸರು Mathe Veg., ಎಂದು ಸ್ಲಿಪ್ ಅಂಟಿಸಲಾಗಿತ್ತು. ಸಸ್ಯಾಹಾರಿ ತಿಂಡಿ-ಊಟಗಳನ್ನೇ ಕೊಡುತ್ತಿದ್ದರು. ಹೀಗಾಗಿ ಊಟ ತಿಂಡಿಯ ಸಮಸ್ಯೆ ಎದುರಾಗುವುದಿಲ್ಲ.

ಈ ಸಲದ ಪ್ರಯಾಣದಲ್ಲಿ ನನಗೆ ಕಿಟಕಿಯ ಪಕ್ಕ ಸೀಟು ಸಿಕ್ಕಿರಲಿಲ್ಲ. ಹೀಗಾಗಿ ಹೊರಗಿನ ದೃಶ್ಯ ನೋಡಲು ನನಗೆ ಆಗಲಿಲ್ಲ. ಚಿಕಾಗೋದಿಂದ ಆಸ್ಟಿನ್‌ಗೆ ಬರುವಾಗ ಮಾತ್ರ ಕಿಟಕಿ ಪಕ್ಕ ಸಿಕ್ಕಿತು. ಮತ್ತು ಶುಭ್ರವಾದ ಬಿಸಿಲು ಬಿದ್ದಿತ್ತು. ಬಿಳಿಯ ಮೋಡಗಳ ಮೇಲೆ ನಮ್ಮ ವಿಮಾನ ಹಾರುವಾಗ ಹೊರಗೆ ನೋಡಿದರೆ ಹಂಸ ಪಕ್ಷಿಗಳ ಮೇಲೆ ನಾವು ರೆಕ್ಕೆ ಕಟ್ಟಿಕೊಂಡು ತೇಲುತ್ತಾ ಹೋದಂತೆ ಭಾಸವಾಗುತ್ತದೆ. ಈ ಅನುಭವವನ್ನು 1981ರಲ್ಲಿ ಅಮೆರಿಕಾಯಾನ ಕೈಗೊಂಡಾಗ ಬರೆದ ಒಂದು ಪದ್ಯವನ್ನು ಪುನಃ ಉದಾಹರಿಸುವ ಮೂಲಕ ವಿವರಿಸುತ್ತೇನೆ.

ಏರುತ ಏರುತ ಮುಗಿಲನು ಮೆಟ್ಟುತ ಮೇಲೇರಲು ನಾವು
ತೋರುವುದಲ್ಲಿ ಹಾಲಿನ ಶರಧಿಯು ನಮ್ಮಯ ಅಡಿಯಲ್ಲಿ ॥ಪ॥
ಸೂರ್ಯನ ಹೊನ್ನಿನ ಕಿರಣಗಳಲ್ಲಿ ಚೆಲ್ಲಿರೆ ಬೆಡಗಿನ ಸೊಬಗಾ
ನೂತನ ಲೋಕವು ಮೆರೆಯುತ ತಾನಿರೆ ಮಾತು ಮೂಕವಾಗುವುದಿಲ್ಲಿ ॥ಅ.ಪ॥

ಹಿಮದ ಬಣ್ಣದ ಹಂಸೆಯ ಹಿಂಡು ತೇಲುತ ತಾನಿಹುದೋ
ಬಿಳಿಯಾನೆಗಳು ಒಂದರ ಹಿಂದೊಂದು ಹಮ್ಮಿ ಹೊರಟಿಹವೋ
ಮೇಲಿಹ ನೀಲಿಯ ಬಾನಿನ ಅಂಗಳ ಶರಧಿಯ ಪ್ರತಿಬಿಂಬ
ಇರುಳಿನ ಆಗಸ ಹೊನ್ನಿನ ಹೂವಿನ ರೇಶಿಮೆ ಜರಿ ಸೀರೆ ॥1॥

ಕೋಲನು ಇರಿಸಿ ಮೊಸರನು ಮಥಿಸಲು ತಕತಕ ಕುಣಿಯುವುದೆಂತೋ
ಅಂತೆಯೇ ಮೇಘಗಳ್ ಸ್ಪರ್ಧಿಸಿ ನಡೆವುದು ಕಣ್ಣಿಗೆ ಕಟ್ಟುವುದು
ಅರಳೆಯ ಉಂಡೆಯ ಹಿಂಜುತ ಎಸೆಯುತ ಯಾರೀ ಆಟವನಾಡುವರೋ ?
ಮುಗಿಲಿನ ಕೆಳಗಿನ ಜನರಿಗೆ ಸೂರ್ಯನ ಮೊಗವನು ಮುಚ್ಚುವರೋ ? ॥2॥

ನಂತರ ಬದುಕನು ಮುಚ್ಚಲು ಎಳಸುವ ಕಷ್ಟದ ಹಿಂಡಂತೆ,
ಸೂರ್ಯನ ಮೊಗಕವಕುಂಠನವೆಳೆಯುವ ಕಾರ್ಯವು ನಡೆದಿಹುದೋ ?
ಮೋಡದ ಆಚೆಯ ಹೊನ್ನಿನ ಲೋಕವು ತತ್ತ್ವವ ಸಾರುತಿದೆ;
ತೋರುವ ಅಡಗುವ ಲೋಕದ ಆಚೆಯ ಸತ್ಯವ ತೋರುತಿದೆ ॥3॥

ಶರಣರ ಬದುಕಿನ ತೆರೆಗಳ ಆಚೆ ಉಜ್ವಲ ಬೆಳಕೊಂದು
ಲೋಕದ ಕಣ್ಣಿಗೆ ಕಾಣದ ತೆರದಲಿ ಬೆಳಗುತ ತಾನಿಹುದು
ತೋರಿಕೆಯಾಚೆಗೆ ಇರುವಿಕೆಯೊಂದಿದೆ ಅದುವೆ ನಿಜ ತತ್ವ
ವಿಶ್ವದ ಲೀಲೆಯ ಹಿಂದೆ ತಾನಿಹುದು ಸತ್-ಚಿತ್-ಆನಂದ. ॥4॥

ಕೆಳಗೆ ನೋಡಿದರೆ ಭೂಮಿಯ ಸುಂದರ ದೃಶ್ಯ ತೋರಿಬರುತ್ತಿತ್ತು. ಹಿಂದಿನ ದಿನವೇ ಮಳೆಯಾದ್ದರಿಂದ ಅಲ್ಲಲ್ಲೇ ನೀರುನಿಂತಿತ್ತು. ಅಲ್ಲಲ್ಲೇ ಕಾಡುಗಳು ಮಾತ್ರವಲ್ಲದೆ, ಹಸಿರು ವಲಯ (green belt) ಕ್ಕಾಗಿ ಬೆಳೆಸಿದ ಗಿಡಗಳ ಸಮೂಹ ಕಾಣಬರುತ್ತಿತ್ತು. ಹೆದ್ದಾರಿಗಳಲ್ಲಿ ಸಂಚರಿಸುವ ವಾಹನಗಳ ಸಾಲು ಇರುವೆಗಳ ಸರಿದಾಟದಂತೆ ಕಂಡರೆ, ಮಧ್ಯೆ ಮಧ್ಯೆ ಹೊಲಗಳು ಅಚ್ಚುಕಟ್ಟಾದ ಬದಿಗಳಿಂದ ಶೋಭಿಸುತ್ತಿದ್ದವು. ನಗರ ಪ್ರದೇಶದ ರಸ್ತೆಗಳು ಮಾತ್ರವಲ್ಲ ಗ್ರಾಮೀಣ ಪ್ರದೇಶಗಳ ರಸ್ತೆಗಳು ಸಹ ಅಷ್ಟೇ ಅಚ್ಚುಕಟ್ಟಾಗಿದ್ದವು. ಮೇಲಿನಿಂದ ನೋಡಿದಾಗ ಮನೆಗಳು ಆಟಿಕೆಯ ಮನೆಗಳಂತೆ ಕಾಣಬರುತ್ತಿದ್ದವು. ಪ್ರತಿಯೊಂದರಲ್ಲೂ ಅಚ್ಚುಕಟ್ಟು, ಶಿಸ್ತು.

## ಆಸ್ಟಿನ್‌ನಲ್ಲಿ

ಸಂಜೆ 5-27 ನಿಮಿಷಕ್ಕೆ ಬರಬೇಕಾದ AA 2075 ಆಸ್ಟಿನ್ ವಿಮಾನ ನಿಲ್ದಾಣದಲ್ಲಿ ಮೊದಲೇ ಬಂದು ಇಳಿಯಿತು. ಭೇಟಿಯಾಗಲು ನಮಗಿಂತಲೂ ಹೆಚ್ಚು ಕಾತುರರಾಗಿದ್ದ ಯೋಗೀಶ್ವರಿ ಅವರು ಧಾವಿಸಿ ಬಂದು ಹೂಗುಚ್ಛ ನೀಡಿ, ಗುಂಡು ಮಲ್ಲಿಗೆ ಮಾಲೆ ಹಾಕಿ ಸ್ವಾಗತಿಸಿದರು. ಅಲ್ಲಿ ಎಲ್ಲಿಂದ ಬಂದಿತು ಮಲ್ಲಿಗೆ ಹೂವೂ ಎಂದು ಆಶ್ಚರ್ಯ ಪಡಬೇಡಿ. ಬೆಂಡಿನಿಂದ ಮಾಡಿದ ಮಲ್ಲಿಗೆ ಮಾಲೆಗಳನ್ನು ಬೆಂಗಳೂರಿಂದಲೇ ತಂದು ಇಟ್ಟುಕೊಂಡಿದ್ದರು. ನಾವು ಬ್ಯಾಗೇಜ್ ತೆಗೆದುಕೊಳ್ಳುವಾಗಲೇ ಶ್ರೀಮತಿ ರಾಣಿ ಸತೀಶ್ ಅವರ ಸಂಬಂಧಿಗಳಾದ ಜ್ಯೋತಿ ಮತ್ತು ವಿಶ್ವಾಸ್ ದಂಪತಿಗಳು ಆಗಮಿಸಿ ಹೂಗುಚ್ಛ ನೀಡಿ ಸ್ವಾಗತಿಸಿದರು. ದಿ. 14-6-2003 ರ ಬೆಳಗ್ಗೆ ಶ್ರೀಮತಿ ರಾಣಿ ಸತೀಶ್ ಫೋನ್ ಮಾಡಿ, ಶುಭಾಶಯ ಕೋರಿ, ಇಲ್ಲಿ ಅವರ ಆತ್ಮೀಯ ಬಂಧುಗಳು ಇರುವುದಾಗಿ ಹೇಳಿದ್ದರು.

ಆಸ್ಟಿನ್ ಏರ್‌ಪೋರ್ಟ್ ಬೆಂಗಳೂರು ವಿಮಾನ ನಿಲ್ದಾಣದಂತೆ ಇದೆ. ಆದರೆ ಅದಕ್ಕಿಂತಲೂ ದೊಡ್ಡದು. "ತುಂಬಾ ಆಯಾಸವಾಯಿತಾ" ಎಂದು ಯೋಗೀಶ್ವರಿಯವರು ಕೇಳಿದರು. " ಎಂಟು ದಿನ ಪೂರ್ಣ ವಿಶ್ರಾಂತಿ ಪಡೆಯಿರಿ " ಎಂದರು. ನಿಜಕ್ಕೂ ನನಗೆ ಆಯಾಸ ಏನೂ ಆಗಿರಲಿಲ್ಲ. ಬರೀ ಬೆಂಗಳೂರಲ್ಲಿ ಮೆಜೆಸ್ಟಿಕ್, ಆನಂದರಾವ್ ಸರ್ಕಲ್ ಮುಂತಾದ ಕಡೆ ಕಾರಲ್ಲಿ ಹೋಗಿ ಬಂದರೆ ಕಣ್ಣು ಮೂಗು, ಗಂಟಲು ವಾಹನಗಳ ಹೊಗೆಯಿಂದ ಆವರಿಸಿಕೊಂಡು ಉರಿಯುತ್ತಿರುತ್ತವೆ. ಮತ್ತೊಬ್ಬರು ಹೇಳಿದರು "ಅಲ್ಲಿಗೂ ಇಲ್ಲಿಗೂ ಸುಮಾರು 10 ಗಂಟೆ ವ್ಯತ್ಯಾಸ. ಅಲ್ಲಿಯ ಹಗಲು-ರಾತ್ರಿಗಳಿಗೆ ಶರೀರ ಚಕ್ರ ಹೊಂದಿಕೊಂಡಿರುತ್ತದೆ, ದಿನಕ್ಕೆ 1 ಗಂಟೆಯಂತೆ ಕನಿಷ್ಟ 110 ದಿವಸ ಹಿಡಿಯುತ್ತದೆ" ಎಂದರು. ನನಗೆ ಏನೂ ಅನ್ನಿಸಲಿಲ್ಲ. ಏನೂ ದಣಿವಾಗಿರಲಿಲ್ಲ. ರಾಧಿಕಾ ಅವರು ನನ್ನ ಎರಡು ಕೈ





ಚೀಲಗಳಲ್ಲಿ ಒಂದನ್ನು ತಾವು ತರುತ್ತಿದ್ದರಿಂದ ನನಗೆ ಭಾರವೂ ಇರಲಿಲ್ಲ. ಜೊತೆಗೆ ನಮ್ಮ ಶಿಷ್ಯರು ಗುಟ್ಟಾಗಿ ಇಟ್ಟಿದ್ದ ದ್ರಾಕ್ಷಿ, ಗೋಡಂಬಿ, ಉತ್ತುತ್ತಿಯನ್ನು ಮುಂಬಯಿಯಲ್ಲೇ ಕೊಟ್ಟು ಭಾರ ಕಳೆದುಕೊಂಡಿದ್ದೆ.

ಮುಂಬಯಿಯಿಂದ ದಿ. 17-6-2003 ರ ಬೆಳಗಿನ ಜಾವ ಹೊರಟು, ಸಂಜೆ ಐದೂವರೆ (ಇಲ್ಲಿಯ ಸಮಯ)ಗೆ ತಲುಪಿದೆ. ದಿ. 22-6-2003 ಭಾನುವಾರ ಸಂಜೆ ಯೋಗೀಶ್ವರಿಯವರು ಬಸವ ಜ್ಯೋತಿ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದರು. ಶ್ರೀಮತಿ ರಾಣಿ ಸತೀಶ್ ಅವರ ಬಂಧುಗಳಾದ ಜ್ಯೋತಿ ಮತ್ತು ವಿಶ್ವಾಸ್, ಹಾಸನದ ರಾಷ್ಟ್ರೀಯ ಬಸವ ದಳದ ಗೌರವಾಧ್ಯಕ್ಷರಾಗಿ ಬಹಳ ಸೇವೆ ಸಲ್ಲಿಸಿದ್ದ ಶರಣ. ರಾಜಶೇಖರಪ್ಪನವರ ಮಗಳು ಸುಚೇತಾ ಮತ್ತು ಅವರ ಪತಿ ಶರಣ. ಕೋ. ಚನ್ನಬಸಪ್ಪನವರ ಮಗ ಪ್ರಭುದೇವ್ ಅವರು ಪ್ರಾರ್ಥನೆ-ಪ್ರವಚನಗಳಲ್ಲಿ ಭಾಗಿಗಳಾದರು. ಶರಣ. ಪ್ರಭು ಅವರ ಮಗಳು ಮತ್ತು ದೊಡ್ಡವರು ತಮಗಿದ್ದ ಕೆಲವು ಸಂದೇಹಗಳನ್ನು ಪ್ರಶ್ನೆಗಳ ಮೂಲಕ ಬಗೆಹರಿಸಿಕೊಂಡರು. ನಂತರ ಎಲ್ಲರಿಗೂ ಪ್ರಸಾದ ವಿತರಣೆಯಾಯಿತು.

ಯುನೈಟೆಡ್ ಸ್ಟೇಟ್ಸ್ ಅಮೆರಿಕಾದ ಒಂದು ರಾಜ್ಯ ಟೆಕ್ಸಾಸ್. ಇದರಲ್ಲಿ ಒಂದು ಪ್ರಮುಖ ಪಟ್ಟಣ, ಆಸ್ಟಿನ್. ಇದರಲ್ಲಿ ಮಧ್ಯಮ ಮೇಲ್ವರ್ಗದವರೇ ವಾಸಿಸುವ ಸುಂದರ ಬಡಾವಣೆಯಲ್ಲಿ ಯೋಗೀಶ್ವರಿಯವರ ಮನೆ. ಸುಮಾರು 60 ಮತ್ತು 100 ಅಡಿಯ ನಿವೇಶನದಲ್ಲಿ 4 ಬೆಡ್ ರೂಂಗಳಿರುವ ಸುಂದರ ಮನೆ. ಹಿಂದೆ ಹಿತ್ತಿಲಿನಲ್ಲಿ ದಾಸವಾಳ, ಗುಲಾಬಿ, ಕಣಗಿಲೆ ಮುಂತಾದ ಹೂಗಿಡ ಜೊತೆಗೆ ಅಂಜೂರ, ದಾಳಿಂಬೆ ಗಿಡಗಳು. ಮುಂದೆ ಸುಂದರವಾದ ಹುಲ್ಲು ಹಾಸು ಮಧ್ಯೆ ಮಧ್ಯೆ ಹೂಗಿಡಗಳು ಕಣಗಿಲೆ, ಮಲ್ಲಿಗೆ, ಕ್ರೇಪ್ ಫ್ಲವರ್, ಬೋಗನ್ ವಿಲ್ಲಾ. ಶರಣೆ ಸುಜಯಾದೇವಿ ಬಂದಾಗ ಸಾಕಷ್ಟು ತೋಟವನ್ನು ಕೃಷಿ ಮಾಡಿದ್ದಾರಂತೆ.

ಇಲ್ಲಿಯ ನಗರ ವ್ಯವಸ್ಥೆ ತೀರಾ ಅಚ್ಚುಕಟ್ಟು, ಜನರು ಅದನ್ನು ಪಾಲನೆ ಮಾಡುವ ನಿಷ್ಠೆ ಹೊಂದಿರುವುದು ಆಶ್ಚರ್ಯ ಮತ್ತು ಆನಂದಕರ. ರಸ್ತೆಗಳು ಅತಿ ಸ್ವಚ್ಛ, ಸ್ವಲ್ಪ ಉರುಟಾಗಿರುತ್ತವೆ. ಏಕೆಂದರೆ ಹಿಮಪಾತವಾದಾಗ ರಸ್ತೆ ನುಣುಪಿದ್ದರೆ ಗಾಲಿಗಳು ಜಾರುವ ಸಂಭವ ಜಾಸ್ತಿ ಎಂದು. ಇಲ್ಲಿ ಎಡಗಡೆ ಡ್ರೈವಿಂಗ್. ಇಲ್ಲಿ ಡ್ರೈವ್ ಮಾಡಿದವರಿಗೆ ನಮ್ಮ ದೇಶದಲ್ಲಿ ನುಗ್ಗುವ ವಾಹನ, ಮಧ್ಯೆಯೇ ಮೂತಿ ತೂರಿಸುವ ಆಟೋಗಳು, ಅದರ ಮಧ್ಯದಲ್ಲಿಯೂ ಜೀವವನ್ನು ಅಂಗೈಯಲ್ಲಿ ಹಿಡಿದುಕೊಂಡು ನುಗ್ಗುವ ಜನರು, ಜನರು ಓಡಾಡುವ ಪುಟ್ಟ ಪಥ (ಪುಟ್ ಪಾತ್)ಗಳನ್ನು ಆಕ್ರಮಿಸಿಕೊಳ್ಳುವ ಭೂಸ್ವಾಧೀನ ಅಧಿಕಾರಿಗಳಾದ ಗಣೇಶ, ಹನುಮಂತ, ಶನಿ ಇದೆಲ್ಲದರ ಮಧ್ಯೆ ಡ್ರೈವ್ ಮಾಡಲು ಸಾಧ್ಯವೇ ಇಲ್ಲ. ಆದ್ದರಿಂದ ಯಾವ ಆತಂಕವೂ ಇಲ್ಲದೆ ನುಗ್ಗುವ ನಮ್ಮ ದೇಶದ ವಾಹನ ಚಾಲಕರೇ ಎಂಟೆದೆಯ ಭಂಟರೆಂದು ಹೆಮ್ಮೆ ಪಡಬೇಕಾಗುತ್ತದೆ.

ಪ್ರತಿ ಮನೆಯ ಮುಂದೆ ಕಡ್ಡಾಯವಾಗಿ ಹುಲ್ಲಿನ ಹಾಸಿಗೆ ಬೆಳೆಸಬೇಕು,

ಮುಂಭಾಗದಲ್ಲಿ ಕಾಂಪೌಂಡ್ ಹೆಚ್ಚಾಗಿ ಕಟ್ಟಿರುವುದೇ ಇಲ್ಲ. ನಿವೇಶನದ ಹೊರಗೆ ಹುಲ್ಲಿನ ಹಾಸುಗೆ, ಹೂವಿನ ಗಿಡ ಇರುತ್ತವೆ. ಇವನ್ನು ನಗರಾಡಳಿತದವರು ನೋಡಿಕೊಳ್ಳುತ್ತಾರೆ. ಇಲ್ಲಿ ಮನೆಗಳನ್ನು ತಮಗೆ ಇಷ್ಟ ಬಂದಂತೆ ಕಟ್ಟಿಕೊಳ್ಳುವಂತಿಲ್ಲ. ರಸ್ತೆಯಲ್ಲಾಗಲಿ, ಮನೆಯ ಹಿತ್ತಿಲದಲ್ಲಾಗಲಿ ಕಸ ಎಲ್ಲಿಯೂ ಕಣ್ಣಿಗೆ ಬೀಳದು. ಒಂದು ದೊಡ್ಡ ಪ್ಲಾಸ್ಟಿಕ್ ಡಬ್ಬಿ ಮಾಡಿ, ಅದಕ್ಕೆ ಗಾಲಿಗಳಿರುತ್ತವೆ ಕಸ ಹಾಕುತ್ತಾರೆ. ತರಕಾರಿ ಮುಂತಾದ ಕೊಳೆಯುವ ಕಸ ಮತ್ತು ಪ್ಲಾಸ್ಟಿಕ್ ಕವರ್ ಮುಂತಾದ ಕೊಳೆಯದ ವಸ್ತುಗಳನ್ನು ಬೇರೆ ಮಾಡಿ ಕಾರ್ಪೊರೇಷನ್ ಗಾಡಿ ಯಾವ ದಿನ ರಸ್ತೆಗೆ ಬರುವುದೋ ಅದರ ಹಿಂದಿನ ದಿನ ರಾತ್ರಿ ಆ ಡಬ್ಬಿಗಳನ್ನು ಹೊರಗೆ ಇಡುತ್ತಾರೆ. ಬೆಳಿಗ್ಗೆ ಲಾರಿ ಬಂದು, ಮಗ್ಗುಲಲ್ಲಿ ಇರುವ ಹುಕ್ಕುಗಳಿಂದ ಡಬ್ಬಿ ಮೇಲೆತ್ತಿ ಕಸ ಸುರಿದುಕೊಂಡು ಮುಂದೆ ಹೋಗುತ್ತದೆ. ನಂತರ ಇನ್ನೊಂದು ಗಾಡಿ ಬಂದು ಚಿಕ್ಕ ಡಬ್ಬಿಗಳನ್ನು ಎತ್ತಿ ಕಸ ಹಾಕಿಕೊಳ್ಳುತ್ತದೆ. ಜನರಲ್ಲಿ ಈ ಶಿಸ್ತು ರಕ್ತಗತವಾಗಿದೆ. ಸಾಮಾನ್ಯವಾಗಿ ನಾಯಿಗಳನ್ನು ತಿರುಗಾಡಿಸಲು, ತಾವೂ ವಾಕ್ ಮಾಡಲು ಜನರು ಬರುತ್ತಾರೆ. ಆಗ ಕೈಯಲ್ಲಿ ಟಿಷ್ಯು ಪೇಪರ್ ಮತ್ತು ನೀರು ತಂದಿರುತ್ತಾರೆ. ನಾಯಿಗಳು ಹುಲ್ಲಿನ ಮೇಲೆ ಹೊಲಸು ಮಾಡಿದರೆ ತಾವೇ ಅದನ್ನು ಎತ್ತಿ ಹಾಕಿ, ಕೈ ತೊಳೆದುಕೊಂಡು ವಾಕ್ ಮುಂದುವರಿಸುತ್ತಾರೆ. ಮಳೆಯ ನೀರು ಹರಿದುಹೋಗಲು ಚರಂಡಿ, ಆ ನೀರೆಲ್ಲ ಒಂದು ಕಡೆ ಜಮಾ ಆಗಲು ಅಲ್ಲಲ್ಲೇ ಚೌಕಾಕಾರದ ತಗ್ಗುಗಳು. ಅಲ್ಲಿಂದ ಹರಿದು ಹಳ್ಳಗಳನ್ನು ಸೇರಲು ವ್ಯವಸ್ಥೆ ಮಾಡಲಾಗಿರುತ್ತದೆ. ರಸ್ತೆ ಪಕ್ಕದಲ್ಲಿ ಬೆಳೆದ ಹುಲ್ಲುಗಳಿಗೆ ನೀರು ಹಾಯಿಸಲು ಸ್ಪ್ರಿಂಕ್ಲರ್ ವ್ಯವಸ್ಥೆ ಇರುತ್ತದೆ. ಟೈಮರ್ ಜೋಡಿಸಿರುತ್ತಾರೆ. ತಾವೇ ಚಾಲೂ ಆಗಿ ನೀರು ಉಣಿಸುತ್ತವೆ.

ಯೋಗೀಶ್ವರಿ ಅವರ ಮನೆಯ ಹಿಂದೆ ಹಸಿರು ವಲಯಕ್ಕೆ ಸಂಬಂಧಿಸಿದ ಅರಣ್ಯವಿದೆ. ದಟ್ಟವಾಗಿ ಬೆಳೆದ ಅರಣ್ಯದಿಂದಾಗಿ ಹಕ್ಕಿಗಳ ಚಿಲಿಪಿಲಿ ಶಬ್ದ ಸದಾ ಕೇಳುತ್ತದೆ. ಋಷ್ಯಾಶ್ರಮದಂತೆ ಇವರ ಮನೆ ಗೋಚರವಾಗುತ್ತದೆ. ಹಿತ್ತಿಲಲ್ಲಿ ಪಕ್ಷಿಗಳಿಗಾಗಿ ಒಂದು ಪುಟ್ಟ ಪೆಟ್ಟಿಗೆಯನ್ನು ಮತ್ತು ನೀರಿನ ಪಾತ್ರೆಯನ್ನು ತೂಗುಹಾಕಿದ್ದಾರೆ. ಅವು ಬಂದು ಕಾಳುತಿಂದು, ನೀರು ಕುಡಿಯುತ್ತವೆ. ಕಾಳು ಮುಗಿದಿದ್ದರೆ ಹಿಂದಿನ ಗಾಜಿನ ಬಾಗಿಲನ್ನು ಕೊಕ್ಕಿನಿಂದ ಕುಕ್ಕಿ ಕಾಳು ಹಾಕಲು ನೆನಪಿಸುತ್ತವೆ. ಒಂದು ಧಡೂತಿ ಅಳಿಲು ಬಂದು ಪೆಟ್ಟಿಗೆ ಮೇಲೆ ಜಿಗಿದು ಕಾಳನ್ನು ಅರ್ಧ ತಿಂದು, ಅರ್ಧ ಚೆಲ್ಲಿ ಹೋಗುತ್ತಿರುತ್ತದೆ. ಕೆಲವು ಹಕ್ಕಿಗಳಂತೂ ತೀರಾ ಚಿಕ್ಕ ಗಾತ್ರದವು. ತಮ್ಮ ತೀಕ್ಷ್ಣ ಧ್ವನಿಯಿಂದ ಕೂಗುತ್ತಿರುತ್ತವೆ.

ನಡುಮನೆಯಲ್ಲಿ ಟಿ. ವಿ. ಇಟ್ಟಿದ್ದು, ಇಲ್ಲೇ ಸಾಂಪ್ರದಾಯಿಕವಾದ ಅಗ್ಗಿಷ್ಟಿಕೆ (Fire place) ಇದೆ. ಈಗೇನೂ ಇಲ್ಲಿಯ ಜನ ಹಿಂದಿನ ಕಾಲದಂತೆ ಶೀತಕಾಲದಲ್ಲಿ ಕಟ್ಟಿಗೆ ಉರಿಸಿ ಕೈ ಕಾಯಿಸುವುದಿಲ್ಲ. ಹೀಟರ್ಸ್, ಏರ್ ಕಂಡೀಷನರ್ಸ್ ಚಳಿಗಾಲ, ಬೇಸಿಗೆ ಕಾಲದಲ್ಲಿ ಹೊರಗಿನ ವಾತಾವರಣಕ್ಕೆ ವಿರುದ್ಧವಾಗಿ ಶೀತೋಷ್ಣಗಳನ್ನು ಉಂಟುಮಾಡುತ್ತವೆ. ಆದರೆ ಎಲ್ಲರ ಮನೆಯಲ್ಲಿ ಆ ಅಗ್ಗಿಷ್ಟಿಕೆ ಸಾಂಪ್ರದಾಯಿಕವಾಗಿ ಇರಬೇಕು. ಕೃತಕವಾಗಿ ಕಟ್ಟಿಗೆ ಇಟ್ಟು ಹಚ್ಚಿದರೆ ಬೆಂಕಿ ಗ್ಯಾಸ್‌ನಿಂದ ಉರಿಯುವಂತೆ ತೋರುತ್ತದೆ. ಇದು ಮನೆಯಲ್ಲಿ ಮುಖ್ಯವಾದ ಸ್ಥಾನ.



ಅಂಥ ಅಗ್ಗಿಷ್ಟಿಕೆಗೆ ಹೊಗೆ ಹೋಗಲು ಚಿಮಣಿ ಕಟ್ಟಿಸಿರುತ್ತಾರೆ. ಅದರ ಮೇಲೆ ತಮಗೆ ಇಷ್ಟವಾದ ಫೋಟೋ, ಅಲಂಕಾರಿಕ ಸಾಮಾನು ಇಡುತ್ತಾರೆ. ಯೋಗೀಶ್ವರಿ ಹೇಳಿದರು, " ಬಹಳ ವರ್ಷಗಳಿಂದ ಈ ಜಾಗ ಖಾಲಿ ಇತ್ತು. ಏನಿಡಬೇಕೋ ಹೊಳೆಯುತ್ತಿರಲಿಲ್ಲ. ಬಸವ ಕಲ್ಯಾಣಕ್ಕೆ ಮೊದಲನೆ ಕಲ್ಯಾಣ ಪರ್ವಕ್ಕೆ ಬಂದಾಗ ಅಭಯ ಹಸ್ತದ ಬಸವಣ್ಣನವರ ಫೋಟೋ ನೋಡಿ ಆಕರ್ಷಿತಳಾಗಿ ತಂದು ಇಟ್ಟೆ. ಆಗ ಈ ಮನೆಯು ತುಂಬಿದಂತೆ, ಯಾವುದೋ ಚೈತನ್ಯ ಬಂದು ನೆಲೆಸಿದ್ದಂತೆ ಅನುಭವವಾಯಿತು. ಒಂದು ದಿನ ಇದ್ದಕ್ಕಿದ್ದಂತೆಯೇ ಬೆಳಕು ಕಂಡಿತು. ಆಶ್ಚರ್ಯದಿಂದ ನೋಡಿದರೆ ಪಶ್ಚಿಮ ದಿಕ್ಕಿನಿಂದ ಕಿಟಕಿಯ ಮೂಲಕ ಹಾಯ್ದು ಸೂರ್ಯನ ಕಿರಣಗಳು ಬಸವಣ್ಣನವರ ಮುಖ, ಕೈಗಳ ಮೇಲೆ ವರ್ತುಲಾಕಾರದಲ್ಲಿ ಬಿದ್ದ ಪ್ರಭಾವಳಿಯಾಗಿ ಬೆಳಗುತ್ತಿವೆ. ದಿನಾಲೂ ಈ ಸಮಯಕ್ಕಾಗಿ ಕಾಯುತ್ತೇನೆ. ಇನ್ನೊಂದು ವಾರ ಸಿಗಬಹುದು ಅಷ್ಟೆ" ಎಂದರು. ಮರುದಿನ ಸಂಜೆ ಆ ಪ್ರಭಾವಳಿಯ ಲೀಲೆಯನ್ನು ನಾನು ನೋಡಿ ಆನಂದಿಸಿದೆ.

ಇಲ್ಲಿಗೆ ಬಂದು ಆಗಲೇ 5 ದಿವಸಗಳಾಗಿದ್ದವು. ಪ್ರಯಾಣದ ದಣಿವನ್ನು ಆರಿಸಿಕೊಂಡು ನಂತರ ಸಾಮಾನುಗಳನ್ನು ಹೊಂದಿಸಿಕೊಂಡು ಇರುವ ಅವಧಿಯನ್ನು ಹೇಗೆ ಸಾರ್ಥಕ ಪಡಿಸಿಕೊಳ್ಳಬೇಕೆಂದು ಚರ್ಚೆಯನ್ನು ನಾವು ಯೋಗಿಶ್ವರಿಯವರು ಚಿಂತನೆ ಮಾಡಿದೆವು.

"ಅಮೆರಿಕಾ ಅತ್ಯಂತ ದೊಡ್ಡ ದೇಶ ಒಂದು ಕರಾವಳಿ (ಕೋಸ್ಟ್)ಯಿಂದ ಇನ್ನೊಂದು ಕರಾವಳಿಗೆ ಸಹಸ್ರಾರು ಮೈಲಿಗಳು. ಎಲ್ಲೆಡೆಯಲ್ಲಿ ಸಂಚರಿಸಿ ಕಾರ್ಯಕ್ರಮ ಮಾಡಲು ಕಷ್ಟ ಸಾಧ್ಯ. ಆದ್ದರಿಂದ ಎಲ್ಲರನ್ನೂ ತಲುಪುವುದು ಕಷ್ಟಕರ . ಇ-ಮೇಲ್ ಮೂಲಕ ನಾವು ಸದಸ್ಯರನ್ನು ಮಾಡಿಕೊಂಡು, ಅವರಿಗೆ ಪಾಠಗಳನ್ನು ಕೊಡಬಹುದು. ನಂತರ ಒಮ್ಮೆ 3-4 ದಿವಸಗಳ ರಜೆ ಸಿಕ್ಕಾಗ ಅವರಿಗೆ ಪ್ರಾಯೋಗಿಕ ತರಬೇತಿ ನೀಡಬಹುದು" ಎಂದು ಯೋಗೀಶ್ವರಿ ಹೇಳಿದುದು ಬಹಳ ಉತ್ತಮ ಸಲಹೆ ಎನ್ನಿಸಿತು.

"ನಿಮ್ಮ ಆರೋಗ್ಯ ಸರಿಪಡಿಸಿಕೊಳ್ಳುವ ವಿಷಯಕ್ಕೆ ನೀವು ಆದ್ಯತೆ ನೀಡಬೇಕು" ಎಂದು ಶರಣೆ. ಯೋಗೀಶ್ವರಿ ನುಡಿದರು. ನಾನು ಈ ಬಗ್ಗೆ ಸುದೀರ್ಘವಾಗಿ ಚಿಂತಿಸಿದೆ. ಏಕೆಂದರೆ ಒಂದಾದ ಮೇಲೊಂದು ಕಾರ್ಯಕ್ರಮ ಹಾಕಿಕೊಂಡು ಒತ್ತಡ ತಂದುಕೊಳ್ಳುತ್ತ, ಇತರರಿಗೂ ಬಿಡುವು ಇಲ್ಲದಂತೆ ಮಾಡಿ ಬಹಳಷ್ಟು ಆರೋಗ್ಯ ಶಿಥಿಲಗೊಂಡಿತ್ತು. ಮೇ ತಿಂಗಳಿನಲ್ಲಿ ಕಲ್ಯಾಣ ಪರ್ವದ ನಂತರ ವಿಪರೀತ ಸುತ್ತಾಡಿ ಬೆಂಗಳೂರಿಗೆ ಬಂದಾಗ ಒಂದು ದಿನ ಬೆಳಿಗ್ಗೆ 3 ಗಂಟೆಗೆ ವಿಪರೀತ ಬೆವರುವಿಕೆ ಶುರುವಾಯಿತು. ಮೈಯಲ್ಲಿ ಸೂಜಿಹಾಕಿ ಚುಚ್ಚಿದಂತಾಗುತ್ತ ಮೈಯೆಲ್ಲ ಬಿಸಿ ಏರಿತು. ಹಾಗೆಯೇ ಏನೇನೋ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದರೂ ಸಮಾಧಾನವಾಗಲಿಲ್ಲ. ಶಾಂತಾ ಎದುರಿನ ಕೋಣೆಯಲ್ಲಿದ್ದವಳನ್ನು ಕೂಗಿ ಎಬ್ಬಿಸಿದೆ. "ನೋಡೋಣ ಸ್ವಲ್ಪ ಹೊತ್ತಿನಲ್ಲಿ ಸರಿಯಾಗಬಹುದು" ಎನ್ನುತ್ತಿದ್ದರೂ ಕೇಳದೆ ಆಕೆ ಹೋಗಿ ಅಲ್ಲಮಪ್ರಭು ಸ್ವಾಮಿಗಳನ್ನು ಎಬ್ಬಿಸಿದಳು. ಅವರು ಶರಣ. ಡಾ॥ ಸಿ. ವಿ. ಶಿರೋಳರಿಗೆ ಫೋನ್ ಮಾಡಿದರು. ಆಗ ಶರಣೆ. ಪಾರ್ವತಿಯವರೂ ಮತ್ತು

ಡಾ॥ ಶಿರೋಳರು ಬಂದು ಬಿ.ಪಿ. ನೋಡಿದರೆ ಅದು ಸಿಕ್ಕಾಪಟ್ಟೆ ಏರಿತ್ತು. ರಕ್ತ ಪರೀಕ್ಷೆ ಮಾಡಿದರೆ ಡಯಬಿಟಿಸ್ ಸಹ ಹೆಚ್ಚಾಗಿತ್ತು. ಮಾತ್ರೆ ತೆಗೆದುಕೊಳ್ಳಲು ಮತ್ತು ಮರುದಿನವೇ ಇ.ಸಿ.ಜಿ ನೋಡಲು ಸೂಚಿಸಿದರು. ಬಸವ ಮಂಟಪದ ಪಕ್ಕದಲ್ಲೇ ಇರುವ ಸಿಟಿ ಹಾಸ್ಪಿಟಲ್ (ಒಂದು ವಿಶೇಷವೆಂದರೆ ನಮ್ಮ ಜನ್ಮವಿತ್ತ ತಂದೆ ಲಿಂ॥ ಶರಣ. ಡಾ॥ ಬಸಪ್ಪ ಈ ನಿವೇಶನದಲ್ಲಿ ಒಂದು ನರ್ಸಿಂಗ್ ಹೋಂ ಮಾಡಬೇಕು. ನನ್ನನ್ನು ವೈದ್ಯಳನ್ನಾಗಿ ಮಾಡಬೇಕು ಎಂದು ಆ ಸೈಟ್ ತಗೆದುಕೊಂಡಿದ್ದರು. ಅವರು ಬೇಗನೆ ಲಿಂಗೈಕ್ಯರಾದರು ನನಗೆ ಪಿ.ಯು.ಸಿ ಆದ ಮೇಲೆ ಫ್ರೀ ಮೆಡಿಕಲ್ ಸೀಟ್ ಮೆರಿಟ್‌ನಲ್ಲಿ ಬೆಂಗಳೂರು ಮೆಡಿಕಲ್ ಕಾಲೇಜಲ್ಲಿ ಸಿಕ್ಕರೂ ನಮ್ಮ ಪಾಲಕರಾಗಿದ್ದ ತಾತಂದಿರು ಓದಲು ಕಳಿಸಲಿಲ್ಲ. ಬಿ. ಎಸ್‌ಸಿ ಮುಂದುವರಿಸಿದೆ. ನಂತರ ಸನ್ಯಾಸ ತೆಗೆದುಕೊಂಡೆ. ಬಹಳ ವರ್ಷಗಳ ನಂತರ ತಾಯಿ ಗಂಗಮ್ಮ ಮತ್ತು ಸೋದರ ಲಿಂ॥ ಪ್ರಕಾಶ್ ನಿವೇಶನವನ್ನು ದಾನವಾಗಿ ಕೊಟ್ಟರು. ಅಲ್ಲೇ ಬಸವ ಮಂಟಪ ಕಟ್ಟಿದೆವು.ಭವ ರೋಗಕ್ಕೆ ಚಿಕಿತ್ಸೆ ನೀಡುವ ಬಸವ ಮಂಟಪದ ಪಕ್ಕದಲ್ಲೇ ಕಳೆದ ವರ್ಷ ಭೌತಿಕ ರೋಗಕ್ಕೆ ಚಿಕಿತ್ಸೆ ನೀಡುವ ಸಿಟಿ ಹಾಸ್ಪಿಟಲ್ ಸಹ ಆಗಿರುವುದು ಬಹಳ ವಿಶೇಷ) ಎಂ.ಡಿ. ಶರಣ. ಡಾ॥ದೇವರಾಜು ಅವರು ಬಂದು ನೋಡಿ ಇ.ಸಿ.ಜಿ.ಗೆ ಆಹ್ವಾನಿಸಿದರು. ಡಾ. ಮೃತ್ಯುಂಜಯಪ್ಪ ಸಹ ಇ.ಸಿ.ಜಿ ನೋಡಲು ಆಗ್ರಹಿಸಿದರು. ಅದು ನಾರ್ಮಲ್ ಆಗಿತ್ತು. ಖ್ಯಾತ ವೈದ್ಯೆ ಭೋಜಮ್ಮ ಬಂದು ಬಿ.ಪಿ. ನೋಡಿದರು ಹಿಂದಿನ ದಿನಕ್ಕಿಂತ ಸ್ವಲ್ಪ ಕಮ್ಮಿಯಾಗಿತ್ತು. ವೀಸಾ ಇಂಟರ್‌ವ್ಯೂಗೆ ಚೆನ್ನಾಯ್‌ಗೆ ಹೋಗಿ ಬಂದ ನಂತರ ಪುನಃ ಜಾಸ್ತಿಯಾಯಿತು. ಬಿ.ಪಿ ಮತ್ತು ಸಕ್ಕರೆ ಬಹಳ ಏರಿಳಿತ ಆಗುತ್ತಿದ್ದುದರಿಂದ ಎಲ್ಲರೂ ಚಿಂತಿತರಾಗಿ " ಈಗ ವಿದೇಶ ಪ್ರಯಾಣ ಬೇಡ" ಎಂದು ಆಗ್ರಹಿಸುತ್ತಲಿದ್ದರು. "ಒಮ್ಮೆ ಫಿಕ್ಸ್ ಆದ ಕಾರ್ಯಕ್ರಮವನ್ನು ನಾನು ಬದಲಿಸುವುದಿಲ್ಲ. ಅಲ್ಲೇ ಆರೋಗ್ಯ ಸರಿ ಪಡಿಸಿಕೊಳ್ಳುತ್ತೇನೆ. ಇವೆಲ್ಲ ದೇಹ ಧರ್ಮ ಇವಕ್ಕೆ ಹೆದರಿ ಕೆಲಸ ಮಾಡದಿರಲು ಆಗುವುದೆ ?" ಎಂದು ನನ್ನ ವಾದ. ಹೀಗಾಗಿ ಒಬ್ಬಳೇ ಹೋಗಬೇಕು ಎಂದಾಗ ಇನ್ನಷ್ಟು ಚಟಪಟಿಸಲು ತೊಡಗಿದ್ದರು. ಆಗ ರಾಧಿಕಾ ಜೊತೆಗೆ ಬರಲು ಹೊರಟಾಗ ನನ್ನನ್ನು ಹೇಗೆ ನೋಡಿಕೊಳ್ಳಬೇಕೆಂದು ಸುಜಯಾದೇವಿಯವರು ಆದಿಯಾಗಿ ಶಿಷ್ಯರು, ಭಕ್ತರು ಹೇಳಿದ್ದೇ ಹೇಳಿದ್ದು. ನಾನು ತರಲು ಒಪ್ಪುವುದಿಲ್ಲ ಎಂದು ಅವರ ಲಗೇಜ್‌ನಲ್ಲಿ ಎಷ್ಟೋ ಆಹಾರ ಪದಾರ್ಥ ಇಟ್ಟು ಕಳಿಸಿದ್ದರು. ಜನರ ಈ ಭಕ್ತಿ-ಪ್ರೀತಿ-ಅಭಿಮಾನಕ್ಕೆ ಹೃದಯವು ತುಂಬಿ ಬರುತ್ತದೆ. ಗುರುಗಳ ಬಗ್ಗೆ ಯಾವುದೇ ಭಕ್ತಿ-ಗೌರವ-ಶ್ರದ್ಧೆ ಇಲ್ಲದಿರುವ ಶುಷ್ಕ ವಾತಾವರಣ ಎಲ್ಲೆಡೆ ಬೆಳೆಯುತ್ತಿರುವಾಗ ನಮ್ಮ ಬಗ್ಗೆ ಭಯ ಮಿಶ್ರಿತ ಭಕ್ತಿ ಹೊಂದಿರದೆ ಆತ್ಮೀಯತೆ ಬೆರೆತ ಭಕ್ತಿ ಹೊಂದಿರುವುದು ಬೆಲೆ ಕಟ್ಟಲಾಗದ್ದು. ಶರಣೆ. ಪುಷ್ಪಾ ಸಿದ್ದರಾಮಪ್ಪ ಪಾಟೀಲ್ ಹೇಳಿದರು "ಇಂದು ಬಸವೇಶ್ವರ ಪೂಜೆ ಆರಂಭಿಸಿ ನಂದಾ ದೀಪ ಹಚ್ಚಿದ್ದೇವೆ. ನೀವು ಹೋಗಿ ಆಸ್ಟಿನ್ ಮುಟ್ಟಿದ ಸುದ್ದಿ ಕೇಳುವ ತನಕ ಮಂತ್ರಜಪ ಮಾಡುತ್ತೇನೆ" ಎಂದರು, ಬೆಂಗಳೂರು ವಿಮಾನ ನಿಲ್ದಾಣಕ್ಕೆ ಕಳಿಸಲು ಬಂದಾಗ. ಅದಕ್ಕೇ ಆಸ್ಟಿನ್ ಮುಟ್ಟುತ್ತಲೇ ಬೆಂಗಳೂರಿಗೆ ಸುದ್ದಿ ಮುಟ್ಟಿಸಿ ಪುಷ್ಪಾ ಅವರಿಗೆ ತಿಳಿಸಲು ಸೂಚಿಸಿದೆ. ಹೀಗೆ ಎಷ್ಟೋ ಜನ ಮಾಡಿರಲೂ ಸಾಕು.



ನಾನೂ ಆಲೋಚಿಸಿದೆ, "ಇಷ್ಟು ಪ್ರಶಾಂತ ವಾತಾವರಣ ನನಗೆ ಅಲ್ಲಿ ಸಿಕ್ಕದು. ಎಲ್ಲಿದ್ದರೂ ಜನರು ಬರುವರು. ಫೋನ್ ಮೂಲಕವೂ ಎಲ್ಲರೂ ಸಂಪರ್ಕಿಸವರು. ಆದ್ದರಿಂದ ಆರೋಗ್ಯವನ್ನು ಸುಧಾರಿಸಿಕೊಳ್ಳುತ್ತ, ಸ್ಥಳೀಯವಾಗಿದ್ದು ಕೊಂಡೇ ಕೆಲವು ಕೆಲಸ ಮಾಡಬಹುದು."

India weekly - USA ಎಂಬುದೊಂದು ವ್ಯಾಪಕವಾಗಿ ಯು.ಎಸ್.ಎ.ಯ ಪೂರ್ವ ಕರಾವಳಿಯುದ್ದಕ್ಕೂ ಮತ್ತು ಬೇರೆ ಬೇರೆ ರಾಷ್ಟ್ರಗಳಿಗೂ ಹೋಗುವ ವಾರಪತ್ರಿಕೆ. ಅಲ್ಲಿ ಕಾಯಕ ಮಾಡುತ್ತಲಿರುವ ಆರ್ಷ. ಮನೋಹರ್ ಮೊದಲಿನಿಂದಲೂ ಪರಿಚಯ. ಅವರ ಪತ್ರಿಕೆ ನಮ್ಮ ಬರುವಿನ ಸುದ್ದಿ ಕೊಡುತ್ತಲೇ, ಲೇಖನವನ್ನು ಕೊಡುವರಾ ? ಎಂದು ಅವರ ಮುಖ್ಯ ಸಂಪಾದಕರು ಕೇಳಿದುದನ್ನು ಮನೋಹರ್ ತಿಳಿಸಿದರು. ಸಂತೋಷದಿಂದ ಒಪ್ಪಿಕೊಂಡೆ. A Key to Happy Life ಎಂಬ ಶೀರ್ಷಿಕೆಯಡಿಯಲ್ಲಿ ಮೊದಲ ಬರಹ ಜೂನ್ 29, 2003ರ ಸಂಚಿಕೆಯಲ್ಲಿ ಪ್ರಕಟವಾಯಿತು. ಇದನ್ನೂ ಕಲ್ಯಾಣ ಕಿರಣದಲ್ಲಿ ಕೊಡಲಾಗುವುದು. ಶರಣೆ. ಯೋಗೀಶ್ವರಿಯವರು ಇ-ಮೇಲ್ ಮತ್ತು ಫೋನ್ ಮೂಲಕ ಬಹಳಷ್ಟು ಜನರನ್ನು ಸಂಪರ್ಕಿಸಿ ಕಾರ್ಯ ಚಟುವಟಿಕೆಗಳು ಮತ್ತು ಕಾರ್ಯಕ್ರಮಗಳನ್ನು ರೂಪಿಸುತ್ತಿದ್ದಾರೆ.

ಇಲ್ಲಿ ಈಗ ಬೇಸಿಗೆ ಪ್ರಾರಂಭ. ನಾವು ಸುಡುಬೇಸಿಗೆಯನ್ನು ಅಲ್ಲಿ ಮುಗಿಸಿ ಇಲ್ಲಿಯ ಬೇಸಿಗೆಗೆ ಬಂದಂತಾಗಿದೆ. ಹಗಲು ತುಂಬಾ ದೀರ್ಘ ಬೆಳಿಗ್ಗೆ 5 ಗಂಟೆಗೆ ಮಸುಕು ಹರಿಯುತ್ತ 6 ಗಂಟೆಗೆ ಸೂರ್ಯನು ಕಾಣಿಸುತ್ತಾನೆ. ಸುದೀರ್ಘ ಪ್ರಯಾಣ ಮುಗಿಸಿ ರಾತ್ರಿ 9 ಗಂಟೆಗೆ ಮರೆಯಾಗುವನು. ಸುಮಾರು 10 ಗಂಟೆಗೆ ಕತ್ತಲೆ ಕವಿಯುತ್ತದೆ : ನಮ್ಮಲ್ಲಿಯಂತೆ ನೈಸರ್ಗಿಕವಾಗಿ ಹಗಲುರಾತ್ರಿಗಳನ್ನು ಇಲ್ಲಿಯ ಜನರು ಅನುಭವಿಸಲು ಅಸಾಧ್ಯ. ಕೆಲವು ಕಾಲ ಅತಿ ದೀರ್ಘ ಹಗಲು ಕೆಲವು ಕಾಲ ಅತಿ ದೀರ್ಘ ರಾತ್ರಿ. ಕತ್ತಲೆ ಬೇಕಾದರೆ ಪರದೆ ಎಳೆದುಕೊಳ್ಳುತ್ತಾರೆ. ಬೆಳಕು ಬೇಕಾದರೆ ದೀಪ ಹಚ್ಚಿಕೊಳ್ಳುತ್ತಾರೆ. ಮನೆಗಳಲ್ಲಿ ಹವಾನಿಯಂತ್ರಕ ವ್ಯವಸ್ಥೆ ಮತ್ತು ಫ್ಯಾನ್ ಇರುವುದರಿಂದ ಅಷ್ಟಾಗಿ ಬೇಸಿಗೆಯ ಅನುಭವ ಆಗದು. ಹೊರಗೆ ಹೋದರೆ ಬೆಳಗಿನ 9 ಗಂಟೆಯಿಂದ ರಾತ್ರಿ 8 ಗಂಟೆವರೆಗೆ ಮೈಚುಚ್ಚುವ ಬಿಸಿಲು.

ತೀರಾ ಅನಿರೀಕ್ಷಿತವಾಗಿ ಇಂದಿಗೆ (5-7-2003)3-4 ದಿವಸಗಳಿಂದ ಮೋಡ ಕವಿಯುತ್ತ, ಮಳೆ ಬೀಳುತ್ತಲಿದೆ. ಹೀಗಾಗಿ ಸೂರ್ಯನ ಪ್ರಖರತೆ ಕಮ್ಮಿ ಎನಿಸುತ್ತಿದೆ. ಜುಲೈ 15ಕ್ಕೆ ಇಲ್ಲಿ ಬೇಸಿಗೆ ಪ್ರಾರಂಭವಾಗಲಿದೆ. ಟೆಕ್ಸಾಸ್ ಪ್ರಾಂತ್ಯವೂ ಉಷ್ಣತೆಯಿಂದ ಕೂಡಿದ ಪ್ರದೇಶ. ಸಂಜೆ 8 ರ ಮೇಲೆ ಬಿಸಿಲು ತಗ್ಗಿದಾಗ ರಾಧಿಕಾ ಅವರು ಅಥವಾ ಯೋಗೀಶ್ವರಿ ಯಾರಿಗೆ ಬಿಡುವು ಇರುತ್ತೋ ಅವರು ವಾಕ್‌ಗೆ ಕರೆದೊಯ್ಯುತ್ತಾರೆ. ಸುಮಾರು ವರ್ಷಗಳ ಹಿಂದೆಯೇ ನಿಲ್ಲಿಸಿದ ವಾಕ್ ಅನ್ನು ಈಗ ಆರಂಭಿಸಲಾಗಿದೆ. ರಾಧಿಕಾ ಅವರು ಬಹಳ ಕಾಳಜಿ ವಹಿಸಿ ಆರೋಗ್ಯ ಪೂರ್ಣ ಆಹಾರವನ್ನು ಸಿದ್ಧಪಡಿಸುತ್ತಾರೆ. ಇಲ್ಲಿಯ ಆಹಾರ ವಿಧಾನ

ನೋಡಿದಾಗ ನಮ್ಮ ದೇಶದಲ್ಲಿ ಎಷ್ಟು ಅನವಶ್ಯವಾದ, ಮಸಾಲೆ ಮಿಶ್ರಿತ, ಅತ್ಯಂತ ಹೆಚ್ಚಿನ ಕೊಬ್ಬಿನಿಂದ ಅಂದರೆ ಎಣ್ಣೆ, ತುಪ್ಪ, ಬೆಣ್ಣೆ ಉಪಯೋಗಿಸಿ ಆಹಾರ ತಯಾರು ಮಾಡುತ್ತಾರಲ್ಲ ಎನಿಸುತ್ತದೆ. ಮದುವೆ ಮನೆಗಳ ಊಟವಂತೂ, ಅದರಲ್ಲೂ ಶ್ರೀಮಂತರ ಮದುವೆ ಊಟವಂತೂ ಹಣದ ಅಪವ್ಯಯ ಮಾತ್ರವಲ್ಲ ಆರೋಗ್ಯಕ್ಕೆ ಬಾಧಕ ಎನಿಸುತ್ತದೆ.

ಮುಂದುವರೆಯುವುದು ....................

---

# ವಚನ ಚಿಂತನ ಪ್ರಭೆ

ಎಮ್ಮ ವಚನದೊಂದು ಪಾರಾಯಣಕ್ಕೆ
ವ್ಯಾಸನದೊಂದು ಪುರಾಣ ಸಮಬಾರದಯ್ಯ
ಎಮ್ಮ ವಚನದ ನೂರೆಂಟರ ಅಧ್ಯಯನಕ್ಕೆ
ಶತರುದ್ರೀಯ ಸಮಬಾರದಯ್ಯ
ಎಮ್ಮ ವಚನದ ಸಾಸಿರ ಪಾರಾಯಣಕ್ಕೆ
ಗಾಯಿತ್ರೀ ಲಕ್ಷಜಪ ಸಮಬಾರದಯ್ಯ
ಕಪಿಲಸಿದ್ಧ ಮಲ್ಲಿಕಾರ್ಜನಾ.

- ಬಸವಯೋಗಿ ಶ್ರೀ ಸಿದ್ಧರಾಮೇಶ್ವರರು

ಹನ್ನೆರಡನೆಯ ಶತಮಾನದ ಕನ್ನಡ ನೆಲದ ಪವಿತ್ರವಾದ ಶ್ರೇಷ್ಠ ಕೊಡುಗೆ ವಚನ ಸಾಹಿತ್ಯ. ಮುಂದೆ ಈ ದಾರ್ಶನಿಕ ಸಾಹಿತ್ಯ ಲಿಂಗಾಯತ ಧರ್ಮದ ಸಂವಿಧಾನವೂ ಆಯಿತು. ಕಾಲಾನಂತರ ಜಾತಿವಾದಿಗಳಿಂದ, ಸ್ವಾರ್ಥಿಗಳಿಂದ ಜರ್ಜರಿತವಾಗಿ ಏಳುಬೀಳುಗಳನ್ನು ಅನುಭವಿಸಿದರೂ, ತನ್ನಲ್ಲಿದ್ದ ಆಂತರಿಕ ಶಕ್ತಿಯಿಂದ ಇಂದಿಗೂ ತೊಳಗಿ ಬೆಳಗುತ್ತಿರುವುದು ಈಗೀಗ ಹೆಚ್ಚಾಗಿ ಮನವರಿಕೆಯಾಗುತ್ತಿದೆ.

ಬಸವಾದಿ ಪ್ರಮಥರ ವಚನಗಳನ್ನು ವೈವಿಧ್ಯಮಯವಾಗಿ ಪ್ರಚಾರ ಮಾಡುವುದರೊಂದಿಗೆ, ವಚನಗಳ ಪ್ರಕಟಣೆ, ಅನುಷ್ಠಾನ, ಶುದ್ಧೀಕರಣ ಕಾರ್ಯದಲ್ಲಿ ತನ್ನನ್ನು ತಾನು ಸಂಪೂರ್ಣವಾಗಿ ತೊಡಗಿಸಿಕೊಂಡು ದುಡಿಯುತ್ತಿರುವುದು ಬೆಂಗಳೂರಿನ ವಿಶ್ವ ಕಲ್ಯಾಣ ಮಿಷನ್. ಸುಮಾರು ಕಳೆದ ಒಂದು ವರ್ಷದಿಂದ ಮತ್ತೊಂದು ವಿನೂತನವಾದ ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು ಈ ದಿಕ್ಕಿನಲ್ಲಿ ಹೊಸ ಹೆಜ್ಜೆ ಮೂಡಿಸಿ ಯಶಸ್ವಿಯಾಗುತ್ತಿದೆ. ಅದೇ " ವಚನ ಚಿಂತನ ಪ್ರಭೆ ". ಅಂದರೆ ವಯೋಬೇಧವಿಲ್ಲದೆ ಸಮಾನ ಅಭಿರುಚಿಯ ಚಿಂತಕರು ಒಂದೆಡೆ ಸೇರಿ ದಿನಕ್ಕೊಂದು ವಚನವನ್ನು ಆಯ್ಕೆ ಮಾಡಿಕೊಂಡು, ತಮ್ಮ ಬುದ್ಧಿ, ಅನುಭವ, ತಿಳುವಳಿಕೆಗೆ ತಕ್ಕಂತೆ ವಚನದ ಅರ್ಥ ಬಿಡಿಸಿ ಹೇಳುವುದು. ಇಲ್ಲಿ ವಚನದ ಅರ್ಥ ಬಿಡಿಸಿ ಹೇಳುವಾಗ ತಪ್ಪು ಆಗಬಹುದು ಎಂಬ ಅಳುಕಿಗೆ ಅವಕಾಶವಿಲ್ಲ ಎಂಬುದು ಗಮನಾರ್ಹ ಮತ್ತು ಪ್ರಯತ್ನಶೀಲತೆ ಮತ್ತು ಸಚ್ಚಿಂತನೆಗೈಯುವ ಶೈಲಿಯನ್ನು ಜನರಲ್ಲಿ ರೂಢಿಸುವುದು ಮುಖ್ಯವಾಗಿದೆ.



ಪ್ರತಿನಿತ್ಯ ಸುಪ್ರಭಾತ ಸಮಯದಲ್ಲಿ ಆರು ಗಂಟೆ ಮೂವತ್ತು ನಿಮಿಷದಿಂದ ಏಳುವರೆ ಗಂಟೆಯವರೆಗೆ ನಡೆಯುತ್ತಿರುವ ಚಿಂತನ ಪ್ರಭೆಯಲ್ಲಿ ವಚನಗಳು ಮುಂಜಾನೆಯ ಪ್ರಕೃತಿಯ ಸೊಬಗಿನಂತೆ ಕ್ಷಣಕ್ಷಣಕ್ಕೆ ಹೊಸ ಹೊಸ ಅರ್ಥಗಳಿಂದ ಮೈ ತುಂಬಿಕೊಂಡು ಶೋಭಿಸುತ್ತವೆ. ಹೀಗೆ ಶೋಭಿಸುವ ವಚನಗಳು ಕಾರ್ಯಕ್ರಮದ ಕೊನೆಯಲ್ಲಿ ಬಸವ ಕಲ್ಯಾಣದ ಶೂನ್ಯ ಪೀಠಾಧ್ಯಕ್ಷರಾದ ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿಯವರಿಂದ ಅಂತಿಮ ಸ್ಪರ್ಶ ಪಡೆಯುತ್ತವೆ. ಪ್ರತಿ ದಿನವೂ "ನೆನಹು" ಎಂಬ ಸಂಕ್ಷಿಪ್ತ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ ಒಂದುಗಂಟೆಯ ಕಾಲ ಮಾತ್ರ ನಡೆಯುತ್ತಿರುವ ಈ ಚಿಂತನ ಪ್ರಭೆ ಕೊನೆಯಲ್ಲಿ 'ಅಯ್ಯಾ, ಸಜ್ಜನ ಸದ್ಭಾವಿಗಳ ಸಂಗದಿಂದ ಮಹಾನುಭಾವರ ಕಾಣಬಹುದಯ್ಯಾ. ಮಹಾನುಭಾವರ ಸಂಗದಿಂದ ಶ್ರೀಗುರುವನರಿಯಬಹುದು. ಲಿಂಗವನರಿಯಬಹುದು, ಜಂಗಮವನರಿಯಬಹುದು, ಪ್ರಸಾದವನರಿಯಬಹುದು, ತನ್ನ ತಾನರಿಯಬಹುದು. ಇದು ಕಾರಣ ಸದ್ಭಕ್ತರ ಸಂಗವನೇ ಕರುಣಿಸು ಲಿಂಗದೇವಾ, ನಿಮ್ಮ ಧರ್ಮ ' ಬ.ವ.ದೀ. 877 ಎಂದು ವಚನ ಹೇಳಿ, ನಂತರ "ಸೃಷ್ಟಿ ಕರ್ತ ಲಿಂಗದೇವನ ಸಾಕ್ಷಿಯಾಗಿ, ಧರ್ಮಗುರು ಬಸವಣ್ಣನವರ ಸಾಕ್ಷಿಯಾಗಿ ಇಂದಿನ ವಚನದ ಅನುಭಾವವನ್ನು ನನ್ನ ಜೀವನದಲ್ಲಿ ಅಳವಡಿಸಿಕೊಳ್ಳುತ್ತೇನೆ" ಎಂದು ಪ್ರಮಾಣ ಮಾಡಿ 'ಜಯ ಬಸವ ರಾಜ ಭಕ್ತ ಜನ ಸುರಭೂಜ ಜಯತು ಮಹಕಾರಣಿಕ ಲಿಂಗದೇವನ ಘನ ತೇಜ ಜಯತು ಕರುಣಾ ಸಿಂಧು ಬಜಕ ಜನ ಬಂಧು ಜಯ ಇಷ್ಟದಾಯಕ ರಕ್ಷಿಸು ಶ್ರೀ ಗುರು ಬಸವ' ಎಂಬ ಮಂಗಲ ಜಯಘೋಷದೊಂದಿಗೆ ಮುಕ್ತಾಯ ಹೊಂದುತ್ತದೆ. ದಿನದಿನವೂ ಹೆಚ್ಚು ಜನರನ್ನು ಆಕರ್ಷಿಸುತ್ತಾ ಬೌದ್ಧಿಕ, ಮಾನಸಿಕ ಮತ್ತು ಆತ್ಮ ವಿಕಾಸಕ್ಕೆ ಅನುವು ಮಾಡಿಕೊಡುತ್ತಿರುವುದು ಅನುಭವ ವೇದ್ಯವಾಗಿದೆ.

ಅನಂತ ಕಾಲ ತರುಗಿರಿಗಳ ಹೊಕ್ಕು ತಪವ ಮಾಡುವುದರಿಂದ
ಒಂದು ದಿನ ಲಿಂಗಪೂಜೆ ಸಾಲದೆ ?
ಅನಂತ ಕಾಲ ಲಿಂಗಪೂಜೆಯ ಮಾಡುವುದರಿಂದ
ಒಂದು ದಿನ ಗುರುಚರಣದ ಸೇವೆ ಸಾಲದೆ ?
ಅನಂತ ಕಾಲ ಗುರುಚರಣದ ಸೇವೆ ಮಾಡುವುದರಿಂದ
ಒಂದು ದಿನ ಜಂಗಮಕ್ಕೆ ತೃಪ್ತಿಯ ಮಾಡುವುದು !
ಅನಂತ ಕಾಲ ಜಂಗಮಕ್ಕೆ ತೃಪ್ತಿಯ ಮಾಡುವುದರಿಂದ
ಒಂದು ನಿಮಿಷ ನಿಮ್ಮ ಶರಣರನುಭಾವ ಸಾಲದೆ ? ಲಿಂಗದೇವಾ. - ಬ.ವ.ದೀ. 1383

ಶರಣ ಬಂಧುಗಳೇ, "ಅನಂತ ಕಾಲ ಲಿಂಗಪೂಜೆ, ಗುರುಚರಣದ ಸೇವೆ, ಜಂಗಮ ತೃಪ್ತಿ ಮಾಡುವುದರಿಂದ ಒಂದು ನಿಮಿಷ ಶರಣರನುಭಾವ ಸಾಲದೆ" ಎಂಬ ಬಸವವಾಣಿಯಂತೆ ರಾಷ್ಟ್ರೀಯ ಬಸವ ದಳದವರು ತಮ್ಮ ಸಂಸ್ಥೆಗಳಲ್ಲಿ ಮತ್ತು ಶರಣ ಬಂಧುಗಳು ತಮ್ಮ ಮನೆಗಳಲ್ಲಿ "ವಚನ ಚಿಂತನ ಪ್ರಭೆ"ಯನ್ನು ಆರಂಭಿಸಿ, ಅನುಷ್ಠಾನಗೈದು, ಆನಂದಿಸಬೇಕೆಂದು ಸ್ವಾನುಭವದಿಂದ ತಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇವೆ.

- ಶರಣ ನಿತ್ಯಾನಂದ

(ಅಮೆರಿಕಾದ ನ್ಯೂಯಾರ್ಕ್‌ದಿಂದ ಪ್ರಕಟಗೊಳ್ಳುತ್ತಿರುವ 'ಇಂಡಿಯಾ ವೀಕ್ಲಿ'-ಯು.ಎಸ್.ಎ. ಪತ್ರಿಕೆಯಲ್ಲಿ ಪ್ರತಿ ವಾರವೂ ಪೂಜ್ಯ ಮಾತಾಜಿಯವರು 'A Key to Happy Life' ಎಂಬ ಶೀರ್ಷಿಕೆಯಡಿಯಲ್ಲಿ ಲೇಖನವನ್ನು ಬರೆಯುತ್ತಿದ್ದು, ಆ ಪತ್ರಿಕೆಯಲ್ಲಿ ಮುದ್ರಣಗೊಂಡ ಲೇಖನವನ್ನು ಕಲ್ಯಾಣ ಕಿರಣದ ಓದುಗರಿಗಾಗಿ ಪ್ರಕಟಿಸುತ್ತಿದ್ದೇವೆ)

# The Key To A Happy Life

By JAGADGURU MATHE MAHADEVI

(An article published in 'India weekly'-USA on June 29, 2003)

Life of a human being is special, yet complex. Many an analogy can be used to describe and understand it : it can be compared to a drama, where the man is an artist. It can also be compared to a war, where the human being is a warrior.

Human Life is a great boon of God through Nature, a generous boon bestowed by God, the great donor. But living is an art. A wise man makes his worldly life very valuable and meaningful that gives satisfaction to himself as well as others who are touched by it. Some others make it sorrowful and miserable. To make this earthly life meaningful and happy, man needs proper guidance and practical techniques. First, he has to adopt some ideologies and cultivate certain habits.

So to make this earthly life meaningful and happy, what else is needed ? This is the main theme of the first part of the article titled " A Key to Happy Life" under a series of articles. One great 12th century saint from India, Lord Basavanna says :

This mortal world is the Creator's workshop
One who is successful here
Is successful there
One who is not successful here
Is not successful there

Many entertain the belief that there is a beautiful heaven that can be attained after death. So, however miserable and fruitless life here is, if one can only tolerate it, after death one can attain that happy place called ' Heaven '. This is not true. Man must try to make this mortal life happier and meaningful. Some others believe that life is ephemeral and for momentary enjoyment only. Belief in God, pratice of religion, or righteous living is not relevant. Yet others feel that they should think of these when they are older and retired.

All these things point to the confusion and perplexity in the society. There are still others who are intellectual and rational. The superstitions practices and blind beliefs entertained by the ignorant masses have instilled the notion that religion is nothing but a bundle of superstitious and meaningless practices. This has resulted in their developing prejudice towards religion and its norms. Many others associate religiousness with detachment towards life, activity, work, pleasure etc.

They believe that religion advocates life-negation and world-negation ; it preaches desertion of husband or wife, children, wealth etc. This notion has induced many to dread religious books, discourses and discussions. Yet others feel that religion is nothing but escapism. These are some of the many misunderstanding and prejudices of the religion prevalent in the society today. Religion, in Indian terminology "Dharma", does not teach escapism; instead it preaches how to lead a successful life. The intent of this series of articles is to deal with a wide range of subjects like the need for spiritual values, relationship between science and religion, concept of soul, and the values needed to make life happy and peaceful.

Concepts of religion and God are not confined to modern man, they existed in primitive man as well. But then for a savage, God was a very limited and personal entity to fulfill his needs.

Religion started as a personal entity and soon extended to the tribal zone. At that stage god worshipped by a tribe was considered as the sole property of that tribe and that entity looked afer the welfare of that particular tribe.

Slowly the concept of religion broadened in the history of mankind and was able to encompass a particular geographical area.

As civilization and culture evolved, the broadening thought process of man gave birth to the concept of a Universal Religion that aimed at the welfare of the eintire humanity. Over the next few weeks, let us explore the treasures that can be bestowed by a universal religion which is the Key to A Happy Life.

**Part II - India weekly-USA on July 6, 2003**

To discover the key to a happy life, one should start with the understanding of the terrestrial realm of human beings before dwelling on the celestial realm of God, heaven, and spirituality. Indian scriptures say "yatha brahmanda, tatha pindanda" - the microcosm (human body) is the reflection of the macrocosm (universe).

This implies that by understanding and analyzing the human body, one can comprehend the entire universe. By analyzing a test-tube full of sea water, one can understand the nature and chemical composition of the entire body of the sea. Likewise, human body is itself a perfect sample having both terrestrial and celestial elements.

A human being is the supreme product of natural evolution - a shining jewel in the crown of the Creation. Unfortuantely, today's man has not been able to use his own natural potency to the fullest. A great philosopher and former President of India, Dr. Radhakrishnan said, "Man has learnt to swim like a fish in the water. He has learnt to fly like a bird in the air. But he has not learnt to live like a man on the earth".

Man and society have embarked on one-dimensional growth targeting the material world. With the help of science and technology modern man has learnt to dive deep into the sea and fetch the treasure of pearls and corals as well as other secrets.

Likewise he is able to reach the space and travel far to the heavenly bodies and bring back the stones, sand and other secrets of those bodies. Yet this poor being is unable to understand his fellow human being or delve into his own mind and body complex.





The Creation, a valuable artwork of God, is not meaningless. The universe we live in is a beautiful living entity.

The rising sun, shining stars, blooming flowers, flowing streams, chirping birds all have added beauty to this world. On the basis of the quality and quantity of consciousness (prajna) we can classify the whole world of movable (sachara) and immovable (achara) into four categories. Matter, Plants, Animals and Man.

Matter has no life; there is no response to stimulus from matter. It is not conscious of its own existence or the existence of the surrounding world. Plants have life; they respire, transpire, and produce food through photosynthesis.

But there is very little response from them to stimulus. A few plants like touch-me-not and pitcher plant demonstrate some response, but the response is very basic and not intellectual.

Next we come to animals. They have life, they are conscious of their existence as well as the existence of the surrounding world, and there is limited response to the stimulous, the response being primarily instinctive and not intellectual.

Man on the top of the creation ladder has life, awareness of the surrounding world and his own self. Man's response to stimulus is both instinctive and intellectual. Creation has gifted human beings with so much potential, including rational thinking. By acquiring certain values and qualities, man can evolve and live up to the huge potential that is latent within each human being.

Man is a complex composition of body, mind and soul. For optimal functioning, each of these components needs to be fine-tuned and nourished. As an analogy, let us consider a public addressing system consisting of a microphone, an amplifier and several loud speakers.

For this sound system to function, energy or power is needed in the form of electricity. Our body can be compared to the microphone, mind to the amplifier, and the different parts of the brain like the auditory lobe, occipital lobe, ophthalmic lobe etc., to the speakers.

The soul is like the electricity pervading and energizing this body-mind complex. We provide body with food everyday. Similarly, we should strive to provide the mind and the intellect with knowledge. The most important of all, we should satisfy the hunger of the soul with its food-worship, prayer and meditation. As the soul pervades the body and mind, nourishing it is critical to the overall well being of the entire body-mind complex.

Unfortunately, modern man is leading a life of rat race full of tension, anxiety and insecurity.

The single dimensional aspect of modern life has hypnotized people into believing that they have no time to read or think, let alone worship or meditate. At any cost modern man provides time to satisfy the needs of the physical body like food, work, dressing and sleeping.

He needs to find time also to fulfill the needs of the mind and of the soul. Otherwise, man cannot be complete; he remains ignorant of all other aspects of life. For the wholesome and comprehensive development of a human being, one should provide food to the body, knowledge to the mind and spiritual practices to the soul.

**Part III -India weekly-USA on July 13, 2003**

Great philosophers of India have identified five sheaths in a human, known as Panchakoshas. They are : Annamaya kosha, Pranamaya kosha, Manomaya kosha, Vijnanamaya kosha and Ananda maya kosha. These are physio-psychological layers that are progressively subtler. The essence of an individual, the Atma or soul is depicted as encompassed by these five sheaths, each with its own distinct characteristics. For a wholesome and happy life one must balance and nourish each of these sheaths.

Let us start with the Annamaya kosha that corresponds to



the physical body. This physical entity requires food to nourish and preserve it.

A human being constantly strives to satisfy hunger and other cravings and urges experienced by this physical body. It is important to satisfy these demands; but modern man is caught up with this physical entity at the expense of other dimensions.

Gratifying the demands of the physical body like hunger, thirst, sleep and sex are so dominating that he is unable to hear the cry of the other subtler entities.

Even in satisfying the needs of the physical body, man today is not nourishing it. Many even hurt it.

The Indian heritage recognizes four quests that the humans strive to attain: Dharma - the righteous path, Artha - the means of satisfying desires, Kama - desires and Moksha - the salvation.

The order of these quests as given by the sages of India is critical. It implies that by applying Dharma to acquire Artha and to satisfy Kama, one can attain Moksha easily.

Here, Dharma is the underlying base on which one shapes his life that will lead to salvation naturally. Modern life has somehow reordered it as Kama, Artha, Moksha and Dharma.

This conveys that everyone has Kama, to satisfy this, one needs Artha, for ever lasting happiness one desires Moksha; if one cannot find this Moksha easily, then one can consider Dharma.

Contrary to the common belief, no complete religion or philosophy is opposed to satisfying the physical needs. As long as the pursuit is based on dharma, it is not only acceptable, it is essential for the wholesome well being of an individual.

Different religious/philosophies set different codes of dharma for individuals in various stages of life. As annamaya kosha is part of the human being, it is necessary for one to nourish and feed it.

This requires wealth and to acquire wealth a man should earn, and to earn one must work. By earning a living in a dharmic, way, it is possible for one to achieve moksha through artha and kama.

Annamaya kosha or physical body is very valuable. The great Sanskrit poet Kalidasa says, "Body is the noble means to attain righteousness". Another great saint Lord Basavanna opines, "One should not abuse this valuable body - a gift of God, which is a noble instrument to attain God (Divinity)".

Alas, today what is this poor man doing ? Even in satisfying the demands of the physical body, he is adopting wrong methods that are not conducive to the very physical body ! He is adopting wrong habits in even activities like eating, drinking and satisfying his sexual and other desires. Without the safety valve of dharma, the wanton pursuits of basic desires can be detrimental not only to the individuals but also to the society. Common habits like smoking, drugs, alcohol consumption, and free sex are hurting the physical body and also affecting the very fabric of the society.

God has created lungs to breath air and not to inhale tobacco; smoking cigarettes not only wastes money, but also spoils the health of the individuals, family and environment.

Alcoholic and drug addicted people are curses to their children and spouses. They are unable to perform their duties or play their role in the family and society. Bad sex habits have even resulted in many epidemic diseases in the society.

Man is endowed with so many capabilities and needs to utilize them beter to uplift oneself, family and the society. As an interesting observation, unlike most animals with head and stomach at the same level, man is created with the head at a higher level than the stomach.

This seems to indicate that man is more of a thinking and a rational being and not just an instinctive animal.

For a wholesome and happy life man needs to use this rational thinking within the boundary defined by ones own dharma towards a balanced nourishment of Annamaya kosha.

to be continued..................



# ಗುರುದೇವಾಷ್ಟಕ

- ಮೌನೇಶ ಈರಪ್ಪ

ಶರಣ ಧರ್ಮ ಪೋಷಕ ಶ್ರೀ ಗುರು ಅಪ್ಪಾಜಿ
ವಿಶ್ವಧರ್ಮಪ್ರಚಾರಕ ಶ್ರೀ ಗುರು ಅಪ್ಪಾಜಿ
ಅಪ್ರತಿಮ ವಾಗ್ಮಿ ಶ್ರೀ ಗುರು ಅಪ್ಪಾಜಿ
ಶರಣೆಂಬೆ ನಾ ಲಿಂಗಾನಂದ ಅಪ್ಪಾಜಿ ॥1॥
ಶರಣು ಶರಣಾರ್ಥಿ

ಪ್ರವಚನ ಪಿತಾಮಹ ಶ್ರೀ ಗುರು ಅಪ್ಪಾಜಿ
ಶರಣ ಮೇಳ ರೂಹಾರಿ ಶ್ರೀ ಗುರು ಅಪ್ಪಾಜಿ
ಸಮತಾವಾದಿ ಶ್ರೀ ಗುರು ಅಪ್ಪಾಜಿ
ಶರಣೆಂಬೆ ನಾ ಲಿಂಗಾನಂದ ಅಪ್ಪಾಜಿ ॥2॥
ಶರಣು ಶರಣಾರ್ಥಿ

ಕ್ರಾಂತಿ ಪುರುಷ ಶ್ರೀ ಗುರು ಅಪ್ಪಾಜಿ
ಚಿನ್ಮಯ ಜ್ಞಾನಿ ಶ್ರೀ ಗುರು ಅಪ್ಪಾಜಿ
ಆಧ್ಯಾತ್ಮ ಚಿಂತಕ ಶ್ರೀ ಗುರು ಅಪ್ಪಾಜಿ
ಶರಣೆಂಬೆ ನಾ ಲಿಂಗಾನಂದ ಅಪ್ಪಾಜಿ ॥3॥
ಶರಣು ಶರಣಾರ್ಥಿ

ಕಂಚಿನ ಕಂಠದ ಶ್ರೀ ಗುರು ಅಪ್ಪಾಜಿ
ಜ್ಞಾನ ದಾಸೋಹಿ ಶ್ರೀ ಗುರು ಅಪ್ಪಾಜಿ
ಅಭೇದ್ಯ ಭೇದ್ಯ ಶ್ರೀ ಗುರು ಅಪ್ಪಾಜಿ
ಶರಣೆಂಬೆ ನಾ ಲಿಂಗಾನಂದ ಅಪ್ಪಾಜಿ ॥4॥
ಶರಣು ಶರಣಾರ್ಥಿ

ಬಸವ ತತ್ವ ಬೋಧಕ ಶ್ರೀ ಗುರು ಅಪ್ಪಾಜಿ
ಯೋಗಿ ಪುರುಷ ಶ್ರೀ ಗುರು ಅಪ್ಪಾಜಿ
ಸುಜ್ಞಾನ ಮೂರ್ತಿ ಶ್ರೀ ಗುರು ಅಪ್ಪಾಜಿ
ಶರಣೆಂಬೆ ನಾ ಲಿಂಗಾನಂದ ಅಪ್ಪಾಜಿ ॥5॥
ಶರಣು ಶರಣಾರ್ಥಿ

ಶಾಂತಿದೂತ ಶ್ರೀ ಗುರು ಅಪ್ಪಾಜಿ
ಭ್ರಾಂತಿದೂರಕ ಶ್ರೀ ಗುರು ಅಪ್ಪಾಜಿ
ಅನರ್ಘ್ಯ ರತ್ನ ಶ್ರೀ ಗುರು ಅಪ್ಪಾಜಿ
ಶರಣೆಂಬೆ ನಾ ಲಿಂಗಾನಂದ ಅಪ್ಪಾಜಿ ॥6॥
ಶರಣು ಶರಣಾರ್ಥಿ

ದಿವ್ಯ ತೇಜ ಶ್ರೀ ಗುರು ಅಪ್ಪಾಜಿ
ಮಾತೃಹೃದಯಿ ಶ್ರೀ ಗುರು ಅಪ್ಪಾಜಿ
ಶರಣ ಜನ ವಂಧ್ಯ ಶ್ರೀ ಗುರು ಅಪ್ಪಾಜಿ
ಶರಣೆಂಬೆ ನಾ ಲಿಂಗಾನಂದ ಅಪ್ಪಾಜಿ ॥7॥
ಶರಣು ಶರಣಾರ್ಥಿ

ಕಲ್ಯಾಣ ಪ್ರವರ್ಧಕ ಶ್ರೀ ಗುರು ಅಪ್ಪಾಜಿ
ಸಮಾಜ ಸುಧಾರಕ ಶ್ರೀ ಗುರು ಅಪ್ಪಾಜಿ
ಜಂಗಮ ಮೂರ್ತಿ ಶ್ರೀ ಗುರು ಅಪ್ಪಾಜಿ
ಪೂಜಿಪೆ ನಾ ಲಿಂಗಾನಂದ ಅಪ್ಪಾಜಿ ॥8॥
ಶರಣು ಶರಣಾರ್ಥಿ



ದಿ. 31-8-2003 ರಂದು ಪರಮ ಪೂಜ್ಯ ಲಿಂಗೈಕ್ಯ ಮಹಾಜಗದ್ಗುರು ಲಿಂಗಾನಂದ ಮಹಾಸ್ವಾಮಿಗಳವರ 73ನೆಯ ಜಯಂತಿಯು ಒದಗಿ ಬಂದಿದ್ದು ಅಂದು ರಾಷ್ಟ್ರೀಯ ಬಸವ ದಳಗಳ ಹುಟ್ಟು ಹಬ್ಬವನ್ನೂ ಆಚರಿಸಲಾಗುವುದು. ತನ್ನಿಮಿತ್ತ ಕಲ್ಯಾಣ ಕಿರಣದ ಓದುಗರಿಗೆಲ್ಲ ಶುಭ ಹಾರೈಕೆಗಳು. ಅಂದು ಎಲ್ಲರೂ ತಮ್ಮ ತಮ್ಮ ಊರಿನ ರಾಷ್ಟ್ರೀಯ ಬಸವ ದಳಗಳ ಹುಟ್ಟು ಹಬ್ಬವನ್ನು ಆಚರಿಸಬೇಕೆಂದು ಕೋರುತ್ತೇವೆ.

* * * * * * * * *

## ಶ್ರಾವಣ ಮಾಸ

## ಪವಿತ್ರ ಮಾಸ ವ್ರತಾಚರಣೆ

ಲಿಂಗಾಯತ ಧರ್ಮದ ಸಂವಿಧಾನವಾದ ವಚನ ಶಾಸ್ತ್ರದ ಪ್ರಕಾರ ತನ್ನಿಂದ ತಾನೇ ಯಾವ ಮಾಸವೂ ಪವಿತ್ರವಲ್ಲ, ಅಪವಿತ್ರವೂ ಅಲ್ಲ. ಯಾವ ಗಳಿಗೆಯೂ ಶುಭವಲ್ಲ, ಅಶುಭವಲ್ಲ. ನಾವು ಮಾಡುವ ಕಾರ್ಯಗಳಿಂದ, ಚಿಂತನೆಗಳಿಂದ ಆ ದಿನಕ್ಕೆ, ಆ ಗಳಿಗೆಗೆ ಉತ್ತಮ, ಮಧ್ಯಮ, ಅಧಮ ಸ್ಥಿತಿ ಪ್ರಾಪ್ತಿಯಾಗುತ್ತದೆ. ಧರ್ಮಪಿತ ಬಸವಣ್ಣನವರನ್ನು ಕುರಿತು ಹೇಳಲಾಗುತ್ತದೆ, "ನಿಚ್ಚ ನಿಚ್ಚ ಶಿವರಾತ್ರಿಯ ಅಚ್ಚರಿಯಿಂ ಮಾಳ್ಪೆ ."

ಶರಣ ನಿದ್ರೆಗೈದಡೆ ಜಪ ಕಾಣಿರೊ,
ಶರಣನೆದ್ದು ಕುಳಿತಡೆ ಶಿವರಾತ್ರಿ ಕಾಣಿರೊ,
ಶರಣ ನಡೆದುದೆ ಪಾವನ ಕಾಣಿರೊ,
ಶರಣ ನುಡಿದುದೆ ಶಿವತತ್ತ್ವ ಕಾಣಿರೊ,
ನಮ್ಮ ಲಿಂಗದೇವನ ಶರಣನ
ಕಾಯವೆ ಕೈಲಾಸ ಕಾಣಿರೊ. (ಬ.ವ.ದೀ. 868)

ಇಡೀ ಜೀವನವೇ ದೈವೀಕರಣಗೊಳ್ಳಬೇಕು ಎಂಬುದೇ ಬಸವ ಧರ್ಮದ ಸಾರ. ಆದರೂ ಕೆಲವು ಮಾಸಗಳನ್ನು, ಸಮಯವನ್ನು ನಾವು ನಿಗದಿ ಪಡಿಸಿಕೊಂಡು ಸ್ವಯಂ ಶಿಸ್ತನ್ನು ಅಳವಡಿಸಿಕೊಳ್ಳಲೋಸುಗ ವಚನ ವಾಙ್ಮಯಕ್ಕೆ ಹೊರತಾಗದ ರೀತಿಯಲ್ಲಿ ನೇಮವನ್ನು ಅಳವಡಿಸಿಕೊಳ್ಳಬೇಕು. ಅಂಥದೊಂದು ಮಾಸವನ್ನು ಗುರುತಿಸಿಕೊಳ್ಳುವುದಾದರೆ ಅದು ಶ್ರಾವಣ ಮಾಸ. ಒಂದನೆಯದಾಗಿ, ಧರ್ಮಪಿತರು ಲಿಂಗೈಕ್ಯರಾದುದು ಶ್ರಾವಣ ಮಾಸದಲ್ಲಿ. ಅದೇ ರೀತಿ ತಾಯಿ ನೀಲಾಂಬಿಕೆಯವರು ಲಿಂಗೈಕ್ಯರಾದುದು ಸಹ ಶ್ರಾವಣ ಮಾಸದಲ್ಲಿ. ಶ್ರಾವಣಶುದ್ಧ ಪಂಚಮಿಯಂದು ಇಚ್ಛಾಮರಣಿಗಳಾಗಿ ಧರ್ಮಪಿತರು, ಮರುದಿನ ಶುದ್ಧ ಷಷ್ಠಿಯಂದು ತಾಯಿ ನೀಲಮ್ಮನವರು ಲಿಂಗೈಕ್ಯರಾದರು.

ಸಾಮಾನ್ಯವಾಗಿ, ಮಳೆ ಬಿದ್ದು ಭೂಮಿ ಹದವಾಗಿ, ಬಿತ್ತನೆಯೂ ಆಗಿ ಶ್ರಾವಣದ ಹೊತ್ತಿಗೆ ಸಸಿ ಮೇಲೇರುತ್ತವೆ. ರೈತನಿಗೂ ಬಿಡುವು. ಬೆಳೆಗಳು ಬರಲು ಸಮಯವಿರುವುದರಿಂದ ವ್ಯಾಪಾರಸ್ಥರಿಗೂ ಬಿಡುವು. ಹೀಗಾಗಿ ಉತ್ತರ ಕರ್ನಾಟಕದಲ್ಲಿ ತಪ್ಪದೆ ಶ್ರಾವಣ ಮಾಸದಲ್ಲಿ ಪ್ರವಚನ - ಕೀರ್ತನಗಳನ್ನು ಹೇಳಿಸುವ, ಕೇಳುವ ಪರಿಪಾಠ ಇರುತ್ತದೆ. ಉತ್ತಮ ಪ್ರವಚನಕಾರರೂ ಸಿಗುವುದಿಲ್ಲ, ಕೆಲವೊಮ್ಮೆ ಪುರಾಣ ಶೈಲಿಯನ್ನನುಸರಿಸಿ ಕೆಲವರು ಮೂಢ ನಂಬಿಕೆಗಳನ್ನು ತುಂಬುತ್ತಾರೆ. ಏಕದೇವೋಪಾಸಕ ಧರ್ಮವಾದ ಇಸ್ಲಾಂದಲ್ಲಿ ರಂಜಾನ್ ಅನ್ನು ಪವಿತ್ರ ಮಾಸವೆಂದು ಆಚರಿಸುತ್ತಾರೆ. ಅದೇ ರೀತಿ ಲಿಂಗಾಯತ ಧರ್ಮೀಯರು ಶ್ರಾವಣ ಮಾಸದ ವ್ರತಾಚರಣೆ ಕೈಗೊಳ್ಳಬೇಕು. ಹೇಗೆ ಮುಸ್ಲಿಂ ಧರ್ಮೀಯರು ತಮ್ಮ ಮಕ್ಕಳನ್ನೂ ವಯೋಭೇದವಿಲ್ಲದೆ ರಂಜಾನ್ ಆಚರಣೆಯಲ್ಲಿ ತೊಡಗಿಸುತ್ತಾರೋ ಹಾಗೆ ಲಿಂಗಾಯತರು ಸಹ ಕಡ್ಡಾಯವಾಗಿ ಶ್ರಾವಣ ಮಾಸದ ವ್ರತಾಚರಣೆಯಲ್ಲಿ ತಾವೂ ತೊಡಗಿ, ಮಕ್ಕಳನ್ನೂ ತೊಡಗಿಸಬೇಕು. ಮಾತ್ರವಲ್ಲ,



ಬಸವಣ್ಣನವರು ತೋರಿದ ಮಾರ್ಗವನ್ನು ಅನುಸರಿಸಲು ಎಲ್ಲರಿಗೂ ಅವಕಾಶವಿರುವುದರಿಂದ ಲಿಂಗಾಯತೇತರ ಬಸವಾಭಿಮಾನಿಗಳು ಸಹ ತಮ್ಮನ್ನು ವ್ರತಾಚರಣೆಯಲ್ಲಿ ತೊಡಗಿಸಿ ಕೊಳ್ಳಬೇಕು.

ಕೆಲವು ನಿಷ್ಠಾವಂತ ಕುಟುಂಬಗಳವರನ್ನು ಬಿಟ್ಟರೆ ಬಹಳ ಜನರು ತಮ್ಮ ಮಕ್ಕಳಿಗೆ ಇಷ್ಟಲಿಂಗಧಾರಣೆಯಲ್ಲಿ ನಿಷ್ಠೆಯನ್ನೇ ಬೆಳೆಸುವುದಿಲ್ಲ. ಮದುವೆಯ ಸಮಯದಲ್ಲಿ ಲಿಂಗಧಾರಣೆ ಮಾಡಿಸುತ್ತಾರೆ. ಆ ನಂತರವೂ ಆ ನಿಷ್ಠೆಯನ್ನು ಉಳಿಸಿಕೊಳ್ಳುವುದಿಲ್ಲ. ಆದ್ದರಿಂದ ಶ್ರಾವಣಮಾಸದಲ್ಲಾದರೂ ಸುಪ್ರಭಾತದಲ್ಲಿ ಇಷ್ಟಲಿಂಗ ಪೂಜೆಯನ್ನು, ಅಂಗದ ಮೇಲೆ ಧರಿಸಿಕೊಳ್ಳದಿದ್ದರೂ ಚಿಂತೆಯಿಲ್ಲ, ಮಾಡಿಕೊಳ್ಳುವ ಪರಿಪಾಠ ಬೆಳಸಬೇಕು. ರಜಾ ದಿನದಂದು ಸಾಮೂಹಿಕ ಇಷ್ಟಲಿಂಗಪೂಜೆಯಲ್ಲಿ ಇಡೀ ಕುಟುಂಬ ಪರಿವಾರದವರು ಭಾಗವಹಿಸಬಹುದು. ಉಳಿದ ದಿನಗಳಲ್ಲಿ ಇಷ್ಟಲಿಂಗಾರ್ಚನೆ ಮಾಡಿ, ಬಸವ ಮಂಗಲ ಮಾಡಿ ಮಕ್ಕಳು ಶಾಲೆಗೆ, ದೊಡ್ಡವರು ತಮ್ಮ ತಮ್ಮ ಕೆಲಸಕ್ಕೆ ಹೋಗಬೇಕು.

ಶ್ರಾವಣ ಮಾಸದ ಅಮವಾಸ್ಯೆಯ ಮರುದಿನ ಅಂದರೆ ಪ್ರತಿಪದೆಯ ದಿನ ವಿಶಾಲವಾಗಿರುವ ನಡುಮನೆಯಲ್ಲಿ ಒಂದು ಮಂಟಪ ಕಟ್ಟಿ, ಗುರು ಬಸವಣ್ಣನವರ ಭಾವಚಿತ್ರ ಪ್ರತಿಷ್ಠಾಪಿಸಬೇಕು. ಮನೆಯ ಮುಖ್ಯಸ್ಥರು ಸುಪ್ರಭಾತದಲ್ಲಿ ಎದ್ದು ಸ್ನಾನ ಮಾಡಿ, ಇಷ್ಟಲಿಂಗಾರ್ಚನೆ ಪೂರೈಸಿ, ಬಸವೇಶ್ವರ ಪೂಜಾ ವ್ರತವನ್ನು ಮಾಡಬೇಕು. ಮಕ್ಕಳು ಶಾಲೆಗೆ ಹೋಗುವಷ್ಟರಲ್ಲಿ ಸ್ನಾನ - ಇಷ್ಟಲಿಂಗ ಪೂಜೆ ಪೂರೈಸಿ ಗುರುಬಸವಣ್ಣನವರಿಗೆ ಪುಷ್ಪ ಏರಿಸಿ, ನಮಸ್ಕರಿಸಿ, ಉಪಾಹಾರ ಮಾಡಿ ಹೊರಡಬೇಕು. ಅದೇ ರೀತಿ ಕೆಲಸಕ್ಕೆ ಹೋಗುವವರು ಕೂಡ ಮಾಡಬೇಕು. ಶ್ರಾವಣ ಮಾಸದ ಪ್ರತಿಪದೆಯಿಂದ ಷಷ್ಠಿಯವರೆಗೆ 6 ದಿವಸಗಳ ಕಾಲ ಬಸವೇಶ್ವರ ಪೂಜಾವ್ರತ ಮಾಡಬೇಕು.

ಏಳನೆಯ ದಿವಸದಿಂದ ಇಷ್ಟಲಿಂಗಾರ್ಚನೆ, ಸಂಕ್ಷಿಪ್ತ ಗುರುಬಸವ ಪೂಜೆ ಮಾಡಿ ವಚನ ಪಠಣ ವ್ರತವನ್ನು ಪ್ರಾರಂಭಿಸಬೇಕು. ದಿನಾಲೂ 100 ವಚನ ಪಠಿಸಬೇಕು. ಬೆಳಗಿನ ಹೊತ್ತು ಆಗದೆ ಇದ್ದರೆ, ಸಂಜೆ 7 ಗಂಟೆಗೆ ನೆನಹು ಮಾಡಿ ವಚನ ಪಠಣ ಮಾಡಬಹುದು. ಈ ಪಠಣಕ್ಕೆ 1. ಬಸವ ವಚನ ದೀಪ್ತಿ 2. ಬಸವ ದರ್ಶನ ಕೃತಿಗಳನ್ನು ಬಳಸಿಕೊಳ್ಳಬೇಕು. ಮತ್ತು ಸರ್ಕಾರವು ಪ್ರಕಟಿಸಿರುವ ವಚನ ಸಂಪುಟಗಳನ್ನು ಬಳಸಿಕೊಳ್ಳಬಹುದು. ಈ ವಚನ ಪಠಣವನ್ನು ಭಾದ್ರಪದ ಚೌತಿ (ಗಣೇಶ ಚತುರ್ಥಿ)ಯಂದು ಮಂಗಲ ಮಾಡಬೇಕು.

ಒಂದು ದಿವಸ ಗಣ ದಾಸೋಹ ಇಟ್ಟುಕೊಂಡು ತಮ್ಮ ಕೈಲಾದಷ್ಟು ಜನರಿಗೆ ಪ್ರಸಾದ ದಾಸೋಹ ಮಾಡಿಸಿ, ಚಿಕ್ಕ ಚಿಕ್ಕ ವಚನ ಸಾಹಿತ್ಯದ ಕೃತಿಗಳನ್ನು ನೆನಪಿನ ಕಾಣಿಕೆಯಾಗಿ ಕೊಡಬೇಕು. ಆರ್ಥಿಕವಾಗಿ ಸಶಕ್ತರಾಗಿದ್ದವರು ದೊಡ್ಡ ಪ್ರಮಾಣದಲ್ಲಿ ಗಣ ದಾಸೋಹ ಮಾಡಿಸಿ ವಚನ ಸಾಹಿತ್ಯಕ್ಕೆ ಸಂಬಂಧಿಸಿದ ಕೃತಿಗಳನ್ನು ನೆನಪಿನ ಕಾಣಿಕೆಯಾಗಿ ಕೊಡಬೇಕು. ಸುದೈವಕ್ಕೆ ಲಿಂಗಾಯತ ಧರ್ಮವನ್ನು ಬೋಧಿಸುವ ಪ್ರವಚನಕಾರರ ಉಪನ್ಯಾಸಗಳಿದ್ದರೆ ಶ್ರಾವಣ ಮಾಸದಲ್ಲಿ ತಪ್ಪದೆ ಕೇಳಬೇಕು. ಅಸಂಬದ್ಧವಾದ ಪುರಾಣಗಳನ್ನು ಕೇಳಲು ಹೋಗದೆ ವಚನ ವಾಙ್ಮಯದ ಅಭ್ಯಾಸ ಮಾಡಬೇಕು.

## ಮನೆಮನೆಯಲ್ಲಿ ಬಸವ ಜ್ಯೋತಿ

3-4 ಜನ ಶರಣ-ಶರಣೆಯರ ಗುಂಪು ಮಾಡಿ, ಶ್ರಾವಣ ಮಾಸದ ಪ್ರತಿ ದಿನ ಸಂಜೆ ಒಬ್ಬೊಬ್ಬರ ಮನೆಯಲ್ಲಿ ಬಸವ ಜ್ಯೋತಿ ಕಾರ್ಯಕ್ರಮ ಇಡಬೇಕು. ರಾಷ್ಟ್ರೀಯ ಬಸವ ದಳಗಳು ಇದ್ದಲ್ಲಿ ಅವರು ತಂಡಗಳನ್ನು ರಚಿಸಿ ಮನೆಗಳಿಗೆ ಕಳಿಸಬೇಕು. ಮನೆಯವರು ತಮ್ಮ ಪರಿಚಿತರನ್ನು, ಬಂಧುಗಳನ್ನು ಆಹ್ವಾನಿಸಬೇಕು. ಧರ್ಮಪಿತರ ಭಾವಚಿತ್ರ ಇಟ್ಟು ಮನೆಯ ಮುಖ್ಯಸ್ಥರು ಪೂಜಿಸಬೇಕು.

1. ಮುಕ್ತಿದಾಯಕ ಶರಣ ರಕ್ಷಕ ಹಾಡಿ ಪೂಜಿಸಬೇಕು.
2. 108 ಮಂತ್ರ ಪಠಣ ಮಾಡಿ ಪುಷ್ಪ ಏರಿಸಬೇಕು.
3. 'ಬಸವ ಪೂಜೆಯ ಮಾಡುವಾ' ಹಾಡಿ ಮತ್ತೊಂದು ಪೂಜೆ ಮಾಡಬೇಕು.
4. 'ಹೂವ ಸೂರ್ಯಾಡೋಣ' ಹೇಳಿ ಪುಷ್ಪ ವೃಷ್ಟಿ ಮಾಡಬೇಕು. ಆಗ ನೆರೆದವರೆಲ್ಲರೂ ಪುಷ್ಪ ವೃಷ್ಟಿ ಮಾಡಬೇಕು.
5. ಸಂಜೆಯ ಸಂಕ್ಷಿಪ್ತ ಪ್ರಾರ್ಥನೆ - ನೆನಹು ಮಾಡಬೇಕು
6. ವಚನ ವಿಶ್ಲೇಷಣೆ ಮಾಡಿ, ಪ್ರವಚನ ಹೇಳಬೇಕು.
7. ಮಂಗಲ ಗೀತೆ ಹಾಡಿ, ಆರತಿ ಮಾಡಿ, ಜಯಘೋಷ ಮಾಡಬೇಕು.
   ಹಸ್ತೋದಕವನ್ನು ಸಿದ್ಧಪಡಿಸಿ, ಕರುಣೋದಕ ಪ್ರಸಾದವನ್ನು ವಿತರಿಸಬೇಕು.
8. ತಮಗೆ ಸಾಧ್ಯವಾದ ಗಣ ಪ್ರಸಾದವನ್ನು ಕೊಡಬೇಕು. ಭಾದ್ರಪದ ಮಾಸದ ತೃತೀಯದಂದು ತಮ್ಮ ಮನೆಯಲ್ಲಿ ನಡೆಯುವ ಈ ಕಾರ್ಯಕ್ರಮ ವಚನ ಪಠಣ ಮುಕ್ತಾಯ ಮಾಡಿ, ಗಣೇಶ ಚೌತಿಯಂದು ಸಾಮೂಹಿಕವಾಗಿ ಒಂದೆಡೆ - ಬಸವ ಮಂಟಪದಲ್ಲಿ ಸೇರಿ, ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ ಅದರ ಕರ್ತೃಗಳಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಜಯಂತಿ ಉತ್ಸವ ಆಚರಿಸಿ, ಸಾಮೂಹಿಕವಾಗಿ ಗಣ ಪ್ರಸಾದ ಸ್ವೀಕರಿಸಿ ಶ್ರಾವಣ ಮಾಸದ ವ್ರತಾಚರಣೆಯನ್ನು ಪೂರ್ಣಗೊಳಿಸಬೇಕು. ಸಮಯಾವಕಾಶ ದೊರೆತರೆ ವಚನ ಲೇಖನವನ್ನು ಸಹ ಮಾಡಬಹುದು.

ಮಠ - ಮಾನ್ಯಗಳು ಧರ್ಮಪ್ರಚಾರದ ಕರ್ತವ್ಯ ಮರೆತಾಗ ತಮ್ಮ ಧರ್ಮದ ಸಂರಕ್ಷಣೆಯ ದೃಷ್ಟಿಯಿಂದ ಪ್ರತಿಯೋರ್ವ ಬಸವ ಭಕ್ತರೂ ಈ ಕಾರ್ಯಕ್ರಮವನ್ನು ಹಮ್ಮಿಕೊಳ್ಳಬೇಕೆಂದು ಕಳಕಳಿಯಿಂದ ಸೂಚಿಸುತ್ತೇವೆ.

- ಮಾತಾಜಿ

### ಆಗಸ್ಟ್ ತಿಂಗಳಿನಲ್ಲಿ ಬರುವ ಹಬ್ಬ-ಹುಣ್ಣಿಮೆ-ಉತ್ಸವಗಳು

| | |
|---|---|
| ಬಸವ ಪಂಚಮಿ | - 2-8-2003 |
| ನೀಲಮ್ಮ ಷಷ್ಠಿ | - 3-8-2003 |
| ನೀಲಾಂಬಿಕಾ ಪೌರ್ಣಿಮೆ | - 12-8-2003 |
| ಸ್ವಾತಂತ್ರ್ಯೋತ್ಸವ | - 15-8-2003 |
| ಲಿಂ॥ ಪೂಜ್ಯ ಶ್ರೀಮನ್ ನಿರಂಜನ ಮಹಾಜಗದ್ಗುರು ಲಿಂಗಾನಂದ ಸ್ವಾಮಿಗಳ ಜಯಂತಿ ಹಾಗೂ ರಾಷ್ಟ್ರೀಯ ಬಸವ ದಳದ ಹುಟ್ಟು ಹಬ್ಬ | - 31-8-2003 |
| ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ 46ನೇ ವರ್ಧಂತಿ ಆಚರಣೆ | - 31-8-2003 |



## ಭಕ್ತಿ-ಜ್ಞಾನಗಳ ಸಂಗಮ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರು

- ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ

ಜೀವನ ಬೇಸರ ತಂದಿದೆಯೆ ? ಬಾಳು ದುಸ್ತರವಾಗಿದೆಯೆ ? ಮನಸ್ಸಿಗೆ ಅಸಮಾಧಾನ ಕಾಡುತ್ತಿದೆಯೆ ? ನಿಮ್ಮ ಅಳಲನ್ನು ಕೇಳಿ ಸಮಾಧಾನ ಹೇಳುವವರಿಲ್ಲವೆ ? ಅಥವಾ ನಿಮಗಾದ ಸಂತೋಷವನ್ನು ಜ್ಞಾನಿಗಳೊಡನೆ ಹಂಚಿಕೊಂಡು ಮತ್ತೂ ಸಂತೋಷವನ್ನು ಹೆಚ್ಚಿಸಿಕೊಳ್ಳಬೇಕೆ ? ನಿಮ್ಮ ಭಕ್ತಿ ಕುಂಠಿತವಾಗಿದೆ ಎನ್ನಿಸುತ್ತಿದೆಯೆ ? ಈ ಎಲ್ಲಾ ಸಮಸ್ಯೆಗಳಿಗೆ ಪರಿಹಾರ ಬೇಕೆಂದರೆ ಪೂಜ್ಯ ಗಂಗಾಮಾತಾಜಿಯವರ ಬಳಿ ಹೋಗಲೇ ಬೇಕು.

ಹೂವಿನ ಪರಿಮಳಕ್ಕೆ ಆಕರ್ಷಿತವಾಗಿ ದುಂಬಿಗಳು ಬಂದು ಮಕರಂಧವನ್ನು ಹೀರುವಂತೆ ಪೂಜ್ಯ ಮಾತೆ ಗಂಗಾದೇವಿಯವರು ಎಲ್ಲಿರುತ್ತಾರೋ ಅಲ್ಲೆಲ್ಲ ಸದಾ ಶರಣ-ಶರಣೆಯರ ದಂಡು ಇದ್ದೇ ಇರುತ್ತದೆ. ಭಕ್ತಿ-ಜ್ಞಾನ-ವಿನಯಗಳ ಸಂಗಮವಾದ ಅವರಲ್ಲಿ ಮಾತನಾಡುವುದೆಂದರೆ ಎಲ್ಲರಿಗೂ ಜೇನುತುಪ್ಪ ಸವಿದಷ್ಟು ಆನಂದ. ಪ್ರತಿ ವರ್ಷ ಶರಣ ಮೇಳ ಪ್ರಚಾರಾರ್ಥ ಎಲ್ಲ ಊರುಗಳಿಗೆ ಭೇಟಿ ಕೊಡುವ ಅವರನ್ನು, ಜನರು ಕಾತುರರಾಗಿ ಕಾಯುತ್ತಿರುತ್ತಾರೆ. ವರ್ಷವಿಡೀ ತಮ್ಮ ಬಾಳಿನಲ್ಲಿ ಎದುರಾದ ಸಮಸ್ಯೆಗಳನ್ನು ಅವರ ಮುಂದಿಟ್ಟು ಅದಕ್ಕೆ ಸಮಾಧಾನ ಪಡೆಯುತ್ತಾರೆ. ಒಬ್ಬ ಮನಶಾಸ್ತ್ರಜ್ಞನು ತನ್ನ ಬಳಿ ಬಂದ ರೋಗಿಯ ವಿಚಾರಗಳನ್ನು ಅತಿ ಆಸಕ್ತಿಯಿಂದ ಕೇಳಿ ಅದಕ್ಕೆ ಸೂಕ್ತ ಚಿಕಿತ್ಸೆಯನ್ನು ನೀಡುವಂತೆ, ಪೂಜ್ಯರು ಜನರ ಸಮಸ್ಯೆಗಳನ್ನು ಶಾಂತ ಚಿತ್ತರಾಗಿ ಆಲಿಸಿ, ಅಷ್ಟೇ ಆತ್ಮೀಯತೆಯಿಂದ, ಅಷ್ಟೇ ಸಮಾಧಾನದಿಂದ, ಸಾಂತ್ವನದ ಮಾತುಗಳನ್ನಾಡಿ ನೊಂದ ಮನಗಳಿಗೆ ಮುಲಾಮನ್ನು ಹಚ್ಚುತ್ತಾರೆ.

ಬಸವಣ್ಣನವರ ಕಾರುಣ್ಯದ ಶಿಶುವಾಗಿ, ಪೂಜ್ಯ ಅಪ್ಪಾಜಿ ಹಾಗೂ ಮಾತಾಜಿಯವರ ಕರಕಮಲದಲ್ಲಿ ಜ್ಞಾನ ಕುಸುಮವಾಗಿ ಬೆಳೆದ ಪೂಜ್ಯ ಗಂಗಾಮಾತಾಜಿಯವರು ಕೇವಲ 13 ವರ್ಷದವರಿದ್ದಾಗಲೇ ಆಧ್ಯಾತ್ಮಿಕ ಪಥಕ್ಕೆ ಕಾಲಿರಿಸಿದವರು. ಪೂಜ್ಯ ದ್ವಯರುಗಳ ಬಸವ ಧರ್ಮ ಪ್ರಚಾರ ಕಾರ್ಯದಲ್ಲಿ ಹೆಗಲೆಣೆಯಾಗಿ ನಿಂತು ಅತ್ಯಂತ ಸಮರ್ಥವಾಗಿ, ಬಂದ ಎಡರು ತೊಡರುಗಳನ್ನು ಎದುರಿಸಿದವರು. ಅವರಲ್ಲಿದ್ದ ಅಪಾರ ಪ್ರತಿಭೆಯನ್ನು ಪೂಜ್ಯ ದ್ವಯರು ಗುರುತಿಸಿ, ಜಂಗಮ ದೀಕ್ಷೆ ನೀಡಿ ಪ್ರಚಾರಕ್ಕೆ ಕಳುಹಿಸಿದಾಗ, ಧರ್ಮ ಪ್ರಚಾರ ಕಾರ್ಯವನ್ನೇ ಒಂದು ತಪಸ್ಸನ್ನಾಗಿ ಸ್ವೀಕರಿಸಿ ನಿರಂತರವಾಗಿ ಅತ್ಯಂತ ಸುಲಲಿತವಾಗಿ ಜ್ಞಾನ ಪೂರ್ಣ ಪ್ರವಚನವನ್ನು ನೀಡುತ್ತ ಅಂದಿನಿಂದ ಇಂದಿನವರೆಗೂ ಅಪಾರ ಜನಮನ್ನಣೆಯನ್ನು ನಿರಂತರವಾಗಿ ಗಳಿಸುತ್ತಾ ಬಂದಿದ್ದಾರೆ. ಅವರ ಪ್ರವಚನದ ಮೋಡಿಗೆ ಮರುಳಾಗದವರೇ ಇಲ್ಲ. ಅವರ ಮೂಲಕ ಜ್ಞಾನ ಪಡೆದ ಜನ ಇಂದು ಶರಣ ಮೇಳ, ಕಲ್ಯಾಣ ಪರ್ವದಲ್ಲಿ ನಿರಂತರವಾಗಿ ಬಂದು ತಮ್ಮ ಬಾಳನ್ನು ತಮ್ಮ ವಾಣಿಯಿಂದ ಬೆಳಗಿದ ಮಾತೆಗೆ ತುಂಬು

ಹೃದಯದ ಕೃತಜ್ಞತೆಗಳನ್ನು ಅರ್ಪಿಸುತ್ತಾರೆ.

ಪೂಜ್ಯ ಮಾತೆ ಗಂಗಾದೇವಿಯವರು ಭಕ್ತಿಯೋಗಿಗಳು. ಭಕ್ತಿಯ ವಿವಿಧ ರೂಪಗಳಾದ ದಯೆ, ಪ್ರೀತಿ, ವಾತ್ಸಲ್ಯ, ಮಾನವೀಯತೆ, ಗೌರವ, ನಿರಂಹಂಕಾರ ಈ ಎಲ್ಲವನ್ನೂ ನಮ್ಮ ಜೀವನದಲ್ಲಿ ಸಾಧಿಸಬೇಕಾದರೆ ಅವರ ದಿವ್ಯ ವ್ಯಕ್ತಿತ್ವವನ್ನು ಅನುಸರಿಸಲೇಬೇಕು. ಧರ್ಮ ಗುರು ಬಸವಣ್ಣನವರ ಪೂಜೆ, ಲಿಂಗಪೂಜೆಯಲ್ಲಿ ಅವರು ತೋರುವ ಆ ಭಕ್ತಿ ಶ್ರದ್ಧೆ ಅನುಕರಣೀಯವಾದುದು. ಗುರು ಬಸವಣ್ಣನವರಲ್ಲಿ ಹಾಗೂ ಸೃಷ್ಟಿಕರ್ತ ಪರಮಾತ್ಮನಲ್ಲಿ ನಿಷ್ಠೆಯ ಅಳವಡಿಕೆಗೆ ಅವರು ತೋರುವ ಏಕೈಕ ಮಾರ್ಗವೆಂದರೆ 'ಸಕಲ ಜೀವ ರಾಶಿಗಳಲ್ಲಿಯೂ ದಯೆ'. 'ಮಕ್ಕಳಲ್ಲಿ ಪ್ರೀತಿ ವಾತ್ಸಲ್ಯವಿರಲಿ, ದೀನ ದಲಿತರಲ್ಲಿ ಕರುಣೆ ತೋರಿರಿ, ಹಿರಿಯರನ್ನು ಗೌರವದಿಂದ ಕಾಣುವ ಮನೋಭಾವ ಬೆಳೆಸಿಕೊಳ್ಳಿರಿ, ವಿಧೇಯತೆಯಿಂದ ಎಲ್ಲರನ್ನು ಆದರಿಸಿರಿ, ನೀವು ಎಷ್ಟೇ ದೊಡ್ಡವರಾದರೂ ಸಹ ಅಹಂಕಾರ ತೋರದೇ ನಿರಹಂಕಾರ-ಕಿಂಕರತ್ವವನ್ನು ಬೆಳೆಸಿಕೊಳ್ಳಿರಿ. ಈ ಎಲ್ಲವೂ ಭಕ್ತಿಯ ವಿವಿಧ ರೂಪಗಳು. ಇವನ್ನು ಅಳವಡಿಸಿಕೊಂಡರೆ ಪೂಜೆಯಲ್ಲಿ ಭಕ್ತಿ ತಾನಾಗಿಯೇ ಅಳವಟ್ಟು, ಗುರು ಬಸವಣ್ಣನವರ, ಲಿಂಗದೇವನ ಕಾರುಣ್ಯ ಹರಿದು ಬರುವುದು' ಎಂದು ಜನತೆಗೆ ಕಿವಿ ಮಾತು ಹೇಳುತ್ತಾರೆ.

ನಿರಂತರವಾಗಿ ಸಂಚರಿಸುವ ಜ್ಞಾನದೇಗುಲವಾಗಿ, ವರ್ಷವಿಡೀ ಜನರನ್ನು ಆಧ್ಯಾತ್ಮಿಕದೆಡೆಗೆ ಪರಿವರ್ತಿಸುವಲ್ಲಿ ತಮ್ಮನ್ನು ತಾವು ತೊಡಗಿಸಿಕೊಂಡು, ಬಂದ ಎಡರು ತೊಡರುಗಳನ್ನು ಬಸವ ಗುರುವಿನ ಪಾದಕ್ಕೆ ಅರ್ಪಿಸುತ್ತ ಸಾಗುತ್ತಿರುವ ದಿವ್ಯ ಚೇತನ ಪೂಜ್ಯ ಮಾತೆ ಗಂಗಾದೇವಿಯವರು, ದಿ. 31-8-2003 ರಂದು 46ನೇ ವರ್ಷಕ್ಕೆ ಕಾಲಿರಿಸುತ್ತಲಿದ್ದಾರೆ. ಈ ಶುಭ ಸಂದರ್ಭದಲ್ಲಿ ವಿಶ್ವಗುರು, ಮಂತ್ರಪುರುಷ ಬಸವಣ್ಣನವರು, ಸೃಷ್ಟಿಕರ್ತ ಲಿಂಗದೇವನು ಅವರಿಗೆ ಅತಿ ಹೆಚ್ಚಿನ ಆಯುರಾರೋಗ್ಯ ನೀಡಿ ಇನ್ನೂ ಹೆಚ್ಚಿನ ಕಾರ್ಯ ಅವರ ಮೂಲಕ ನಡೆಸುವಂತಾಗಲಿ ಎಂದು ನಾವುಗಳು ಸೃಷ್ಟಿಕರ್ತ ಪರಮಾತ್ಮನಲ್ಲಿ, ಧರ್ಮ ಗುರು ಬಸವಣ್ಣನವರಲ್ಲಿ ಪ್ರಾರ್ಥಿಸೋಣ.

---



ದಿ. 31-8-2003 ರಂದು ಧಾರವಾಡದ ಅಕ್ಕಮಹಾದೇವಿ ಅನುಭಾವ ಪೀಠದ ಪೀಠಾಧ್ಯಕ್ಷರಾದಂತಹ ಪರಮ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರ 46ನೆಯ ಜಯಂತಿಯು ಒದಗಿ ಬಂದಿದ್ದು ತನ್ನಿಮಿತ್ತ ಕಲ್ಯಾಣ ಕಿರಣದ ಓದುಗರಿಗೆಲ್ಲ ಶುಭ ಹಾರೈಕೆಗಳು.

*  *  *  *  *  *  *  *  *



# ಲಿಂಗದೇವನ ಹಂಗು

- ಮಾತೆ ಕಸ್ತೂರಿದೇವಿ

ಬಡಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗ ಬಿಡ !
ಮಾಲೆಗಾರನೇಸು ಭಕ್ತನಾದಡೆಯೂ ಬಾವಿಯ ಬೊಮ್ಮನ ಹಂಗ ಬಿಡ !
ಬಣಜಿಗನೇಸು ಭಕ್ತನಾದಡೆಯೂ ಒಟ್ಟಿಲ ಬೆನಕನ ಹಂಗ ಬಿಡ !
ಕಂಚುಗಾರನೇಸು ಭಕ್ತನಾದಡೆಯೂ ಕಾಳಿಕಾದೇವಿಯ ಹಂಗ ಬಿಡ !
ನಾನಾವ ಹಂಗಿನವನಲ್ಲ, ನಿಮ್ಮ ಹಂಗಿನವನಯ್ಯ ಲಿಂಗದೇವ

- ಧರ್ಮಪಿತ ಬಸವಣ್ಣನವರು - 448

ಜೀವನದಲ್ಲಿ 'ಭಕ್ತಿ' ಎಂಬುದೊಂದು ಅಮೂಲ್ಯವಾದ ಗುಣ ಸಂಪತ್ತು. ಆಧ್ಯಾತ್ಮ ಜೀವಿಯಾದ ಸಾಧಕನಿಗೆ, (ಭಕ್ತನಿಗೆ) ಈ ಭಕ್ತಿಯೆ ಶಕ್ತಿವರ್ಧಕ; ಮುಕ್ತಿಗೂ ಸಾಧನ. ಇಂಥ ಭಕ್ತಿ ಅಲ್ಲಿ ಇಲ್ಲಿ ಎಂದು ಕೊಂಚಕೊಂಚ ವ್ಯರ್ಥವಾಗಿ ಸೋರಿಹೋಗುವುದು ಬಸವಣ್ಣನವರಿಗೆ ಇಷ್ಟವಿಲ್ಲ. ಆದ್ದರಿಂದಲೇ ಈಗಾಗಲೇ ಅಸ್ತಿತ್ವದಲ್ಲಿದ್ದ ಹಲವಾರು ಭಕ್ತಿ ಪಂಥಗಳಿಗಿಂತಲೂ ಶ್ರೇಷ್ಠವಾದ ನೂತನ ಪಥವೊಂದನ್ನು ನಮಗೆ ತೋರಿಸಿಕೊಟ್ಟರು. ಬಸವ ದೃಷ್ಟಿಯಲ್ಲಿ ನಿಜಭಕ್ತ ಅಥವ ಸದ್ಭಕ್ತನಾಗುವುದು ಅಷ್ಟೇನೂ ಸುಲಭದ ಮಾತಲ್ಲ. ಏಕೆಂದರೆ ಜೀವನವೆಂಬ ರಣರಂಗದಲ್ಲಿ ಬಸವ ಪಥದಲ್ಲಿ ಸಾಗಬೇಕೆನ್ನುವವನು ಒಬ್ಬ ವೀರಯೋಧನಿದ್ದಂತೆ, ಎದುರಾಳಿಯೊಂದಿಗೆ ಸತ್ಯ ಮತ್ತು ಬುದ್ಧಿ ಬಲವೆಂಬ ಕತ್ತಿ ಹಿಡಿದು, ಪರಮಾತ್ಮನ ನೆನಹು ಎಂಬ ಗುರಾಣಿಯೊಂದಿಗೆ ನಿರಂತರವಾಗಿ ಹೋರಾಡುತ್ತಾರೆ. ಇಂಥ ಹೋರಾಟದಿಂದ ಮಾತ್ರ ಯಶಸ್ಸು ಕಟ್ಟಿಟ್ಟ ಬುತ್ತಿ ಎಂದು ನಂಬುತ್ತಾನೆ.

ವಚನ ಸಾಹಿತ್ಯದಲ್ಲಿ ಪಾತಿವ್ರತ್ಯ ಭಕ್ತಿಗೆ ಅತಿ ಹೆಚ್ಚಿನ ಮಹತ್ವ ಕೊಡಲಾಗಿದೆ. ಇದು ಹೇಗೆಂದರೆ ಮದುವೆಗೆ ಮೊದಲು ಕನ್ಯೆ ಹಲವಾರು ವರಗಳನ್ನು ನೋಡಿರಬಹುದು ಆದರೇನಂತೆ ಅವರಲ್ಲಿ ಒಬ್ಬನನ್ನು ಇಷ್ಟಪಟ್ಟು ಮದುವೆಯಾದ ಮೇಲೆ ಮುಂದೆ ಆಕೆ ತನ್ನ ಪತಿಯಲ್ಲಿ ನಿಷ್ಠೆಯಿಟ್ಟು ಪ್ರೇಮದಿಂದ ಬಾಳುವಳು. ಹಾಗೆಯೇ ಭಕ್ತ ಸ್ಥಲಕ್ಕೆ ಪ್ರವೇಶ ಬಯಸುವ ಸಾಧಕನು ಮೊದಲು ಅಜ್ಞಾನದಿಂದಲೋ, ಭೀತಿಯಿಂದಲೋ, ಅಭ್ಯಾಸಬಲದಿಂದಲೋ, ಸಾಂಪ್ರದಾಯಕವಾಗಿಯೋ ಹಲವಾರು ದೇವತೆಗಳನ್ನು, ವಸ್ತುಗಳನ್ನು ಜೀವನೋಪಾಯಕ್ಕೆ ಅನುಕೂಲವಾದ ಸಾಧನಗಳನ್ನು ದೇವರೆಂದೇ ನಂಬಿ ಪೂಜಿಸಿರಬಹುದು. ಆದರೆ ಅಪ್ರಮಾಣನು, ಸರ್ವಕಾರಣನು, ಸರ್ವಶಕ್ತನೂ ಆದ ಲಿಂಗದೇವನನ್ನು ಜ್ಞಾನದಿಂದ ಗ್ರಹಿಸಿ, ಇಷ್ಟಲಿಂಗ ರೂಪದಲ್ಲಿ ನೇರವಾಗಿ ಪೂಜಿಸುವ ಅವಕಾಶ ಸಿಕ್ಕಿದ ಮೇಲೆ, ಅಂದರೆ ಲಿಂಗದೀಕ್ಷೆಯ ನಂತರ ಮದುವೆಯ ಮುಂಚಿನ ವರಗಳನ್ನು ಅಲಕ್ಷಿಸಿದಂತೆ, ತನ್ನ ಪೂರ್ವಾಶ್ರಯದಲ್ಲಿದ್ದ ಅನ್ಯದೇವತೆಗಳನ್ನು ತ್ಯಜಿಸಿ ಲಿಂಗದೇವನಲ್ಲಿಯೇ ಸಂಪೂರ್ಣ ಭಕ್ತಿ, ಶ್ರದ್ಧೆ, ನಂಬಿಕೆ, ನಿಷ್ಠೆ ಇಟ್ಟು ಬದುಕುವುದನ್ನು ಭಕ್ತನು ಕಲಿಯಬೇಕು.

ಬಸವ ತತ್ವದ ಪ್ರಕಾರ ಲಿಂಗದೀಕ್ಷೆಯ ಮೂಲಕ ಭಕ್ತ ಸ್ಥಲವನ್ನು ಪ್ರವೇಶಿಸಿದ

ಸಾಧಕನು ಮುಂದೆ ಏಕದೇವ ನಿಷ್ಠೆಯ ಮಾಹೇಶ್ವರ ಸ್ಥಲಕ್ಕೆ ಮಾನಸಿಕವಾಗಿ ಬಡ್ತಿ ಪಡೆಯುತ್ತಾನೆ. ಈ ಸಂಧಿಕಾಲದಲ್ಲಿ ಭಕ್ತನು ಪರಸತಿಯ ಮೋಹ, ಪರಧನದ ಆಸೆಯಿಂದ ಹೊರಬರಲು ಸಮರ್ಥನಾದರೂ ಪರದೈವವನ್ನು ಬಿಟ್ಟುಕೊಡಲು ಹಿಂಜರಿಯುತ್ತಾನೆ ; ಕಷ್ಟಪಡುತ್ತಾನೆ. ಏಕೆಂದರೆ " ಛಲಬೇಕು ಶರಣಂಗೆ ಪರದೈವವನೊಲ್ಲೆ" ಎಂಬ ಸಂಕಲ್ಪಕ್ಕೆ ಅವನ ಮನಸ್ಸು ಸಿದ್ಧವಿರುವುದಿಲ್ಲ. ಕಾರಣ ಇದುವರೆಗೂ ಆಚರಿಸಿಕೊಂಡು ಬಂದಿರುವುದನ್ನು ಒಮ್ಮೆಗೆ ಬಿಟ್ಟರೆ ಏನಾದರು ಕೇಡಾಗಬಹುದು ಎಂಬ ಭಯ !? ಅಲ್ಲದೆ ಮನಸ್ಸು ಹೊಸ ಬದಲಾವಣೆಗೆ, ಹೊಸ ಬದುಕಿಗೆ ಹೊಂದಿಕೊಳ್ಳಲು ಹೆಣಗಾಡುತ್ತದೆ. ಆದರೆ ನಡೆನುಡಿಯಲ್ಲಿ ಆಚಾರವಿಚಾರಗಳನ್ನು ಅಳವಡಿಸಿಕೊಂಡವನನ್ನು ಮಾತ್ರ ಭಕ್ತ ಎಂದು ವಚನ ಸಾಹಿತ್ಯ ಕರೆಯುತ್ತದೆ. ಆದ್ದರಿಂದ ತಮ್ಮ ಜೀವನೋಪಾಯಕ್ಕಾಗಿ ವಿವಿಧ ಕಾಯಕಗಳನ್ನು ಅವಲಂಬಿಸಿರುವ ಭಕ್ತರ ಮೂಢಾಚರಣೆಯನ್ನು ಮೇಲಿನ ವಚನ ಒಪ್ಪುತ್ತಿಲ್ಲ. ಮಾತ್ರವಲ್ಲ ಅಂಥವರನ್ನು ನಿಜಭಕ್ತಿ ಪಥಕ್ಕೆ ತರಲು ಹೇಗೆ ಪ್ರಯತ್ನಿಸುತ್ತಿದೆ ಎಂಬುದನ್ನು ನೋಡೋಣ.

ಬಡಹಾರುವನೇಸು ಭಕ್ತನಾದಡೆಯೂ ನೇಣಿನ ಹಂಗ ಬಿಡ ! ಲಿಂಗಾಯತ ಧರ್ಮದಲ್ಲಿ ಭಕ್ತನ ಹೃದಯ ಕಮಲದಲ್ಲಿ ನೆಲೆಸಿ ಪ್ರಕಾಶಿಸುತ್ತಿರುವ ಸತ್-ಚಿತ್-ಆನಂದ-ನಿತ್ಯ-ಪರಿಪೂರ್ಣನಾದ ದೇವನನ್ನು ಸಂಕೇತಿಸುವ ಸಲುವಾಗಿ ಎದೆಯ ಮೇಲೆ ಲಿಂಗ ಧರಿಸಬೇಕೆಂಬ ಶಾಸ್ತ್ರನಿಯಮವಿದೆ. ಈ ನಿಯಮವನ್ನು ಆಚರಣೆಗೆ ತರಲು ಸೋಲುತ್ತಿರುವ ಬಹುಪಾಲು ಭಕ್ತರು ಮಾಡುತ್ತಿರುವುದು ಏನು ?! ಜನಿವಾರದಂತೆ ಶಿವದಾರವನ್ನು ಅಡ್ಡಡ್ಡಲಾಗಿ ಹಾಕಿಕೊಂಡು ಅದರ ತುದಿಗೆ ಕರಡಿಗೆಯಲ್ಲಿ ಲಿಂಗವಿರಿಸಿ ಧರಿಸುತ್ತಾರೆ. ಲಿಂಗಿಬ್ರಾಹ್ಮಣ ಎಂದು ಕರೆದುಕೊಳ್ಳುವುದರಲ್ಲಿ (ಒಣ) ಹೆಮ್ಮೆ ಪಡುತ್ತಾರೆ. ಇನ್ನು ಕೆಲವು ಜನರಿದ್ದಾರೆ. ಅವರು ಶ್ರಮಸಾಧ್ಯವಾದ ಕೆಲಸ ಮಾಡುವುದರಿಂದ ತೊಂದರೆಯಾಗಬಾರದೆಂದು ಹೀಗೆ ಧರಿಸಿರುವುದಾಗಿ ಹೇಳುತ್ತಾರೆ. ಮತ್ತೆ ಕೆಲವರಿಗೆ ಇಷ್ಟಲಿಂಗದ ಬಗ್ಗೆ ಪ್ರಾಥಮಿಕ ಜ್ಞಾನವಾಗಲಿ, ತಾತ್ವಿಕ ತರಬೇತಿಯಾಗಲಿ ಇಲ್ಲದ್ದರಿಂದ ಅನ್ಯರಿಂದ ಅವಹೇಳನಕ್ಕೆ ಒಳಗಾದಾಗ ಉತ್ತರಿಸಲು ಧೈರ್ಯವಿಲ್ಲದೆ, ಮುಜುಗರದಿಂದ ಪಾರಾಗಲೆಂದು, ನಿರಭಿಮಾನದಿಂದ ಜನಿವಾರದಂತೆ ಇಷ್ಟಲಿಂಗವನ್ನು ಧರಿಸಿರುವುದು ಕಾಣಬರುತ್ತದೆ.

21ನೇ ಶತಮಾನದಲ್ಲಿ ಲಿಂಗಾಯತ ಸಮಾಜವನ್ನು ಬಡಿದೆಬ್ಬಿಸಿದ ಪ್ರವಚನ ಪಿತಾಮಹರೆಂದು ಪ್ರಸಿದ್ಧರಾಗಿದ್ದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಅಪ್ಪಾಜಿಯವರು ತಮ್ಮ ಸಿಂಹನಾದದಿಂದ ಹೀಗೆ ಕರೆ ಕೊಡುತ್ತಿದ್ದರು "ಶರಣ ಬಂಧುಗಳೇ, ಬೆಲೆ ಬಾಳುವ ಒಡವೆ ವಸ್ತ್ರಗಳನ್ನು ಹೆಮ್ಮೆಯಿಂದ ಪ್ರದರ್ಶಿಸುವಂತೆ ಲಿಂಗಾಯತ ಧರ್ಮದ ಜೀವಾಳವಾಗಿರುವ, ಬಸವ ಪ್ರಣೀತ ಇಷ್ಟಲಿಂಗವನ್ನು ಧೈರ್ಯವಾಗಿ ಎದೆಯ ಮೇಲೆ ಕಟ್ಟಿಕೊಂಡು ಪ್ರದರ್ಶಿಸಿರಿ. ಏಕೆಂದರೆ ನಮ್ಮೆಲ್ಲರ ಮಹಾಗುರು ಬಸವಣ್ಣನವರು ಸಂಶೋಧಿಸಿ ಕೊಟ್ಟಿರುವ ವಿಶ್ವಾತ್ಮನ ಕುರುಹು ಇದು ಎಂಬುದನ್ನು ಮನಗಾಣಿರಿ. ಈ ಲಾಂಛನದ ನೆರವಿನಿಂದ



ಅಪ್ಪ ಬಸವಣ್ಣನವರು ಯಾವ ಫಿರಂಗಿ, ತೋಪು ಬಳಸದೆ ಜಾತಿ ವರ್ಣ ವರ್ಗವಾದದ ಕೋಟೆಯನ್ನು ಸಿಡಿಸಿದರು. ಬಂದೂಕಿನ ನೆರವಿಲ್ಲದೆ ಸಮಾನತೆಯನ್ನು ಸಾಧಿಸಿ ತೋರಿಸಿದರು ಎಂಬುದನ್ನು ಮರೆಯಬೇಡಿರಿ " ಎಂದು.

ಇನ್ನು ಮಾಲೆಗಾರನೇಸು ಭಕ್ತನಾದರೆಯೂ ಬಾವಿಯ ಬೊಮ್ಮನ ಹಂಗ ಬಿಡ. ಮಾಲೆಗಾರ, ಹೂವಾಡಿಗ, ತೋಟದ ಕೆಲಸ ಮಾಡುವವನು, ತನ್ನ ಜಮೀನಿನಲ್ಲಿ ಹಣ್ಣು, ಹೂ, ತರಕಾರಿ ಮುಂತಾದುದ್ದನ್ನು ಬೆಳೆದು, ಮಾರಿ ಜೀವನ ಸಾಗಿಸುತ್ತಾನೆ. ಇವನ ಈ ಕೆಲಸಕ್ಕೆ ಮುಖ್ಯವಾಗಿ ನೆರವಾಗುತ್ತಿರುವುದು ಅವನ ತೋಟದಲ್ಲಿರುವ ಬಾವಿ. ಇದರಿಂದಲೇ ಅವನು ಸಕಲ ಸಂಪತ್ತನ್ನು ಬೆಳೆಯುತ್ತಾನೆ. ನೀರಿಲ್ಲದಿದ್ದರೆ ಅವನ ಜೀವನ ಬರಡು ಎಂದರಿತ ಈತ ತನ್ನ ಕೃತಜ್ಞತೆ ಸಮರ್ಪಿಸಲೆಂದು ಒಂದು ಬೊಂಬೆ ಮಾಡಿ ಬಾವಿಯ ಕಟ್ಟೆಯ ಮೇಲಿರಿಸಿ ಪೂಜಿಸಿ ಧನ್ಯನಾಗುತ್ತಾನೆ. ಇದುವರೆಗೂ ಕಾಪಾಡಿದಂತೆ ಮುಂದೆಯೂ ಕಾಪಾಡು ಎಂದು ಭಕ್ತಿಯಿಂದ ಬೇಡಿಕೊಳ್ಳುತ್ತಾನೆ. ಆದರೆ ಇದೆಲ್ಲಕ್ಕೂ ಮೂಲ ಕಾರಣಕರ್ತನಾದ ಮಹಾದಾನಿಯೊಬ್ಬನಿದ್ದಾನೆ ಎಂಬುದನ್ನು ಮರೆಯುತ್ತಾನೆ. "ಇಳೆ ನಿಮ್ಮ ದಾನ, ಬೆಳೆ ನಿಮ್ಮ ದಾನ, ಸುತ್ತಿ ಸುಳಿವ ಸಾಗರವೆಲ್ಲ ನಿಮ್ಮ ದಾನ, ಎತ್ತು ಬಿತ್ತು ಎಲ್ಲಾ ನಿಮ್ಮ ದಾನ " ಎಂಬ ಶರಣವಾಣಿ ಈತನ ಆಚರಣೆಯ ಮುಂದೆ ಮೌನ ತಾಳುತ್ತದೆ. ಹೀಗೆ ಪಾಪ ಮಾಲೆಗಾರ ಬಾವಿಯ ಬೊಮ್ಮನ ಹಂಗಿಗೆ ದಾಕ್ಷಿಣ್ಯಕ್ಕೆ ತನಗರಿವಿಲ್ಲದಂತೆ ಒಳಗಾಗಿದ್ದಾನೆ.

ಬಣಜಿಗನೇಸು ಭಕ್ತನಾದಡೆಯೂ ಬಟ್ಟಲ ಬೆನಕನ ಹಂಗ ಬಿಡ ! ವ್ಯಾಪಾರಿ, ವರ್ತಕ, ಇವನು ತನ್ನ ವ್ಯಾಪಾರಕ್ಕಾಗಿ ಮುಖ್ಯವಾಗಿ ಅವಲಂಬಿಸಿರುವುದು ಏನನ್ನು ?! ಅವನ ಮನಸ್ಸನ್ನು ಅರಿತುಕೊಂಡು ನಿಷ್ಠೆಯಿಂದ ಅವನು ಹೇಳಿದಂತೆ ಕೇಳಿ ಲಾಭ ನಷ್ಟದಲ್ಲಿ ತನ್ನ ಕರ್ತವ್ಯವನ್ನು ನಿರ್ವಹಿಸುವುದು ಯಾವುದು ?! ತಕ್ಕಡಿ ಮತ್ತು ಅದರೊಂದಿಗಿರುವ ತೂಕದ ದುಂಡನೆಯ ಕಲ್ಲುಗಳಲ್ಲವೆ ? ಅವುಗಳನ್ನೇ ಇಲ್ಲಿ ಬಟ್ಟಲ ಬೆನಕ ಎಂದು ಕರೆದಿರುವುದು ! ಅವಿಲ್ಲದೆ ಅವನ ವ್ಯಾಪಾರ ವಹಿವಾಟು ಸರಿಯಾಗಿ ಸಾಗುವುದಿಲ್ಲ. ಅದೇ ಅವನ ಪಾಲಿಗೆ ಅನ್ನದಾತ. ತನ್ನ ಲೌಕಿಕ ವ್ಯವಹಾರಗಳಲ್ಲೇ ಸಂಪೂರ್ಣವಾಗಿ ಮುಳುಗಿದ ಈತ "ಬೆವಹಾರವ ಮಾಡುವೆ ಲಿಂಗಾರ್ಚನೆಗೆಂದು" ಎಂಬ ಗುರುವಾಣಿಯನ್ನು ಮರೆಯುತ್ತಾನೆ. ಇವನ ಭಕ್ತಿ ಏನಿದ್ದರೂ ತನ್ನೊಂದಿಗೆ ನಿಷ್ಠೆಯಿಂದ (?!) ವರ್ತಿಸುವ ತೂಕದ ಕಲ್ಲುಗಳಿಗೆ ಸೀಮಿತವಾಗಿ ಅದರ ಹಂಗಿನಲ್ಲಿ ಸಿಕ್ಕಿಕೊಂಡು ದುರ್ಬಲವಾಗಿದೆ.

ಕಂಚುಗಾರನೇಸು ಭಕ್ತನಾದಡೆಯೂ ಕಾಳಿಕಾದೇವಿಯ ಹಂಗ ಬಿಡ. ಕಂಚುಗಾರನೆಂದರೆ ತನ್ನ ಬದುಕಿಗಾಗಿ ಲೋಹದ ಕೆಲಸ ಮಾಡುವವನು. ಇವನು ಜನರ ಬೇಡಿಕೆಗನುಗುಣವಾಗಿ ಅನ್ಯದೇವತೆಗಳ ಮೂರ್ತಿಗಳನ್ನು, ಲೋಹದ ಮುಖವಾಡಗಳನ್ನು ತಯಾರಿಸಿ ಮಾರುತ್ತಾನೆ. ಮಾರಿ ಸುಮ್ಮನಿರುತ್ತಾನೆಯೇ? ಇಲ್ಲ ; ತನಗೆ ಜಗತ್ಕರ್ತನ ಶ್ರೀ ರಕ್ಷೆಯಿದ್ದರೂ ತಾನೊಂದು ಕಾಳಿಕಾದೇವಿಯ ಮುಖವಾಡವನ್ನು ಇಟ್ಟುಕೊಂಡು ಪೂಜಿಸಲು ತೊಡಗುತ್ತಾನೆ. ಆಕೆಯ ಹಂಗಿಗೆ ಒಳಗಾಗುತ್ತಾನೆ. ಆದರಿಂದಲೇ ಜೀವನ ವೃದ್ಧಿ ಎಂದು

ಭ್ರಮಿಸುತ್ತಾನೆ.

ಇಂಥ ಎಲ್ಲಾ ಆಚರಣೆಗಳು ವಚನಜ್ಞಾನದ ಮುಂದೆ ಧರ್ಮಪಿತರಿಗೆ ಹಾಸ್ಯಾಸ್ಪದವಾಗಿ ತೋರುತ್ತಿವೆ. ಆದ್ದರಿಂದ "ನಾನಾವ ಹಂಗಿನವನಲ್ಲ ; ನಿಮ್ಮ ಹಂಗಿನವನಯ್ಯಾ ಲಿಂಗದೇವಾ " ಎಂದು ಸಮಾರೋಪ ಮಾಡುತ್ತಿದ್ದಾರೆ. ನೆಮ್ಮದಿಯ ನಿಟ್ಟುಸಿರು ಬಿಡುತ್ತಿದ್ದಾರೆ. ಏಕೆಂದರೆ ವೈರಾಗ್ಯ ಚಕ್ರವರ್ತಿ ಅಲ್ಲಮ ಪ್ರಭುದೇವರು ಒಂದು ಕಡೆ ಹೀಗೆ ಹೇಳಿದ್ದಾರೆ "ಬೆಂಕಿಯೊಳಗಣ ಬಿಸಿ ನೀರೊಳಗುಂಟೆ ಗುಹೇಶ್ವರಾ?" ಎಂದು. ಅಂದರೆ ಬೆಂಕಿಯ ಬಿಸಿಗೂ, ನೀರಿನ ಬಿಸಿಗೂ ಅಜಗಜಾಂತರ ವ್ಯತ್ಯಾಸವಿದೆ. ಬೆಂಕಿಯನ್ನು ನೇರವಾಗಿ ಎಚ್ಚರಿಕೆಯಿಂದ ಬಳಸಿದರೆ ಏನೆಲ್ಲವನ್ನು ಸಾಧಿಸಬಹುದು. ಏಕೆಂದರೆ ಬೆಂಕಿಗೆ ದುರ್ಬಲತೆಯಿಲ್ಲ ಎನ್ನುತ್ತಾರೆ. ಅದೇ ನೀರಿನಿಂದ ಸಾಧ್ಯವಾಗುವುದಿಲ್ಲ. ಆದರಂತೆ ಬೆಂಕಿಯೋಪಾದಿಯಲ್ಲಿರುವ ದೇವ ಪ್ರಜ್ಞೆಯನ್ನು ಬದುಕಿಗೆ ತಳಹದಿಯನ್ನಾಗಿ ಮಾಡಿಕೊಂಡು ಜೀವನ ಅನ್ನುವ ನೀರನ್ನು ಹದವಾಗಿ ಕಾಯಿಸಿ ಅಂದರೆ ಚಾರ್ಜ್ ಮಾಡಿಕೊಂಡು ಬದುಕುವುದನ್ನು ಕಲಿಯಬೇಕು. ಇದರಿಂದ ಮಾತ್ರ ನಿಜವು ಸಾಧ್ಯವಾಗುತ್ತದೆ ಎಂಬುದನ್ನು ಅರಿಯಬೇಕು. "ನೀನೊಲಿದರೆ ಸಕಲ ಪಡಿ ಪದಾರ್ಥಗಳು ಇದಿರಲ್ಲಿಪ್ಪವು ; ನೀನೊಲಿದರೆ ಏನುಂಟು ಏನಿಲ್ಲವಯ್ಯ " ಎಂಬ ವಚನ ವಾಣಿಯಲ್ಲಿ ನಂಬಿಕೆಯಿಟ್ಟು ಲಿಂಗಾಯತ ಸಮಾಜ ಬಹುದೇವೋಪಾಸನೆಯ ದಾಕ್ಷಿಣ್ಯಕ್ಕೆ ಒಳಗಾಗದೆ, ಮೂಲ ಚೈತನ್ಯವಾದ ಏಕದೇವ ನಿಷ್ಠೆಯ ಲಿಂಗದೇವನ ಹಂಗಿಗೆ ಒಳಗಾದರೆ ಮಾತ್ರ ಈ ಸಮಾಜಕ್ಕೆ ಉಜ್ವಲ ಭವಿಷ್ಯವಿದೆ ಎಂಬುದರಲ್ಲಿ ಸಂದೇಹವಿಲ್ಲ.

## ಬಸವ ಧರ್ಮದ ವೀರ ಸೇನಾನಿ ಪೂಜ್ಯ ಲಿಂಗಾನಂದ ಮಹಾಸ್ವಾಮೀಜಿ

- ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮೀಜಿ

"ಮರ್ತ್ಯದ ಮಣಿಹವ ಪೂರೈಸಲು ಶರಣರ ಅಮರವಚನಗಳನ್ನು ತಲೆಯ ಮೇಲೆ ಹೊತ್ತುಕೊಂಡು ಜನಮನದಲ್ಲಿ ಬಿತ್ತರಿಸುವುದು ನಾವು ಕೈಗೊಂಡ ಒಂದು ಪವಿತ್ರ ಕಾಯಕ" ಎಂಬ ಸಂಕಲ್ಪವನ್ನು ಹೊತ್ತು ಬಸವ ಧರ್ಮವನ್ನು ಮತ್ತೆ ಪುನರುತ್ಥಾನಗೊಳಿಸಿದವರು ಪರಮ ಪೂಜ್ಯ ಅಪ್ಪಾಜಿಯವರು. ಅವರ ಒಂದು ತ್ಯಾಗ ಇಂದು ಕೋಟಿಗಟ್ಟಲೆ ಜನರಿಗೆ ಬದುಕುವ ಕಲೆ ರೂಪಿಸಿಕೊಳ್ಳಲು ದಾರಿ ದೀಪವಾಯಿತು. ಶರಣರು ಕೊಟ್ಟ ಆ ಅಮೂಲ್ಯ ಸಾಹಿತ್ಯವನ್ನು ಜನರ ನಾಲಿಗೆಯ ಮೇಲೆ ನಲಿದಾಡಿಸಿದವರು ಪೂಜ್ಯ ಅಪ್ಪಾಜಿಯವರು. ಮನದ ಮಲಿನತೆ ತೊಲಗಿಸಿ, ಹೃದಯ ವೈಶಾಲ್ಯತೆ ಮೈಗೂಡಿಸಿದರು. ಬಸವ ಗುರುವಿನ ಕೀರ್ತಿ ವಿಶ್ವಾದ್ಯಂತ ಹಬ್ಬಿಸಿದರು. ಬಸವ ನಾಮವು ಮಂತ್ರವಾಗಿ ಎಲ್ಲೆಡೆಯಲ್ಲಿಯೂ ಮೊಳಗುವಂತೆ ಮಾಡಿದರು. ಶಾಂತಿ-ಸಮಾನತೆ-ಸಹೋದರತ್ವಗಳ ಹೊಸ ಅರ್ಥ ಹೊಮ್ಮಿತು. ಹಲವಾರು ವರುಷಗಳಿಂದ ತಮ್ಮ ಕರ್ತವ್ಯವನ್ನು ಮರೆತು, ಸಮಾಜ ಚಿಂತನೆಯನ್ನು ಕಡೆಗಣಿಸಿ, ಕೇವಲ ಆಸ್ತಿಗಳಿಕೆಯಲ್ಲಿ ತಲ್ಲೀನವಾಗಿದ್ದ ಮಠಗಳನ್ನು ಬಡಿದೆಬ್ಬಿಸಿದರು. ಬಸವ





ಮಂತ್ರದ ಧಾಳಿಗೆ ಹುಸಿ ಮಂತ್ರಗಳು ಮಠಮಾನ್ಯಗಳನ್ನು ಬಿಟ್ಟೋಡಿದವು. ವೀರ ಸೇನಾನಿ ಪೂಜ್ಯ ಅಪ್ಪಾಜಿಯವರ ಆಗಮನವು ಬಸವ ಧರ್ಮದ ಪುನರಾಗಮನವಾಯಿತು. ಸಂತೃಪ್ತಿಯ ಹೊನಲು ಎಲ್ಲೆಡೆ ಹರಿಯಿತು.

ಪೂಜ್ಯ ಅಪ್ಪಾಜಿಯವರ ವಿದ್ವತ್‌ಪೂರ್ಣ ಪ್ರವಚನ, ಜ್ಞಾನ, ಅವರ ಆದರ್ಶ ಬದುಕು, ಪರಿಪೂರ್ಣ ಜೀವನ, ಧರ್ಮ ಪ್ರಚಾರದಲ್ಲಿನ ದಿಟ್ಟತನ-ನಿಷ್ಠೆ, ಸಮಾಜ ಸೇವೆಗಾಗಿ ಅವರ ತ್ಯಾಗ ಈ ಎಲ್ಲವುಗಳ ಪ್ರತಿಫಲ ಕಲ್ಯಾಣ ಕ್ರಾಂತಿಯ ನಂತರ 800 ವರ್ಷಗಳ ಅಜ್ಞಾತವಾಸ ಅನುಭವಿಸುತ್ತಿದ್ದ ಬಸವ ಧರ್ಮ ಮತ್ತೊಮ್ಮೆ ಮರು ಹುಟ್ಟು ಕಾಣುವಂತೆ ಮಾಡಿತು.

ಪೂಜ್ಯ ಅಪ್ಪಾಜಿಯವರ ಲೋಹ ಚಂಬಕ ವ್ಯಕ್ತಿತ್ವ ಎಂಥವರನ್ನು ತನ್ನೆಡೆಗೆ ಸೆಳೆಯುವಂಥದ್ದು. ಎತ್ತರವಾದ ಸದೃಢ ನಿಲುವು, ಜ್ಞಾನದ ಕಾಂತಿಯಿಂದ ತುಂಬಿ ತುಳುಕುವ ಕಣ್ಣುಗಳು, ಸದಾ ಮುಗುಳುನಗೆಯಿಂದ ಕೂಡಿದ ಮುಖ, ಸದಾಕಾಲವು ಕ್ರಾಂತಿಯನ್ನು ಮಾಡುವ ತುಂಬು ಉತ್ಸಾಹದ ದಿಟ್ಟತನದ ಭಾವ, ಹಿಡಿದ ಕಾರ್ಯವನ್ನು ಕಡೆ ಮುಟ್ಟಿಸಿಯೇ ತೀರುವೆನು ಎಂದು ಬಸವ ಧರ್ಮವನ್ನು ಮನೆ-ಮನಗಳಿಗೆ ಮುಟ್ಟಿಸುವ ಛಲತೊಟ್ಟು ಧರ್ಮದ ಕಡೆಗೆ ಜನರು ಬಾರದಿದ್ದಾಗ ಧರ್ಮವನೆ ಜನರ ಮನೆ-ಮನಗಳ ಬಳಿಗೆ ಕೊಂಡೊಯ್ಯ ಬೇಕು ಎಂದು ಸಂಕಲ್ಪ ಹೊತ್ತು ತಮ್ಮ ಅದ್ಭುತ ವಾಕ್ ಶಕ್ತಿಯ ಮೂಲಕ ಚಿಕ್ಕವರಲ್ಲಿ ನೀತಿಯನ್ನು, ಯುವಕ-ಯುವತಿಯರಲ್ಲಿ ಧರ್ಮದ ವೈಚಾರಿಕ-ವೈಜ್ಞಾನಿಕ ಜ್ಞಾನ ತುಂಬಿ, ಮುಮುಕ್ಷುಗಳಿಗೆ ಸಾಧನೆ ಮಾರ್ಗವನ್ನು ತೋರಿ, ಅವುಗಳನ್ನು ಮನನ ಮಾಡಿಸಲು ದೃಷ್ಟಾಂತಗಳನ್ನು ನೀಡುತ್ತಾ, ಅಜ್ಜ-ಅಜ್ಜಿಯರಿಗೆ "ನಿಮ್ದು ಆಗ್ಲೇ ಎಲ್ಲಾ ಮುಗ್ದೈತೆ. ಇನ್ನು ಯುವಕ್ರನ್ನು ಮಕ್ಕಳನ್ನು ಮುಂದಕ್ಕೆ ಬಿಡ್ರಿ!" ಎಂದು ಹಾಸ್ಯಗೈಯ್ಯುತ್ತಾ ವಿಶೇಷ ಶೈಲಿಯ ಪ್ರವಚನವನ್ನು ಹುಟ್ಟು ಹಾಕಿದರು. ಕ್ಷಣ ಮಾತ್ರದಲ್ಲಿ ತಮ್ಮ ಪ್ರವಚನವೆಂಬ ಮಂತ್ರ ದಂಡದಿಂದ ಎಲ್ಲರನ್ನೂ ಸಮ್ಮೋಹನಗೊಳಿಸಿ, ಧರ್ಮದ ಪರಿಧಿಯಲ್ಲಿ ಎಲ್ಲರನ್ನು ಬಂಧಿಸುತ್ತಿದ್ದ ಗಾರುಡಿಗರು ಪೂಜ್ಯ ಅಪ್ಪಾಜಿಯವರು. ಆದ್ದರಿಂದಲೇ ಅವರನ್ನು ಭಕ್ತ ಸಂಕುಲ ಪ್ರವಚನ ಪಿತಾಮಹ ಎಂದು ಕರೆದು ಗೌರವಿಸಿತು. ಅವರು ಸದಾ ಹೇಳುತ್ತಿದ್ದರು "ನಮ್ಮ ಪ್ರವಚನದ ಟ್ರೈನ್‌ನಲ್ಲಿ ಒಂದು ಸಲ ಕುಳಿತುಕೊಳ್ಳಿ! ನಿಮ್ಮನ್ನು Humanityಯಿಂದ Divinityಕರೆದೊಯ್ಯುವ ಹೊಣೆ ನಮ್ಮದು " ಎಂದು. ಅವರ ಪ್ರವಚನದ ಸವಿಯುಂಡವರು ಇಂದಿಗೂ ಅವರ ಪ್ರವಚನದ ಸಾರವನ್ನು ನೆನಪು ಮಾಡಿಕೊಳ್ಳುತ್ತಾರೆ. ಸದಾ 'ಸ್ಮರಣೆಯಲ್ಲಿ ಇರುವಂತಹ ವಿಚಾರಗಳನ್ನು ತುಂಬುತ್ತಿದ್ದ ಅವರ ಶಕ್ತಿ ಎಂಥಹುದೆಂದು ಕಲ್ಪಿಸಿಕೊಳ್ಳಲು ಅಸಾಧ್ಯವೆನಿಸುತ್ತದೆ.

ಒಮ್ಮೆ ಶಿವಮೊಗ್ಗ ಜಿಲ್ಲೆಯ ಶಿಕಾರಿಪುರ ತಾಲ್ಲೂಕಿನ ಶಿರಾಳ ಕೊಪ್ಪದಲ್ಲಿ ಪೂಜ್ಯ ಶ್ರೀ ಜಗದ್ಗುರು ಮಾತೆ ಗಂಗಾದೇವಿಯವರ ಪ್ರವಚನ ಕಾರ್ಯಕ್ರಮ ನಡೆಯುತ್ತಿತ್ತು. ಆ ಸಂದರ್ಭದಲ್ಲಿ ಪೂಜ್ಯ ಅಪ್ಪಾಜಿಯವರು ಆ ಊರಿನ ಮೂಲಕವೇ ಧಾರವಾಡಕ್ಕೆ ಹಾದುಹೋಗಬೇಕಾದುದರಿಂದ, ಅಪ್ಪಾಜಿಯವರ ಒಂದು ದಿನದ ಪ್ರವಚನವನ್ನು

ಏರ್ಪಡಿಸಲಾಗಿತ್ತು. ಆದರೆ ಅಂದು ಕೋಮುಗಲಭೆಯಿಂದ ಪ್ರವಚನ ನಡೆಯುವುದು ಅನುಮಾನವಾಗಿತ್ತು. ಪೋಲಿಸರು ಎರಡು-ಮೂರು ದಿನ ಪ್ರವಚನ ನಡೆಸುವುದು ಬೇಡವೆಂದು ಹೇಳಿದ್ದರು. ಆದರೆ ಪೂಜ್ಯ ಅಪ್ಪಾಜಿಯವರ ಪ್ರವಚನ ಕೇಳಬೇಕೆಂದಿದ್ದ ಊರಿನವರು ಪೋಲಿಸರಲ್ಲಿ ವಿನಂತಿಸಿಕೊಂಡು, ಅನುಮತಿ ನೀಡಲು ಪಟ್ಟುಹಿಡಿದರು. ಸಂದಿಗ್ಧತೆಯಲ್ಲಿ ಬಿದ್ದ ಪೋಲಿಸರು ಕೊನೆಗೆ ಪ್ರವಚನ ಮಾಡಲು ಅನುಮತಿ ನೀಡಿದರಲ್ಲದೆ, ಹೆಚ್ಚು ಸಿಬ್ಬಂದಿಯನ್ನು ಕರೆಸಿ ಯಾವುದೇ ಅಹಿತಕರ ಘಟನೆ ನಡೆಯದಂತೆ ತಡೆಯಲು ಬಂದೋಬಸ್ತ್ ಮಾಡಿದರು. ಸಂಜೆ ಕಾರ್ಯಕ್ರಮ ಆರಂಭವಾಯಿತು. ಪೂಜ್ಯ ಅಪ್ಪಾಜಿಯವರು ಅಂದು ತೆಗೆದುಕೊಂಡ ವಿಚಾರ ಕೋಮುಗಲಭೆಗೆ ಮೂಲ ಕಾರಣ ಏನು ? ಎಂಬುದು ! ಅಂದಿನ ಪ್ರವಚನದಲ್ಲಿ ಪೂಜ್ಯ ಅಪ್ಪಾಜಿಯವರು ಹೇಳಿದ ಒಂದೊಂದು ನುಡಿಯೂ, ಗಲಭೆಕಾರರು ಯಾವ ಧರ್ಮದವರೇ ಇದ್ದರು ಸಹ ಆ ವಿಚಾರಗಳನ್ನು ಒಪ್ಪಿಕೊಳ್ಳಲೇ ಬೇಕಾದಂಥ ವಿಚಾರಗಳಾಗಿದ್ದವು. ದೇವರನ್ನು ಅರ್ಥ ಮಾಡಿಕೊಳ್ಳದಂತಹ ವ್ಯಕ್ತಿಗಳು ಮಾತ್ರ ಮತಾಂಧರಾಗಿ ಕೋಮುಗಲಭೆಯನ್ನು ಸೃಷ್ಟಿಸುತ್ತಾರೆ ಎಂದ ಅವರು, ನಿಜವಾದ ಪರಮಾತ್ಮನ ನೆಲೆ-ಕಲೆಗಳನ್ನು ಎಳೆ ಎಳೆಯಾಗಿ ಬಿಡಿಸಿ ಇರುವ ಒಬ್ಬನೇ ದೇವನನ್ನು ವಿವಿಧ ಕೋಮಿನವರು ಬೇರೆ ಬೇರೆ ಹೆಸರಿಟ್ಟು ಕರೆಯುವರಷ್ಟೇ ವಿನಃ ಒಂದೊಂದು ಕೋಮಿನವರಿಗೆ ಒಬ್ಬೊಬ್ಬ ದೇವನಿಲ್ಲ ಎಂದು ಅದ್ಭುತವಾಗಿ ಪ್ರವಚನ ಮಾಡಿದರು. ಅಂದಿನ ಪ್ರವಚನದಲ್ಲಿನ ಅವರ ವಿಚಾರತೆಗೆ ಜನ ಸ್ತಂಭಿಭೂತರಾದರು.

ಮಾರನೇ ದಿನ ಪೂಜ್ಯ ಅಪ್ಪಾಜಿಯವರ ಹೆಸರು ಮನೆಮಾತಾಯಿತು. ಪೋಲೀಸ್ ಸರ್ಕಲ್ ಇನ್ಸ್‌ಪೆಕ್ಟರ್‌ರವರು ನಾನು ಹಿಂದೆಂದೂ ಇಂಥ ಪ್ರವಚನ ಕೇಳಿಲ್ಲ, ಬಹುಶಃ ಮುಂದೆಯೂ ಯಾರೂ ಹೀಗೆ ಮಾತನಾಡಲಾರರು! ಈ ಪ್ರವಚನದ ನಂತರ ನಮಗೆ ಬಂದ ವರದಿಯ ಪ್ರಕಾರ ಕೋಮು ಗಲಭೆಗೆ ಪ್ರಚೋದನೆ ನೀಡುತ್ತಿದ್ದವರು ತಣ್ಣಗಾಗಿದ್ದಾರೆ. ಶಿರಾಳಕೊಪ್ಪದ ಚಿತ್ರಣವೇ ಬದಲಾಗಿದೆ, ಇನ್ನು ನಮಗೂ ಯಾವುದೇ ಗಲಭೆಯ, ಅಹಿತಕರ ಘಟನೆಯ ವಾತಾವರಣ ಕಾಣಿಸುತ್ತಿಲ್ಲವೆಂದು ನುಡಿದರು.

ಹೀಗೆ ಪೂಜ್ಯ ಅಪ್ಪಾಜಿಯವರು ಸತತವಾಗಿ 40 ವರ್ಷಗಳವರೆಗೆ, ಒಂದು ಬತ್ತಿ ತಾನು ಉರಿದು, ಬೆಳಕನ್ನು ನೀಡುವಂತೆ, ತಮ್ಮ ಜೀವನವನ್ನು ಸಮಾಜದಲ್ಲಿ ತುಂಬಿದ್ದಂತಹ ಅಜ್ಞಾನ, ಜಾತಿಯತೆ, ಮೂಢನಂಬಿಕೆ ಮುಂತಾದ ಅಂಧಕಾರವನ್ನು ತೊಡೆದೊಡಿಸಲು ಮುಡುಪಿಟ್ಟಿದ್ದಾರೆ, ಗಂಧದ ಕೊರಡಿನಂತೆ ತಮ್ಮ ಜೀವನವನ್ನು ಬಸವ ಗುರುವಿನ ಸೇವೆಗಾಗಿ ತೇದಿದ್ದಾರೆ. ಗುರು ಬಸವಣ್ಣನವರ ಜಂಗಮತ್ವಕ್ಕೆ ಮರು ಜೀವಕೊಟ್ಟಿದ್ದಾರೆ. ಕೇವಲ ಕಾವಿತೊಟ್ಟಾತ ಜಂಗಮನಲ್ಲ. ತನ್ನನ್ನು ತಾನು ಅರಿತವನು ಜಂಗಮ. ಜಂಗಮನೆಂದರೆ ಧರ್ಮ ಪ್ರಚಾರಕ, ಅವನ ಜೀವನ ತೆರೆದಿಟ್ಟ ಪುಸ್ತಕದಂತೆ, ಜ್ಞಾನದೇಗುಲ. ಪೂಜ್ಯ ಅಪ್ಪಾಜಿಯವರು ಸದಾ ಹೇಳುತ್ತಿದ್ದರು ಜಂಗಮನ ನುಡಿಗಿಂತ ಅವನ ನಡೆ ಪರಿಶುದ್ಧವಾಗಿರಬೇಕು. ಆ ನಡೆಯನ್ನು ನೋಡಿ ಇತರರು ತಮ್ಮನ್ನು ತಾವು ತಿದ್ದಿಕೊಳ್ಳುವಂತಿರಬೇಕು ಎಂದು.





ಅದಕ್ಕಾಗಿಯೇ ಅವರು ಹೇಳುತ್ತಿದ್ದರು "ಮೊದಲು ಸ್ವಾಮಿಯಾಗಿ, ನಂತರ ಕಾವಿಧರಿಸಿ" ಎಂದು, ಮೊದಲು ವ್ಯಕ್ತಿ ತನ್ನ ಇಂದ್ರಿಯಗಳಿಗೆ ಒಡೆಯನಾಗಬೇಕು! ಇತರರಿಗಲ್ಲ. ತನ್ನನ್ನು, ತನ್ನ ಮನಸ್ಸನ್ನು, ತನ್ನ ಇಂದ್ರಿಯಗಳನ್ನು ತನ್ನ ಹತೋಟಿಯಲ್ಲಿ ಇಟ್ಟುಕೊಳ್ಳಬೇಕು! ನಂತರ ಕಾವಿಧರಿಸಬೇಕು!

ಹೀಗೆ ಭಕ್ತರಿಗೆ, ಜಂಗಮರಿಗೆ ಜ್ಞಾನಾಮೃತವನ್ನು ನೀಡಿ, ಬಸವ ಧರ್ಮದ ಹಿರಿಮೆಯನ್ನು ಜಗತ್ತಿಗೆ ಸಾರಿದ ಬಸವ ಧರ್ಮದ ಪುನರುತ್ಥಾನಕರಾದ ಪೂಜ್ಯ ಶ್ರೀ ಮಹಾಜಗದ್ಗುರು ಲಿಂಗಾನಂದ ಸ್ವಾಮೀಜಿಯವರ 73ನೆಯ ಜಯಂತಿಯು ಆಗಸ್ಟ್ 31 ರಂದು ಒದಗಿಬಂದಿದೆ. ಆದ್ದರಿಂದ ಪೂಜ್ಯ ಅಪ್ಪಾಜಿಯವರ ಆ ದಿವ್ಯ ಜೀವನ ನಮ್ಮಗಳ ಬಾಳಿಗೆ ಆದರ್ಶವಾಗಲೆಂದು, ಆ ದಿವ್ಯ ಜ್ಯೋತಿಯು ನಮ್ಮ ಬಾಳಿನ ಹಣತೆಯನ್ನು ಬೆಳಗಿಸಲೆಂದು ಬಸವ ಗುರುವಿನಲ್ಲಿ ಪ್ರಾರ್ಥಿಸುತ್ತಾ ನನ್ನ ಈ ಮಾತುಗಳಿಗೆ ವಿರಾಮವನ್ನು ನೀಡುತ್ತೇನೆ.

---

## ಕಲ್ಲನಾಗರ ಕಂಡರೆ ..........

- ಪೂಜ್ಯ ಶ್ರೀ ಜಗದ್ಗುರು ಅಲ್ಲಮಪ್ರಭು ಸ್ವಾಮೀಜಿ

ನಾಗರ ಪಂಚಮಿ ಎಂದರೆ ಅನೇಕ ಜನರಿಗೆ ಸಡಗರ ಸಂಭ್ರಮ. ಅಂದು ಬೆಳಿಗ್ಗೆ ಸ್ನಾನ ಮಾಡಿ ಹೊಸಬಟ್ಟೆಹಾಕಿಕೊಂಡು ಒಂದಷ್ಟು ಪೂಜಾ ಸಾಮಾನು, ಒಂದು ಬಟ್ಟಲಿನಲ್ಲಿ ಹಾಲು ತೆಗೆದುಕೊಂಡು ಹುತ್ತಗಳನ್ನು ಹುಡುಕುತ್ತ ಹೊರಟಿರುತ್ತಾರೆ. ಬೇರೆ ಬೇರೆ ಊರುಗಳಲ್ಲಿ ಏನೋ ಹುತ್ತಗಳು ಸಿಗಬಹುದು, ಆದರೆ ಬೆಂಗಳೂರಿನಲ್ಲಿ ? ಅವರಿಗೆಲ್ಲ ಪಾಪ ಅನುಕೂಲವಾಗಲಿ ಎಂದು ಕೆಲವರು ಸಿಮೆಂಟಿನಲ್ಲಿ ಹುತ್ತಗಳನ್ನು ನಿರ್ಮಿಸಿದ್ದಾರೆ. ಅಲ್ಲಿ ಹೋಗುವುದು ಹುತ್ತಕ್ಕೆ ಪೂಜೆಷ್ಟ ಮಾಡುವುದು, ಅದಕ್ಕೆ ಹಾಲೆರೆದು ಬರುವುದು. ಎಲ್ಲೊ ಕೆಲವು ಹುತ್ತಗಳಲ್ಲಿ ಹಾವಿದ್ದು, ಹಾಲೆರೆಯಲು ಹೋದಾಗ ಅದಕೋ ಬಹಳ ಆಶ್ಚರ್ಯ. ತನಗಿಂತಲೂ ವಿಷಪ್ರಾಣಿಯಾದ ಮನುಷ್ಯ ಅಪರೂಪಕ್ಕೆ ಪ್ರೀತಿ ತೋರಿಸುತ್ತಿದ್ದಾನಲ್ಲ, ಹಾಲು ನೀಡಲು ಬಂದಿದ್ದಾನಲ್ಲ ಎಂದು ಕೊಂಡು ಕೃತಜ್ಞತೆ ಸಲ್ಲಿಸೋಣವೆಂದು ಬುಸ್ ಎಂದು ಹೊರಬಂದರೆ ಹಾಲಿನ ಬಟ್ಟಲು, ಪೂಜಾ ಸಾಮಾನು ಎಲ್ಲ ಬಿಟ್ಟು ಓಡಿರುತ್ತಾರೆ.

ಇನ್ನು ಕೆಲವರು ಈ ಗೊಂದಲವೇ ಬೇಡವೆಂದು ಕಲ್ಲಿನಲ್ಲಿ ಕೆತ್ತಿದ ನಾಗರಹಾವಿಗೆ ಹಾಲೆರೆದು ತೃಪ್ತಿಪಡುತ್ತಾರೆ. ಇಂಥ ಎಳ್ಳಷ್ಟೂ ವಿಚಾರಮಾಡದ ಜನರನ್ನು ಕಂಡೇ ಬಸವಣ್ಣನವರು ಹೇಳುತ್ತಾರೆ :

ಕಲ್ಲ ನಾಗರ ಕಂಡಡೆ ಹಾಲನೆರೆಯೆಂಬರು ;
ದಿಟದ ನಾಗರ ಕಂಡಡೆ ಕೊಲ್ಲೆಂಬರಯ್ಯಾ !
ಉಂಬ ಜಂಗಮ ಬಂದಡೆ ನಡೆಯೆಂಬರು ;
ಉಣ್ಣದ ಲಿಂಗಕ್ಕೆ ಬೋನವ ಹಿಡಿಯೆಂಬರಯ್ಯಾ !
ನಮ್ಮ ಲಿಂಗದೇವನ ಶರಣರ ಕಂಡು ಉದಾಸೀನವ ಮಾಡಿದಡೆ,

ಕಲ್ಲ ತಾಗಿದ ಮಿಟ್ಟೆಯಂತಪ್ಪರಯ್ಯಾ

- ಬ.ವ.ದೀ - 196

ಇದು ವಿಜ್ಞಾನಯುಗ, ಪ್ರತಿಯೊಬ್ಬ ವ್ಯಕ್ತಿಯೂ ಸಹ ಪ್ರತಿಯೊಂದನ್ನೂ ವೈಜ್ಞಾನಿಕ ದೃಷ್ಟಿಯಿಂದ ನೋಡುತ್ತಾನೆ. ಪ್ರತಿಯೊಂದು ವಸ್ತುವನ್ನೂ ಕುತೂಹಲದಿಂದ ಕಾಣುವ ದೃಷ್ಟಿಕೋನ ಬೆಳೆಸಿಕೊಳ್ಳುತ್ತಿದ್ದಾನೆ. ಆದರೆ ಧಾರ್ಮಿಕ ವಿಧಿ ವಿಧಾನದ ಬಗ್ಗೆ, ಪೂಜ್ಯವಸ್ತುವಿನ ಬಗ್ಗೆ ವೈಚಾರಿಕ ಚಿಂತನೆ ಮಾಡುವುದರಲ್ಲಿ ಎಡವುತ್ತಿದ್ದಾನೆ. ಎಲ್ಲದರಲ್ಲೂ ಧೈರ್ಯಶಾಲಿಯಾಗಿ ಮುನ್ನಡೆಯುವ ಮಾನವ ಮೂಢನಂಬಿಕೆ, ಅಂಧ ಆಚರಣೆಗಳಿಗೆ ಕಟ್ಟು ಬಿದ್ದು ವಿವೇಚನ ಶಕ್ತಿಯನ್ನು ಈ ವಿಷಯದಲ್ಲಿ ಕುಂಠಿತಗೊಳಿಸಿಕೊಂಡಿದ್ದಾನೆ. ಒಂದು ಚಿಕ್ಕ ವಸ್ತುವಿನಿಂದ ಹಿಡಿದು ರಾಕೆಟ್, ಉಪಗ್ರಹಗಳ ಬಗ್ಗೆ, ಸೂರ್ಯ ಭೂಮಿ ನಕ್ಷತ್ರಗಳ ಚಲನವಲನಗಳ ಬಗ್ಗೆ ತಿಳಿದುಕೊಳ್ಳಲು ಕಾತುರ ಪಡುವ ಈತ ಧರ್ಮ-ದೇವರ ವಿಚಾರದಲ್ಲಿ, ತನ್ನ ಸ್ವರೂಪವನ್ನು ತಿಳಿದುಕೊಳ್ಳುವ ವಿಚಾರದಲ್ಲಿ ಚಿಂತನೆ ಮಾಡದಿರುವುದು ಸೋಜಿಗದ ಸಂಗತಿ.

ಅಪ್ಪ ಬಸವಣ್ಣನವರು ಹೇಳುತ್ತಾರೆ :

ನಾಗಂಗೆ ಹೊಸತನಿಕ್ಕಿಹೆನೆಂಬರು ;
ನಾಗ ಬಂದಡೆ ಕೋಲ ಕಳೆದುಕೊಂಬರು !
ಆಗದಯ್ಯಾ ! ಜಂಗಮ ಲಿಂಗವೆಂಬ ಶಬ್ದವಾಗದಯ್ಯಾ !
ಕೂಡಲಸಂಗಮದೇವರಲ್ಲಿ ಸಿಂಧುಬಲ್ಲಾಳಂಗಲ್ಲದೆ ಆಗದಯ್ಯಾ

- ಬ.ವ.ದೀ - 197

ನಾಗರಹಾವನ್ನು ಪೂಜಿಸಲು ಬಹಳ ಭಕ್ತಿಯಿಂದ ಅವಿರುವ ಹಾವಿನ ಹತ್ತಿರ ಜನ ಬರುತ್ತಾರೆ. ಅದನ್ನು ಪೂಜಿಸಿ, ಅದಕ್ಕೆ ನೈವೇದ್ಯ ಮಾಡಿ, ತೃಪ್ತಿ ಪಡಿಸಿ ವರಕೇಳಬೇಕಲ್ಲವೆ? ಆದರೆ ಆ ಹಾವು ಬಂದರೆ ಗಾಬರಿಗೊಂಡು ಓಡುತ್ತಾರೆ, ಇಲ್ಲವೇ ಕೋಲಿನಿಂದ ಬಡಿದು ಸಾಯಿಸುತ್ತಾರೆ. ಇದೆಂಥ ಆಚರಣೆ ? ಹಾವನ್ನು ದೇವರೆಂದು ಪೂಜಿಸುವುದು ಮೊದಲ ತಪ್ಪು. ನಂತರ ಅದನ್ನು ಒಲಿಸಿ ವರ ಪಡೆಯಲೆಂದು ಬಂದು, ಅದು ಹೊರಬಂದಾಗ ವರಕೇಳುವುದನ್ನು ಬಿಟ್ಟು ಕೊಲ್ಲುವುದೆ ? ದೇವರನ್ನೇ ಕೊಲ್ಲುವುದೆ ?! ಮನುಷ್ಯ ಹೆಜ್ಜೆ ಹೆಜ್ಜೆಗೂ ಎಷ್ಟು ಎಡವುತ್ತಿದ್ದಾನೆ ! ಈತನಿಗೆ ಕುಡಿಯುವ ನೀರೂ ದೇವರು, ತಿನ್ನುವ ಆಹಾರವೂ ದೇವರು, ಉಪಯೋಗಿಸುವ ವಸ್ತುವೂ ದೇವರೆ ! ಅದಕ್ಕಾಗಿಯೇ ಬಸವಣ್ಣನವರು ಹೇಳುತ್ತಾರೆ :

ನೀರ ಕಂಡಲ್ಲಿ ಮುಳುಗುವರಯ್ಯಾ,
ಮರನ ಕಂಡಲ್ಲಿ ಸುತ್ತುವರಯ್ಯಾ !
ಬತ್ತುವ ಜಲವ ಒಣಗುವ ಮರನ
ಮಚ್ಚಿದವರು ನಿಮ್ಮನೆತ್ತ ಬಲ್ಲರಯ್ಯಾ, ಲಿಂಗದೇವಾ ?

- ಬ.ವ.ದೀ - 578

ನೀರನ್ನು ಕಂಡಾಗ ಅದು ಪವಿತ್ರ, ಅಲ್ಲಿ ಸ್ನಾನ ಮಾಡಿದರೆ ತಮ್ಮ ಪಾಪವೆಲ್ಲ



ಹೋಗುತ್ತದೆ ಎಂದು ಭ್ರಮಿಸುವರು. ಅದರಲ್ಲೂ ಗಂಗಾನದಿಯಲ್ಲಿ ಮಿಂದರೆ ಎಲ್ಲ ರೀತಿಯ ಪಾಪಗಳೂ ಹೋಗುತ್ತವೆ (ಹೊಸ ಪಾಪ ಮಾಡಲು ಲೈಸೆನ್ಸ್ ಸಿಗುತ್ತದೆ !?) ಎಂದೇ ಆ ನದಿಗೆ ಬಹಳ ದೊಡ್ಡ ಸ್ಥಾನ ಕೊಟ್ಟಿದ್ದಾರೆ. ಹಿಂದೆ ಆ ನೀರು ಬಹಳ ಶುಭ್ರವಾಗಿದ್ದು, ಗಿಡಮೂಲಿಕೆಗಳ ಮೂಲಕ ಹರಿದು ಬರುತ್ತಿದ್ದರಿಂದ ಮನುಷ್ಯನ ಚರ್ಮರೋಗಗಳು ವಾಸಿಯಾಗುತ್ತಿದ್ದವು. ಅದಕ್ಕಾಗಿ ಅಲ್ಲಿ ಔಷಧೀಯ ಗುಣವಿರುವ ಕಾರಣ ಹಿಂದಿನವರು ಅದಕ್ಕೆ ಪ್ರಾಮುಖ್ಯತೆ ನೀಡಿದ್ದರು. ಆದರೆ ಈಗ ಅದು ಮನುಷ್ಯನ ಅಜ್ಞಾನಕ್ಕೆ ಸಿಕ್ಕು ಪೂರ್ತಿ ಮಲಿನವಾಗಿದೆ. ಅಲ್ಲಿ ಸ್ನಾನ ಮಾಡಿದರೆ ಇನ್ನಷ್ಟು ರೋಗಗಳು ಬರಬಹುದು. ಸತ್ತವರಿಗೆ ಮೋಕ್ಷ ಸಿಗುವುದೆಂಬ ಭ್ರಾಂತಿ ತುಂಬಿರುವ ಜನರು ಹೆಣಗಳನ್ನು ಅರ್ಧಂಬರ್ಧ ಸುಟ್ಟು ನದಿಯಲ್ಲಿ ತೇಲಿಬಿಡುವರು.

ಅದೇನೇ ಇರಲಿ ಗಂಗಾನದಿಯಲ್ಲಿ ಮುಳುಗಿ ಎದ್ದರೆ ಮಾಡಿದ ಪಾಪಗಳು ಹೋಗುವುದೆಂಬ ಭ್ರಾಂತಿ ಮಾತ್ರ ಜನರಲ್ಲಿ ಉಳಿದಿದೆ. ಒಂದು ಸಲ ರಾಮಕೃಷ್ಣ ಪರಮ ಹಂಸರ ಶಿಷ್ಯನೊಬ್ಬ ಅವರಿಗೆ ಒಂದು ಪ್ರಶ್ನೆ ಕೇಳಿದ. ''ಗಂಗಾನದಿಯಲ್ಲಿ ಮುಳುಗುಹಾಕಿದರೆ ಮಾಡಿದ ಪಾಪಗಳೆಲ್ಲ ಹೋಗುತ್ತವಂತೆ. ಇದು ನಿಜವೆ ?''. ರಾಮಕೃಷ್ಣ ಪರಮ ಹಂಸರು ಗಂಭೀರವಾಗಿ ಹೇಳಿದರು ''ಹೌದು, ಅದು ಸತ್ಯ''. ಶಿಷ್ಯನಿಗೆ ಸಂತೋಷವಾಯಿತು ''ಹಾಗಾದರೆ ನಾನೂ ಹೋಗಿ ಮುಳುಗು ಹಾಕಲೆ ?'' ಎಂದು ಕೇಳಿದ. ಅವರು ಹೇಳಿದರು ''ಅವಶ್ಯವಾಗಿ ಮುಳುಗು '' ಮತ್ತೆ ಕೇಳಿದ ''ನಾನು ಮಾಡಿದ ಎಲ್ಲ ತರಹದ ಪಾಪಗಳೂ ಹೋಗುವುದೇ ?''. ''ಖಂಡಿತವಾಗಿ ಹೋಗುವವು''! ಮತ್ತೆ ಕೇಳಿದ ''ನೀವು ಹೇಳುವುದು ಸತ್ಯವೆ ?'' ಆಗ ಅವರು ಉತ್ತರಿಸಿದರು ''ನಾನು ಹೇಳುವುದು ಖಂಡಿತ ಸತ್ಯದ ಮಾತು. ಹೋಗು ಗಂಗಾನದಿಯಲ್ಲಿ ಮುಳುಗು, ನಿನ್ನ ಎಲ್ಲ ಪಾಪಗಳೂ ಹೋಗುವವು. ಆದರೆ .....!''. ಶಿಷ್ಯನಿಗೆ ಕುತೂಹಲವಾಯಿತು. ಆದರೆ ಏನು ? ಮತ್ತೆ ರಾಮಕೃಷ್ಣರು ಹೇಳಿದರು ''ಆದರೆ, ಮತ್ತೆ ಎದ್ದು ಬರಬೇಡ ! ಬಂದರೆ ಮತ್ತೆ ಅಂಟಿಕೊಂಡು ಬಿಡುತ್ತದೆ. ಆದ್ದರಿಂದ ಮುಳುಗಿಬಿಡು'' ಎಂದರು.

ಒಮ್ಮೆ ಪೂಜ್ಯ ಮಾತಾಜಿಯವರು ಏಕದೇವೋಪಾಸನೆಯ ವಿಷಯವನ್ನು ವಿವರವಾಗಿ ತಿಳಿಸುತ್ತಿದ್ದಾಗ, ಓರ್ವ ವ್ಯಕ್ತಿ ಕೇಳಿದರು, ಗಂಗೆ ಪೂಜೆಯನ್ನೂ ಮಾಡಬಾರದೆ ? ಆಗ ಪೂಜ್ಯ ಮಾತಾಜಿಯವರು ಹೇಳಿದರು ''ಅವಶ್ಯವಾಗಿ ಮಾಡಿರಿ'' ! ಆಗ ಆ ವ್ಯಕ್ತಿ ಮತ್ತೆ ಕೇಳಿದರು 'ನೀವು ಕೇವಲ ಬಸವಣ್ಣನವರನ್ನು, ಇಷ್ಟಲಿಂಗವನ್ನು ಮಾತ್ರ ಪೂಜಿಸಿರಿ. ಇದು ಬಿಟ್ಟು ಮತ್ತೆ ಯಾವುದನ್ನೂ ಪೂಜಿಸ ಬೇಡಿರಿ ಎಂದಿರಲ್ಲ ! ಆಗ ಮಾತಾಜಿಯವರು ಹೇಳಿದರು ''ನಾನಿನ್ನೂ ನನ್ನ ಮಾತನ್ನು ಮುಗಿಸಿಲ್ಲ, ನೀವು ಮಧ್ಯ ಬಾಯಿ ಹಾಕಿದಿರಿ ! ಸರಿಯಾಗಿ ಕೇಳಿರಿ 'ನೀವು ಅವಶ್ಯವಾಗಿ ನೀರಿನ ಅಂದರೆ ಗಂಗೆಯ ಪೂಜೆ ಮಾಡಿರಿ ! ಆದರೆ ನಂತರ ಎಂದಿಗೂ ನೀರನ್ನು ಕುಡಿಯಬೇಡಿ. ನೀರನ್ನು ಶೌಚಾಚ ಕ್ರಿಯೆಗಳಿಗೆ ಬಳಸಬೇಡಿ. ನೀರಿನಿಂದ ಸ್ನಾನ ಮಾಡಬಾರದು. ಬಾಯಿ ತೊಳೆದುಕೊಳ್ಳಬಾರದು, ಅಡಿಗೆಗೆ ಉಪಯೋಗಿಸಬಾರದು ಹಾಗಿದ್ದಲ್ಲಿ ಮಾತ್ರ ಪೂಜೆ ಮಾಡಿರಿ ! ದೇವರನ್ನು, ದೇವತೆಯನ್ನು ಹಾಗೆ ಬಳಸಲಾದೀತೆ ?! '' ಎಂದಾಗ ಆ ವ್ಯಕ್ತಿ ತಬ್ಬಿಬ್ಬಾದ. ನಂತರ ಹೇಳಿದರು, ''ನೀರನ್ನು ಪೂಜೆ

ಮಾಡಬೇಡಿ, ಬದಲಾಗಿ ನೀರಿನಿಂದ ಪೂಜೆ ಮಾಡಿರಿ. ಅಂದರೆ ಮಜ್ಜನಕ್ಕೆರೆಯಲು, ತೀರ್ಥಮಾಡಲು ಉಪಯೋಗಿಸಿರಿ''.

ಅದೇ ರೀತಿ ಮರವನ್ನು ಪೂಜಿಸುವರು. ಹಿಂದಿನ ಕಾಲದಲ್ಲಿ ಅದರಲ್ಲೂ ನಮ್ಮ ಭಾರತ ದೇಶದಲ್ಲಿ ಆಯುರ್ವೇದ ಬಹಳ ಮಹತ್ವದ ಸ್ಥಾನ ಪಡೆದಿದೆ. ಋಷಿಮುನಿಗಳು, ಸಂತರು, ಪಂಡಿತರು ಅನೇಕ ರೀತಿಯ ಔಷಧೀಯಗುಣವುಳ್ಳ ವಿವಿಧ ಜಾತಿಯ ಗಿಡಮರಗಳನ್ನು ಗುರುತಿಸಿದ್ದಾರೆ. ಬಿಲ್ವ, ತುಳಸಿ, ಬನ್ನಿ ಪತ್ರೆ, ತುಂಬೆ, ಎಕ್ಕ ಹೀಗೆ ಅನೇಕ ಗಿಡಗಳನ್ನು ಗುರುತಿಸಿ, ಅಜ್ಞಾನಿ ಜನರು ಇದರ ಮಹತ್ವವನ್ನು ಅರಿಯದೆ ಅವುಗಳನ್ನು ಕಡಿದುಹಾಕಬಹುದೆಂದು ಅವುಗಳನ್ನು ಪವಿತ್ರಗಿಡ, ಮರಗಳೆಂದು ಕರೆದರು. ಕೆಲವರು ಅದಕ್ಕೆ ಅನೇಕ ಕಥೆಗಳನ್ನು ಕಟ್ಟಿದರು. ಒಟ್ಟಿನಲ್ಲಿ ಆ ಗಿಡಮರಗಳನ್ನು ರಕ್ಷಿಸುವುದಕ್ಕಾಗಿ ಅದಕ್ಕೆ ಪಾವಿತ್ರತೆಯ ಬೇಲಿ ಹಾಕಿದರು. ಆದರೆ ಜನ ಅದನ್ನು ಗುರುತಿಸದೇ ಕಥೆಗಳನ್ನೇ ಆಧಾರವಾಗಿಟ್ಟುಕೊಂಡು ಪೂಜಿಸಲು ತೊಡಗಿದರು. ದೇವರ ನೆಲೆ-ಕಲೆಗಳನ್ನರಿಯದ ಜನರ ಅಜ್ಞಾನವನ್ನು ಕಂಡೇ ಗುರು ಬಸವಣ್ಣನವರು ನುಡಿಯುತ್ತಾರೆ :

ಬತ್ತುವ ಜಲವ ಒಣಗುವ ಮರನ
ಮಚ್ಚಿದವರು ನಿಮ್ಮನೆತ್ತ ಬಲ್ಲರಯ್ಯಾ, ಲಿಂಗದೇವಾ ?

ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲಾಗದೆ ಬತ್ತಿಹೋಗುವ ನೀರು, ಒಣಗಿ ಹೋಗುವ ಮರ, ಇವನ್ನು ಮನುಷ್ಯ ನೆಚ್ಚಿ ಅದನ್ನೇ ದೇವರು, ದೇವತೆಗಳೆಂದು ಪೂಜಿಸುವುದು ಈ ವೈಜ್ಞಾನಿಕ ಯುಗದಲ್ಲಿ ಎಂಥ ವಿಪರ್ಯಾಸ ! ಅದಕ್ಕೆ ಬಸವಣ್ಣನವರು ಹೇಳುತ್ತಾರೆ, ''ಗಿಡ ಮರಗಳನ್ನು ಪೂಜಿಸಬೇಡಿ, ಗಿಡದಿಂದ ಬರುವ ಹೂವಿನಿಂದ, ಮರದ ಪತ್ರೆಗಳಿಂದ ಪರಮಾತ್ಮನನ್ನು ಅರ್ಚಿಸಿರಿ, ಪೂಜಿಸಿರಿ, ಅದರ ಜೊತೆಯಲ್ಲಿ ನಿಮ್ಮ ಭಕ್ತಿಯನ್ನೂ ಮರೆಯದೇ ಅರ್ಪಿಸಿರಿ'' ಎಂದು.

ಗುರು ಬಸವಣ್ಣನವರ ಒಂದೊಂದು ವಚನವೂ ಇಂದಿನ ಜಗತ್ತಿಗೆ ಅದ್ಭುತ ಮಾರ್ಗದರ್ಶನ ನೀಡುತ್ತಿದೆ. ಅವರು ಈ ಇಳೆಯನ್ನಗಲಿ ಇಂದಿಗೆ (2-8-2003) 807 ವರ್ಷಗಳಾಗಿವೆ. ಅದನ್ನು ಬಸವ ಪಂಚಮಿ ಎಂದು ಭಕ್ತಿಪೂರ್ವಕವಾಗಿ ಆಚರಿಸೋಣ.

---

ಸೂಚನೆ : ನಿಮ್ಮ ವಿಳಾಸಕ್ಕೆ 'ಕಲ್ಯಾಣ ಕಿರಣ' ಪತ್ರಿಕೆಯ ಎರಡು ಪ್ರತಿಗಳು ಬರುತ್ತಿದ್ದರೆ ದಯಮಾಡಿ ಬೆಂಗಳೂರು ಕಾರ್ಯಾಲಯದ ವಿಳಾಸಕ್ಕೆ ಬರೆದು ತಿಳಿಸಿ. (ವಿಳಾಸದ ಮೇಲೆ ಮುದ್ರಿತವಾದ ಸಂಖ್ಯೆಯನ್ನು ಉಲ್ಲೇಖಿಸಲು ಮರೆಯಬೇಡಿರಿ)

---

**ಗುರು ವಾಣಿ**

ಸಂಸಾರವೆಂಬ ವಿಷವೃಕ್ಷದಲ್ಲಿ, ಶರಣರ ಸತ್ಸಂಗ ಮತ್ತು ಸಾಹಿತ್ಯಾಧ್ಯಯನ ಎಂಬುವು ಅಮೃತ ಫಲಗಳು.

- ಸ್ವಾಮಿ ಲಿಂಗಾನಂದರು



# ವಿಶ್ವಗುರು ಬಸವಣ್ಣನವರು (1134-1196)

ವಿಶ್ವಗುರು ಬಸವಣ್ಣನವರು ಪರಮಾತ್ಮನ ಕರುಣೆಯ ಕಂದರಾಗಿ ಅವತರಿಸಿ, ಲೋಕಕ್ಕೆ ಹೊಸ ಧರ್ಮವೊಂದನ್ನು ಕೊಟ್ಟರು. ಇಂಗಳೇಶ್ವರ ಬಾಗೇವಾಡಿಯಲ್ಲಿ ಶೈವಬ್ರಾಹ್ಮಣ ದಂಪತಿಗಳಾದ ಮಾದರಸ -ಮಾದಲಾಂಬಿಕೆಯರ ಮಗನಾಗಿ ಆನಂದನಾಮ ಸಂವತ್ಸರದಲ್ಲಿ ವೈಶಾಖಮಾಸದ ಅಕ್ಷಯ ತೃತೀಯಾದಂದು (30-4-1134) ರೋಹಿಣಿ ನಕ್ಷತ್ರದಲ್ಲಿ ಜನಿಸಿ ಯಾವುದೇ ಅಂಧಶ್ರದ್ಧೆ- ಜಡಸಂಪ್ರದಾಯಗಳನ್ನೊಪ್ಪದೆ ಸತ್ಯಾನ್ವೇಷಕರಾಗಿ ಹೆತ್ತವರನ್ನು, ಬಂಧು ಬಾಂಧವರನ್ನು ತೊರೆದು ವಿದ್ಯಾಕಾಂಕ್ಷಿಯಾಗಿ ಕೂಡಲ ಸಂಗಮದ ಗುರುಕುಲಕ್ಕೆ ಬಂದರು. ಶಾಸ್ತ್ರಾಧ್ಯಯನ, ಯೋಗಾಭ್ಯಾಸಗಳಲ್ಲಿ ಬಾಲ್ಯವನ್ನು ಕಳೆದು ತಾರುಣ್ಯಕ್ಕೆ ಕಾಲಿರಿಸಿದರು. ಜನರಲ್ಲಿ ಮನೆ ಮಾಡಿಕೊಂಡಿದ್ದ ಮೌಢ್ಯತೆ, ಕಂದಾಚಾರ, ಜಾತೀಯತೆಗಳನ್ನು ಕಂಡು ಮನನೊಂದು ಪರಿಹಾರವನ್ನು ಅರಸತೊಡಗಿದರು.

ಒಂದು ದಿನ (14-1-1155) ಪರಮಾತ್ಮನ ದಿವ್ಯ ದರ್ಶನವಾಯಿತು ; ಅನುಗ್ರಹಿತರಾದರು. ಬ್ರಹ್ಮ-ವಿಷ್ಣು-ಮಹೇಶ್ವರರೆಂಬ ತ್ರಿಮೂರ್ತಿಗಳನ್ನು ಮೀರಿದ ಸೃಷ್ಟಿಕರ್ತನೇ ಶ್ರೇಷ್ಠನೆಂದು ಘೋಷಿಸಿ ಆ ದೇವನನ್ನು ಲಿಂಗದೇವ ಎಂದು ಕರೆದರು. 'ನಿರಾಕಾರ ದೇವನಿಗೆ ಮನುಷ್ಯರ, ಪ್ರಾಣಿಗಳ ಆಕಾರ ಕೊಡುವುದು ಸರಿಯಲ್ಲ' ಎಂಬ ಭಾವ ತಳೆದು, 'ದೇವನ ಸಾಕಾರ ಕೃತಿಯೇ ಬ್ರಹ್ಮಾಂಡ, ಇದು ಗೋಲಾಕಾರದಲ್ಲಿದೆ. ಆದ್ದರಿಂದ ದೇವನನ್ನು ವಿಶ್ವದಾಕಾರದಲ್ಲಿ ಪೂಜಿಸುವುದು ಸರಿ' ಎಂದು ಇಷ್ಟಲಿಂಗದ ಪರಿಕಲ್ಪನೆ ಕೊಟ್ಟರು. ದೇವರ ಕುರುಹಾದ ಇಷ್ಟಲಿಂಗವು ಮಾನವನ ಜಾತಿ, ವರ್ಣ, ವರ್ಗ ಭೇದಗಳನ್ನು ಕಳೆದು ಶರಣನನ್ನಾಗಿ ಮಾಡುವ ಸಾಧನವಾಗಬೇಕೆಂದು ಅದನ್ನು ಗಣ ಲಾಂಛನವನ್ನಾಗಿ ಮಾಡಿದರು.

ದಿವ್ಯಾನುಭವ ಪಡೆದು, ನವ ಸಮಾಜ ನಿರ್ಮಾಣದ ರೂಪುರೇಷೆಗಳನ್ನು ತಮ್ಮ ಮನದಲ್ಲಿ ಹೊಂದಿ ಕಲ್ಯಾಣದ ಕಾರ್ಯಕ್ಷೇತ್ರವನ್ನು ಪ್ರವೇಶಿಸಿದರು. ಸೋದರ ಮಾವನ ಮಗಳು ನೀಲಗಂಗಳನ್ನು ವಿವಾಹವಾಗಿ ಕರಣಿಕ ಕಾಯಕ ಕೈಗೊಂಡರು. ಅಲ್ಲಿಂದ ಮುಂದೆ ಭಂಡಾರಿಯಾಗಿ, ಪ್ರಧಾನಿ (ದಂಡನಾಯಕ)ಯಾಗಿ ಕಾಯಕ ನಿರ್ವಹಿಸಿದರು. ಅನುಭವ ಮಂಟಪವನ್ನು ರಚಿಸಿ ಧರ್ಮಪ್ರಚಾರ ಮಾಡಿದರು. ಎಲ್ಲರ ಮನೆ, ಮನಗಳ ಬಾಗಿಲಿಗೂ ಧರ್ಮಗಂಗೆ ಹರಿಯುವಂತೆ ಮಾಡಿದರು. ಇಷ್ಟಲಿಂಗವೆಂಬ ಗಣಲಾಂಛನವನ್ನು ಧರಿಸಿ ಲಿಂಗಾಯತರಾದ ಎಲ್ಲ ಶರಣ ಬಂಧುಗಳನ್ನು ಸಮಾನ ಭಾವದಿಂದ ಕಂಡರು. ಹುಟ್ಟಿನಿಂದ ಬ್ರಾಹ್ಮಣರಾಗಿ, ಸಂಸ್ಕಾರದಿಂದ ಶರಣರಾದ ಮಧುವರಸರ ಮಗಳನ್ನು ಹುಟ್ಟಿನಿಂದ ಸಮಗಾರರಾಗಿ ಸಂಸ್ಕಾರದಿಂದ ಶರಣರಾದ ಹರಳಯ್ಯನವರ ಮಗನಿಗೆ ಕೊಟ್ಟು ವಿವಾಹ ಮಾಡಲು ಪ್ರೇರಣೆ ನೀಡಿದರು. ಈ ವಿವಾಹದಿಂದ ಸಂಪ್ರದಾಯವಾದಿಗಳು ಸಿಡಿದೆದ್ದು ಬಿಜ್ಜಳ ಮಹಾರಾಜನನ್ನು ಪ್ರೇರೇಪಿಸಿ ಧರ್ಮಗುರು ಬಸವಣ್ಣನವರಿಗೆ ಗಡಿಪಾರು ಶಿಕ್ಷೆ ನೀಡುವಂತೆ ಮಾಡಿದರು. ಧರ್ಮಪಿತರು ಗಡಿಪಾರು ಶಿಕ್ಷೆ ಸ್ವೀಕರಿಸಿ ಕಲ್ಯಾಣದಿಂದ ಹೊರಟ ನಂತರ ಹರಳಯ್ಯ, ಮಧುವರಸ, ಶೀಲವಂತರ ಬಂಧನವಾಗಿ, ಅವರು ವರ್ಣಾಂತರ ವಿವಾಹದಲ್ಲಿ ಭಾಗಿಗಳಾದುದಕ್ಕಾಗಿ ಕಣ್ಣು ಕೀಳಿಸುವ ಶಿಕ್ಷೆ, ಎಳೆಹೂಟೆ ಶಿಕ್ಷೆಗೆ ಒಳಗಾಗಿ ಪ್ರಾಣಬಿಡಬೇಕಾಯಿತು. ಜಾತಿವಾದಿಗಳು ವಚನ ಸಾಹಿತ್ಯವನ್ನು ನಾಶಮಾಡಲು ಸನ್ನದ್ಧರಾದಾಗ ವೀರಮಾತೆ ಅಕ್ಕನಾಗಲಾಂಬಿಕೆ, ಚಿನ್ಮಯಜ್ಞಾನಿ ಚನ್ನಬಸವಣ್ಣ, ವೀರ ಗಣಾಚಾರಿ ಮಡಿವಾಳ ಮಾಚಯ್ಯನವರು ವೀರಾಗ್ರಣಿಗಳಾಗಿ ಕಾದಾಡಿ ವಚನ ವಾಙ್ಮಯ ನಿಧಿಯನ್ನು ಉಳಿಸಿಕೊಟ್ಟರು. ಅದಿಂದು ನಮ್ಮೆಲ್ಲರ, ಕರ್ನಾಟಕದ, ಭಾರತದ, ಇಡೀ ವಿಶ್ವದ ಹೆಮ್ಮೆಯ ಆಸ್ತಿಯಾಗಿದೆ. ಇಂಥ ಮಹಾನ್ ನೇತಾರರಾದ ಬಸವಣ್ಣನವರು ಲಿಂಗಾಯತ ಧರ್ಮದ ಸಂಸ್ಥಾಪಕರು; ಧರ್ಮಪಿತರು, ಮಂತ್ರಪುರುಷರು. 62ವರ್ಷ 3 ತಿಂಗಳು 2ದಿವಸಗಳ ಕಾಲ ಇಳೆಯಲ್ಲಿ ಬಾಳಿದ ಬಸವಣ್ಣನವರು ನಳನಾಮ ಸಂವತ್ಸರದ ಶ್ರಾವಣ ಶುದ್ಧ ಪಂಚಮಿ (ದಿ.30-7-1196)ಯಂದು ಉರಿಯುಂಡ ಕರ್ಪೂರದಂತೆ ಲಿಂಗೈಕ್ಯರಾದರು.

## ಬಸವ ಧರ್ಮ ಪೀಠದ ಯೋಜನೆಗಳಿಗೆ ಧನ ದಾಸೋಹ ಮಾಡಿದ ಶರಣ ಬಂಧುಗಳು

(ಏಪ್ರಿಲ್- 2003 ರ ಸಂಚಿಕೆಯಿಂದ ಮುಂದುವರಿದುದು)

**ಬಸವ ಕಲ್ಯಾಣದ ಕಟ್ಟಡ ನಿಧಿಗೆ :**
**ಶರಣರುಗಳಾದ :**
ಆರ್. ಜಿ. ಪಾಟೀಲ, ಗುಲಬರ್ಗಾ 81,000-00
ನಾಗಮ್ಮ ಅಣ್ಣಪ್ಪಾ ಭದ್ರಶೆಟ್ಟಿ, " 61,000-00
ಎಸ್. ಎಂ. ಮಾಲಿ ಪಾಟೀಲ, " 61,000-00
ಅರವಿಂದ ಅಲಗೋಡ, " 61,000-00

**ಕೂಡಲ ಸಂಗಮದ ಕಟ್ಟಡ ನಿಧಿಗೆ :**
**ಶರಣರುಗಳಾದ :**
ಅನ್ನಪೂರ್ಣ ಪರ್ವತಯ್ಯ ಸ್ವಾಮಿ, ಗುಲಬರ್ಗಾ 71,000-00
ಲಲಿತಾಬಾಯಿ ಅವ್ವಣ್ಣಜೇರ್, " 51,000-00
ಸುನೀಲ್ ಕುಮಾರ್ ಸಿದ್ರಾಮಲೋನಿ,ಸಿರಕನಹಳ್ಳಿ 15,651-00
ಎಸ್. ವಿ. ಕಲ್ಯಾಣ ಕುಮಾರ, " 5,001-00
ಸುಮಾ ಬಂದರವಾಡ, " 5,001-00

**ಪುಸ್ತಕ ಪ್ರಕಟಣೆಗಾಗಿ :**
ಶರಣೆ. ಜ್ಯೋತಿ ಶಶಿಶೇಖರ ಪಡಶೆಟ್ಟಿ, ಗುಲಬರ್ಗಾ 11,000-00

**63 ಅಡಿಯ ಬಸವ ಪುತ್ಥಳಿಗಾಗಿ ರೂ. 11,000-00 ಸಲ್ಲಿಸಿದವರು :**
**ಶರಣರುಗಳಾದ :**
ಬಸವಣ್ಣೆಪ್ಪ ದೇವಣಗಾಂವ, ಗುಲಬರ್ಗಾ
ವೀರಭದ್ರಪ್ಪ ಎಂ. ಪಾರಶೆಟ್ಟಿ, "
ಶರಣ ಬಸಪ್ಪ ಮಹಾದೇವಪ್ಪ ಸಿರಗಾಪುರ, "
ಸುಮಿತ್ರಾಬಾಯಿ ಬಸವರಾಜ ಕಲಬುರ್ಗಿ, "
ಶಿವರಾಜ ಬಸವಣ್ಣೆಪ್ಪ ಅಂಬಲಗಿ, "
ಶರಣಮ್ಮ ಬಸವರಾಜ ಪೋಲಿಸ್ ಪಾಟೀಲ್, ಶರಣನಗರ
ಶಾಂತಾಬಾಯಿ ಎಂ. ಎಂ. ಪಾಟೀಲ, ಶಾಂತಿ ನಗರ
ಶ್ರೀದೇವಿ ಮತ್ತು ಪುತಳಾಬಾಯಿ, ಬೀದರ
ಎಂ. ಕೆ. ತಾಂಬೋಳೆ, ಸಾಯಿಗಾಂವ
ಬಸವರಾಜ್ ಪಾಟೀಲ್, ಸಂಖ್
ಗಿರಿಜಾ ಪ್ರಕಾಶ್ ಚರಾಟೆ, ವಿದ್ಯಾನಗರ
ಸಿದ್ದಪ್ಪ ನಿಂಗಪ್ಪ ಕಾಬಂಡಕಿ, ಬಾಗಲಕೋಟೆ
ಬಸಯ್ಯ ವೀರಭದ್ರಯ್ಯ ಹಿರೇಮಠ, ಬಾಗಲಕೋಟೆ 10,001-00

**ದಾಸೋಹ ನಿಧಿಯ ಪುದುವಟ್ಟಿಗಾಗಿ 5001-00 ರೂ. ಸಲ್ಲಿಸಿದವರು :**
**ಶರಣರುಗಳಾದ :**
ಡಾ ॥ ಜಿ. ಗಾಂಧಿ, ಸಹಕಾರ ನಗರ
ವಿದ್ಯಾವತಿ ವಿಶ್ವನಾಥ, ಗುಲಬರ್ಗಾ
ತಾರಾಬಾಯಿ ಬಸವಣ್ಣೆಪ್ಪ ಪಾಟೀಲ, "
ಅವ್ವಣ್ಣ ಬಿ. ಜೇರ, "
ಮಹಾದೇವಿ ಸೋಮಶೇಖರ ಸಜ್ಜನ ಶೆಟ್ಟಿ, "
ರಾಮಚಂದ್ರ ಹನುಮಂತಪ್ಪ ಗೋಳ, "
ದಶರಥ ಹಿರೋಜಿಕರ್, "
ದೀಪಾಲಿ ರಾಜೇಂದ್ರ ಕುಮಾರ ಬಿರಾದಾರ, "
ಶಿವಪುತ್ರ ಬಸವಂತಪ್ಪ ಉಳ್ಳಾಗಡ್ಡಿ, ಬಾಗಲಕೋಟೆ
ಅಣ್ಣಾರಾವ್ ನಂದಿಕೂರು, ಕರುಣೇಶ್ವರ ನಗರ
ಜಿ. ನಾಗರಾಜ ಗುರುಮಲ್ಲೇಶಪ್ಪ, ಕೊಡಿಗೆಹಳ್ಳಿ
ಎಸ್. ರಾಜಪ್ಪ, ರಾಜಾಜಿನಗರ 2,000-00
ಮಲ್ಲಿನಾಥ ಸುವರ್ಣ ಐನಾಪುರೆ, ಸಹಕಾರಿ ನಗರ 1,101-00

**ಬಸವ ಕಲ್ಯಾಣದ ದಾಸೋಹ ನಿಧಿಗೆ ರೂ. 1200-00 ಕೊಟ್ಟವರು :**
**ಶರಣರುಗಳಾದ :**
ಶಂಕರಪ್ಪ ಮುರಿಗೆಪ್ಪ ಯಾದವಾಡ, ಬಾಗಲಕೋಟೆ



ಮಲ್ಲನಗೌಡ ಶಿವನಗೌಡ ಬಿರಾದಾರ, ಬಾಗಲಕೋಟೆ
ಸಂತೋಷ ಕಳಕಪ್ಪ ಸುಗಾ, "
ಜಯಶ್ರೀ ಮಲ್ಲಿಕಾರ್ಜುನ ತರುಮಂದಿ, "
ಗೋವರ್ಧನ್ ಸಿಂಗ್, ಸಹಕಾರ ನಗರ
ಕೆ.ಜಿ. ಕುಲಕರ್ಣಿ, "
ಬಿ. ಎಲ್. ಹನುಮಂತ ರಾಜು, "
ಬಿ. ಎಂ. ಗೋಪಾಲಕೃಷ್ಣಾ, "
ಇಂದಿರಮ್ಮ ಆರ್. ಸತ್ಯನಾರಾಯಣ, "
ಡಾ॥ ಕೆ. ಎಂ. ಅಣ್ಣಾಜಿ, "
ನರಸರಾಜು, "
ಬಿ. ಈಶ್ವರರಾವ್, "
ಸಿ. ನರಸಿಂಹಯ್ಯ, "
ಸುಲೋಚನ ಎಂ. ಗೋಪಾಲ, "
ಶೈಲಜಾ ಸಂಗಮೇಶ ಬಿರಾದಾರ, "
ಎಂ. ನರಸರಾಜು, "
ಜಿ. ವಿ. ಕೃಷ್ಣಾಮೂರ್ತಿ, "
ಜಿ. ಪರಶಿವಮೂರ್ತಿ, ಗುರುಸಾರ್ವಭೌಮಿನಗರ
ಹೆಚ್. ಕೆ. ಜಿ. ಎನ್. ಟೆಂಟ್ ಹೌಸ್, ಕೆಂಗೇರಿ
ಶಾಂತಾಬಾಯಿ ಶರಣಯ್ಯ ಸ್ವಾಮಿ, ಗುಲಬರ್ಗಾ
ನಾಗೇಂದ್ರಪ್ಪ ಎಚ್. ಬೆಳಗುಂಡಿ, "
ಬಾಬುರಾವ ತುಕ್ಕಪ್ಪ ಕಲಶೆಟ್ಟಿ, "
ಶಿವಶರಣಪ್ಪ ಹೊಸಗೌಡ ಕೂಡಿ, "
ಸುವರ್ಣ ಬಸವರಾಜ ಬುಶೆಟ್ಟಿ, "
ದೇವೇಂದ್ರಪ್ಪ ಬಸ್ನೂರ, "
ದೇವೇಂದ್ರಪ್ಪ ಮಲ್ಲಿಕಾರ್ಜುನಪ್ಪ ಗೋಗಿ, "
ಚಂದ್ರಶೇಖರ ತುಳಜಪ್ಪ ಗೊಬ್ಬಿಳಕರ್, "
ಭೀಮರಾಯ ಶಿವರಾಯ ರುದ್ರವಾಡಿ, "
ದೇವೇಂದ್ರಪ್ಪ ಕುಪೇಂದ್ರ ದಳಪತಿ, "
ಭೀಮಶಾ ಆನಂದಪ್ಪ ಸಾವಳಗಿ, "
ನಾಗಣ್ಣ ಗಿರೀಶ್ ಘಂಟಿ, "
ವರುಣ ಜಲಂಧರ ಪಾಟೀಲ, "
ಕುಮಾರ ಸಾಗರ ಚಂದ್ರಕಾಂತ ರಾಂಪುರೆ, "
ಡಾ॥ ಸೋಮಶೇಖರ ದೇವಣಿ, "
ಬಸವರಾಜ ಕೋಬಾಳ, "
ರಜಾಕ ಸನಗುಂದಿ, "
ಸಂಗಮ್ಮ ಶಿವರುದ್ರಪ್ಪ ಶಟಗಾರ, "
ಚನ್ನಮ್ಮ ಯಶವಂತ ಹೊಸಮನಿ, "
ಎಸ್. ಬಸವರಜ್, ನಿವೃತ್ತ ಎಸ್. ಪಿ., "
ಬಾಪು ಗೌಡ, ಗುಲಬರ್ಗಾ, "
ಮಲ್ಲಿನಾಥ ಬಿರಾದಾರ, "
ಮಲ್ಲಯ್ಯ ಮಠಪತಿ, "
ರಾಮಚಂದ್ರ ಅಪ್ಪಾರಾವ ಪಾಟೀಲ, "
ವೀರಣ್ಣ ಶರಣಪ್ಪ ಸಜ್ಜನ, "
ಸಿದ್ದಲಿಂಗಯ್ಯ ದಂಡಿಗ ಮಠ, "
ಶಿವಶಂಕರ ನೂಲಾ, "
ಸಿದ್ದರಾಮ ಹನುಮಶೆಟ್ಟಿ ಜಿಡಗಾ, ಗುಲಬರ್ಗಾ
ಧೂಳಪ್ಪ ವಿರುಪಾಕ್ಷಪ್ಪ ಹುಡುಗಿ, "
ವೈಶಾಲಿ ವಿಜಯಿಕುಮಾರ ಪಾಟೀಲ, "
ಸಂಗ್ರಾಮಪ್ಪ ಹೊಡೇದ, "
ಮಲ್ಲಪ್ಪ ಈರಪ್ಪ ಗುರು ಮಠಕಲ್, "
ಮಹಾದೇವಿ ಸಿದ್ದರಾಮ ಹಾಲಕುಡೆ, ಮಹಾರಾಷ್ಟ್ರ
ದೀಪಕ್ ಸುಭಾಷ್ ಹಿರೇಮಠ, ಭಾರಸಿ, "
ರೇಖಾ ದೀಪಕ್ ಹಿರೇಮಠ, "
ಚನ್ನಬಸವೇಶ್ವರ ಬಾಪು ಸಾಹೇಬ ಕೋರೆ, ಅಜಂ, ಸೊಲ್ಲಾಪುರ

**ಕೂಡಲ ಸಂಗಮದ ದಾಸೋಹ ನಿಧಿಗೆ ರೂ. 1,111-00 ಸಲ್ಲಿಸಿದವರು :**
**ಶರಣರುಗಳಾದ :**
ಸಿದ್ಧಪ್ಪ ಎಂ. ಕೋರೆ, ಲೋನಿ
ಶಿವಲೀಲಾ ಶಿವಪುತ್ರ ಉಳ್ಳಾಗಡ್ಡಿ,ಬಾಗಲಕೋಟೆ
ಬಸಪ್ಪ ಧೂಳಪ್ಪ ಯಳ್ಳಿಗುತ್ತಿ, "
ಜಯಶ್ರೀ ಕೆ. ಆರ್. ಬಸವರಾಜ, "
ಶೋಭಾ ನಾರಾಯಣ ಮಿರಜಕರ, "
ಬಸವರಾಜೇಶ್ವರಿ ಮೃತ್ಯುಂಜಯ ಕುರವಟ್ಟಿ, ಹುಬ್ಬಳ್ಳಿ
ಹರ್ಷ ಮೃತ್ಯುಂಜಯ ಕುರವಟ್ಟಿ, "

ಸಹೇಬಗೌಡ ಬಾಳಾ ಸಾಹೇಬ ಬಿರಾದಾರ, ರಾಯಭಾಗ
ಪೀರಗೊಂಡ ರಾವ್‌ಸಾಹೇಬ ಕರವಣಗಿ, ಕೊಜನವಾಡಿ

**ಬಸವ ಕಲ್ಯಾಣದ ನಿತ್ಯ ಪೂಜಾ ನಿಧಿಗಾಗಿ ರೂ. 601-00 ಸಲ್ಲಿಸಿದವರು :**

**ಶರಣರುಗಳಾದ :**

ಮಹಾಂತಪ್ಪ ಹಾವನಳ್ಳಿ, ಮಹಾದೇವನಗರ
ಡಾ|| ಎಸ್. ಎಸ್. ಪಾಟೀಲ, ಗುಲಬರ್ಗಾ
ವಿ. ಕೆ. ಬಿರಾಳ, "
ಮಲ್ಲಣ್ಣ ಮೂಗುತ್ತಿ, "
ಕೇದಾರನಾಥ ನೀಲಕಂಠ ತಡಕಲ್, ಮಹಾಗಾಂವ
ಕಾರ್ತೀಕ ಎಸ್. ಪಾಟೀಲ, "
ಅರುಣಕುಮಾರ ಚನ್ನಬಸವ ಸಜ್ಜನ್, ಫರಹತಾಬಾದ್
ಬಸಪ್ಪ ಉಮಾಪತಿ ಸಜ್ಜನ್, "
ರೇಖಾ ದೀಪಕ ಹಿರೇಮಠ, ಭಾರಸಿ, ಮಹಾರಾಷ್ಟ್ರ
ಕೆ. ಎಸ್. ತೆಲಿ, ಹಿರೇಹಾಳ

**ಕೂಡಲ ಸಂಗಮದ ಪೂಜಾನಿಧಿಗಾಗಿ ರೂ. 501-00 ಕಾಣಿಕೆ ಸಲ್ಲಿಸಿದವರು :**

**ಶರಣರುಗಳಾದ :**

ಎನ್. ಶಿವಲಿಂಗಯ್ಯ, ಸಹಕಾರ ನಗರ
ಜಿ. ಎ. ಕೃಷ್ಣಮೂರ್ತಿ
ಎಂ. ಹೆಚ್. ಶಂಕರ್, ಸುಬ್ರಮಣ್ಯ ನಗರ
ಎಸ್. ಬಿ. ಕೇದಾರಜಿ, ಸಹಕಾರ ನಗರ
ಎಂ. ಸಿದ್ದಪ್ಪ, ಕಮ್ಮಗೊಂಡನ ಹಳ್ಳಿ
ರುಕ್ಕಪ್ಪ ಬಾಳಿ, ಬ್ರಹ್ಮಪುರ
ದೀಪಾಲಿ ರಾಜೇಂದ್ರ ಕುಮಾರ ಬಿರಾದಾರ, ನೇತಾಜಿನಗರ
ಶಾಂತಾ ಶಿವಬಸಪ್ಪ ಪಾಟೀಲ, ಬ್ರಹ್ಮಪುರ
ಶಂಭುಲಿಂಗ ಪಾಟೀಲ, ಬಸವನ ಬಾಗೇವಾಡಿ
ಗಂಗಾಧರ ಕೊಟ್ರಶೆಟ್ಟಿ, ಗುಲಬರ್ಗಾ
ರೂಪಾರೆಡ್ಡಿ, ಗೋಕುಲ ನಗರ
ಶಿವರಾಜ ಎಸ್. ಗರೂರು, ಶರಣನಗರ
ಧರ್ಮರಾಜ ಡಿವಪಾಲ, ನರೋಣಾ
ಶ್ರೀಹಾಲಾಶಂಕರಗೌಡ ಜಿ. ಗದ್ದಿಗೌಡರು, ಲಕ್ಷ್ಮಿಪುರ
ಶ್ರೀ ಗುರುಲಿಂಗ ಚನ್ನಬಸಪ್ಪ ಬಿಂಗೋಲಿ, ಮೈಂದರ್ಗಿ
ಎನ್. ರಾಜಶೇಖರಯ್ಯ, ಮಂಜುನಾಥ ನಗರ

**ಗುರು ಕಾಣಿಕೆ :**

**ಶರಣರುಗಳಾದ :**

ನಾಗಮ್ಮ ಮಡೆಪ್ಪ, ಗುಲಬರ್ಗಾ 1,100-00
ಬಸವರಾಜ ಕೋಟನೂರು, ಶರಣನಗರ 1,000-00
ಆನಂದ ರಾಮು ಪಾಟೀಲ, ಉಗರ ಖುರ್ದ 1,000-00

(ಮುಂದುವರಿಯುವುದು)

" ಜಂಗಮಕ್ಕೆ ಧನವನ್ನು ಸವೆಸಬೇಕು " ಎಂಬ ಬಸವ ತತ್ವವನ್ನು ಅನುಷ್ಠಾನಗೈದು ಧನ ದಾಸೋಹ ಮಾಡಿರುವ ಎಲ್ಲಾ ಶರಣ ಬಂಧುಗಳಿಗೂ ಸೃಷ್ಟಿಕರ್ತ ಲಿಂಗದೇವ ಮತ್ತು ಧರ್ಮಕರ್ತ, ಮಂತ್ರ ಪುರುಷ, ವಿಶ್ವ ಗುರು ಬಸವಣ್ಣನವರು ಅನುಗ್ರಹಿಸಲಿ ಎಂದು ಹಾರೈಸುತ್ತೇವೆ.

- ಪೂಜ್ಯ ಶ್ರೀ ಮಹಾಜಗದ್ಗುರು ಮಾತೆ ಮಹಾದೇವಿ
ಬಸವ ಧರ್ಮ ಪೀಠ, ಕೂಡಲ ಸಂಗಮ.



# ಬಸವ ಗಂಗೋತ್ರಿ ನಗರ ಯೋಜನೆ



## ಶರಣ ಬಂಧುಗಳಿಗೆ ಸಂತೋಷದ ಸುದ್ದಿ

ಬೆಂಗಳೂರು ನಗರ ಕರ್ನಾಟಕದ ರಾಜಧಾನಿ, ಉದ್ಯಾನ ವನಗಳ ನಗರವೆಂದು ಖ್ಯಾತಿ ಪಡೆದಿರುವುದೇ ಅಲ್ಲದೆ ತನ್ನ ಸಮಶೀತೋಷ್ಣ ಹವೆಯಿಂದ ದೇಶ ವಿದೇಶಗಳ ಜನರನ್ನು ಆಕರ್ಷಿಸುತ್ತಿದೆ. ಇದಕ್ಕೆ **"ಕಲ್ಯಾಣ ನಗರ"** ಎಂಬ ಹೆಸರೂ ಸಹ ಅನ್ವರ್ಥವಾಗಿ ಬಂದಿದೆ.

ಬೆಂಗಳೂರಿನ ಉಪನಗರವಾದ ಕೆಂಗೇರಿಯಿಂದ ಆಚೆಗೆ ಬೆಂಗಳೂರು-ಮೈಸೂರು ಹೆದ್ದಾರಿಗೆ ಹೊಂದಿಕೊಂಡಂತೆ, ಕುಂಬಳಗೋಡು ಗ್ರಾಮದ ಸರಹದ್ದಿಗೆ ಸೇರಿದ **"ಬಸವ ಗಂಗೋತ್ರಿ"**ಯ ಜಮೀನಿನ ಸ್ವಲ್ಪ ಭಾಗವನ್ನು ಪಾಂಡಿಚೇರಿಯ 'ಆರೋವಿಲ್ಲೆ' ರೀತಿಯಲ್ಲಿ ಶರಣರ ವಸಾಹತುವನ್ನಾಗಿ ರೂಪಿಸಲು ಬಯಸಿ ಒಂದು ಯೋಜನೆಯನ್ನು ಸಿದ್ಧಪಡಿಸಲಾಗುತ್ತಿದೆ. ಶರಣ ಬಂಧುಗಳು, ಬಸವ ತತ್ವಾಸಕ್ತರು ಒಂದು ಕಡೆ ವಾಸಿಸುತ್ತ ನಿತ್ಯವೂ ಪ್ರಾರ್ಥನೆ, ಅನುಭವ ಗೋಷ್ಠಿಗಳಲ್ಲಿ ಭಾಗಿಗಳಾಗಿ, ೧೨ನೆಯ ಶತಮಾನದ ಶರಣರ ಸಮುದಾಯಿಕ ಜೀವನದಂತೆ ತತ್ವನಿಷ್ಠ, ಪ್ರಶಾಂತ ಜೀವನಕ್ಕೆ ಪ್ರೋತ್ಸಾಹ ಕೊಡುವುದೇ ಈ ಯೋಜನೆಯ ಉದ್ದೇಶ.

ಬಸವ ಗಂಗೋತ್ರಿ ನಗರವು ಬೆಂಗಳೂರಿನಿಂದ ಅತಿದೂರದಲ್ಲಿಯೂ ಇರದೆ, ನಗರ ಮಧ್ಯದ ಗೋಜು ಗಡಿಬಿಡಿಗಳಿಂದ ದೂರವಾಗಿಯೂ ಇದೆ. ನಗರ ಸಾರಿಗೆ ಮತ್ತು ಗ್ರಾಮಾಂತರ ಸಾರಿಗೆಯ ಅನುಕೂಲತೆ ಹೊಂದಿದೆ. ಈ ಪ್ರದೇಶಕ್ಕೆ ಹೊಂದಿಕೊಂಡೇ ಕೈಗಾರಿಕಾ ನಗರವು ತ್ವರಿತಗತಿಯಲ್ಲಿ ಬೆಳೆಯುತ್ತಿರುವುದರಿಂದ ನಾಗರಿಕ ಸೌಲಭ್ಯಗಳು ಸುಲಭವಾಗಿ ದೊರೆಯುತ್ತವೆ.

೧. "ಬಸವ ಗಂಗೋತ್ರಿ ನಗರ" ಯೋಜನೆಯು ವಿಶ್ವಕಲ್ಯಾಣ ಮಿಷನ್ ಟ್ರಸ್ಟಿನ ಒಡೆತನದಲ್ಲಿ ರೂಪುಗೊಳ್ಳುತ್ತಿದ್ದು, ಇದಕ್ಕಾಗಿ ಒಂದು ನಿವೇಶನ ವಿತರಣಾ ಸಮಿತಿಯನ್ನು ರಚಿಸಲಾಗಿದೆ. ಈ ಯೋಜನೆಯಡಿಯಲ್ಲಿ ಕೆಳಕಂಡ ಅಳತೆಗಳನ್ನುಳ್ಳ ನಿವೇಶನಗಳು ಲಭ್ಯವಾಗಲಿವೆ.

ವರ್ಗ 'ಎ'-೪೦' X ೬೦'-ವಿಸ್ತೀರ್ಣ ೨೪೦೦ ಚ.ಅಡಿಗಳು

ವರ್ಗ 'ಬಿ'-೩೦' X ೪೦'-ವಿಸ್ತೀರ್ಣ ೧೨೦೦ ಚ.ಅಡಿಗಳು

ನಿವೇಶನಗಳಲ್ಲಿ ಬೆಳೆದಿರುವ ತೆಂಗಿನಮರಗಳನ್ನು ಹಾಗೆಯೇ ಉಳಿಸಿಕೊಳ್ಳಲು ಸಂಕಲ್ಪಿಸಿರುವುದರಿಂದ ನಿವೇಶನಗಳ ಅಳತೆಗಳು ಸ್ವಲ್ಪ ಏರುಪೇರಾಗುವ ಸಂಭವವಿದೆ. ಅಲ್ಲದೆ ಭೂಮಿಯ ಆಕಾರಕ್ಕನುಗುಣವಾಗಿಯೂ ಸಹ ನಿವೇಶನಗಳ ಅಳತೆಗಳಲ್ಲಿ ಕೆಲವೊಂದು ಮಾರ್ಪಾಟಾಗಬಹುದು. ಚದುರಡಿಯ ಮೇಲೆ ಬೆಲೆಯನ್ನು ನಿರ್ಧರಿಸಲಾಗುವುದು.

೨. ನಿವೇಶನಗಳು ಸೀಮಿತ ಸಂಖ್ಯೆಯಲ್ಲಿರುವುದರಿಂದ ಅರ್ಜಿ ಪತ್ರಗಳ ಆಧಾರದ ಮೇಲೆ ವಿತರಣಾ ಸಮಿತಿಯು ಸದಸ್ಯರನ್ನು ಆಯ್ಕೆ ಮಾಡಿ, ನಂತರ ಸದಸ್ಯತ್ವ ಶುಲ್ಕ ರೂ. ೧೦೦೦-೦೦ (ಒಂದು ಸಾವಿರ)ರೂಪಾಯಿ ಕಟ್ಟಲು ಪರವಾನಗಿ ನೀಡುವುದು.

೩. ನಿವೇಶನ ಪಡೆಯಲಿಚ್ಛಿಸುವವರು ಅರ್ಜಿ ಮತ್ತು ಹೆಚ್ಚಿನ ವಿವರಗಳಿಗಾಗಿ "ವಿಶ್ವಕಲ್ಯಾಣ ಮಿಷನ್, ಬೆಂಗಳೂರು" ಹೆಸರಿಗೆ ೧೦೦-೦೦(ಒಂದುನೂರು) ರೂಗಳನ್ನು ಎಂ.ಓ./ಕ್ರಾಸ್ಡ್ ಡ್ರಾಫ್ಟ್ ಮೂಲಕ ಬೆಂಗಳೂರಿನಲ್ಲಿನ ಬ್ಯಾಂಕ್‌ಗಳಲ್ಲಿ ಪಾವತಿಯಾಗುವಂತೆ ಈ ಕೆಳಕಂಡ ವಿಳಾಸಕ್ಕೆ ಕಳಿಸುವುದು. ಈ ಮೊಬಲಗನ್ನು ಯಾವುದೇ ಕಾರಣಕ್ಕೂ ಹಿಂದಿರುಗಿಸಲಾಗುವುದಿಲ್ಲ. ಚೆಕ್ಕುಗಳನ್ನು ಸ್ವೀಕರಿಸಲಾಗುವುದಿಲ್ಲ. ನಿವೇಶನ ಅಭಿವೃದ್ಧಿ ಕಾರ್ಯವನ್ನು ತ್ವರಿತಗತಿಯಲ್ಲಿ ಕೈಗೆತ್ತಿಕೊಂಡಿರುವುದರಿಂದ ಸದಸ್ಯರ ಆಯ್ಕೆ ಮತ್ತು ನಿವೇಶನ ವಿತರಣೆ ಬೇಗನೆ ಆಗುವುದು. ಆದ್ದರಿಂದ ಆಸಕ್ತರು ಬೇಗನೆ ಪತ್ರ ವ್ಯವಹಾರ ಮಾಡಬೇಕು.

ವ್ಯವಹರಿಸಬೇಕಾದ ವಿಳಾಸ:- ದೂರವಾಣಿ : 080 - 332 5335
332 2790

ಪೂಜ್ಯ ಶ್ರೀ ಜಗದ್ಗುರು ಅಲ್ಲಮ ಪ್ರಭು ಸ್ವಾಮಿಗಳು, ವಿಶ್ವಕಲ್ಯಾಣ ಮಿಷನ್
ಬಸವ ಗಂಗೋತ್ರಿ ನಗರ, ಯೋಜನೆ , ಬಸವ ಮಂಟಪ
೨೦೩೫, ೨೦ನೆಯ ಮುಖ್ಯರಸ್ತೆ, ೨ನೇ ಬ್ಲಾಕ್, ರಾಜಾಜಿನಗರ
ಬೆಂಗಳೂರು-೫೬೦ ೦೧೦

## ಬಸವ ಗಂಗೋತ್ರಿ ಸ್ಥಳ ನಿರ್ದೇಶನ

ವಿಶ್ವಕಲ್ಯಾಣ ಮಿಷನ್ (ರಿ.)ಒಡೆತನದ ಬಸವ ಗಂಗೋತ್ರಿಯು ಕುಂಬಳಗೋಡು ಗ್ರಾಮದ ಬಳಿ ಬೆಂಗಳೂರು-ಮೈಸೂರು ರಸ್ತೆಯಲ್ಲಿ ಬೆಂಗಳೂರಿನಿಂದ ೨೧ ಕಿ.ಮೀ.ಬಳಿ ಇದ್ದು ಬೆಂಗಳೂರು ನಗರದಿಂದ ಸಿಟಿ ಬಸ್ಸಿನ ಅನುಕೂಲತೆ ಇದೆ. ಕಲಾಸಿಪಾಳ್ಯಂ ಸಿಟಿ ಮಾರ್ಕೆಟ್ ಬಸ್ ನಿಲ್ದಾಣದಿಂದ ಹೋಗುವ ಬಸ್ ನಂಬರ್‌ಗಳು ೨೩೧, ೨೨೭, ೨೨೮, ೨೨೯, ೨೨೬ಬಿ. ಮೆಜೆಸ್ಟಿಕ್ ಬೆಂಗಳೂರು ಮುಖ್ಯ ನಿಲ್ದಾಣದಿಂದ ಹೊರಡುವ ಮೈಸೂರು ರಸ್ತೆಯಲ್ಲಿ ಸಂಚರಿಸುವ ಸಾಮಾನ್ಯ ವೇಗದ ಬಸ್ಸುಗಳು ಬಸವ ಗಂಗೋತ್ರಿ ನಿಲ್ದಾಣದ ಬಳಿ ನಿಲ್ಲುತ್ತವೆ.

ರಾಮೋಹಳ್ಳಿ ಕ್ರಾಸ್‌ಗೆ ದೊಡ್ಡ ಆಲದ ಮರಕ್ಕೆ ಹೋಗುವ ಬಸ್ಸುಗಳು ನಿಲ್ಲುತ್ತಿದ್ದು, ಅಲ್ಲಿಗೆ ಬಸವ ಗಂಗೋತ್ರಿಯು ಬಹಳ ಹತ್ತಿರ. ರಾಮೋಹಳ್ಳಿ ಕ್ರಾಸ್ ಮತ್ತು ಕುಂಬಳಗೋಡು ಗ್ರಾಮ ಎರಡರ ಮಧ್ಯೆ ಬಸವ ಗಂಗೋತ್ರಿಯ ದ್ವಾರವಿದೆ.



## ಮಾತಾ ನೀಲಾಂಬಿಕಾ ಸಮುದಾಯ ಭವನ ಕಾರ್ಯಕ್ರಮಗಳಿಗೆ ದೊರೆಯುತ್ತದೆ

ಬೆಂಗಳೂರಿನ ರಾಜಾಜಿನಗರದ ಎರಡನೆಯ ಬ್ಲಾಕಿನ 20ನೆಯ ಮುಖ್ಯ ರಸ್ತೆಯಲ್ಲಿರುವ (ಸಿಟಿ ಆಸ್ಪತ್ರೆ ಪಕ್ಕ) ಬಸವ ಮಂಟಪದಲ್ಲಿ ಮೊದಲ ಅಂತಸ್ತಿನಲ್ಲಿ ಸಿದ್ಧಲಿಂಗೇಶ್ವರ ಪ್ರಸಾದ ನಿಲಯ ಮತ್ತು ಎರಡನೆಯ ಅಂತಸ್ತಿನಲ್ಲಿ ಮಾತಾ ನೀಲಾಂಬಿಕಾ ಸಮುದಾಯ ಭವನ ಎಂಬ ಸಭಾಮಂಟಪವು ಸಿದ್ಧವಾಗದ್ದು ಉಪನ್ಯಾಸ ಕಾರ್ಯಕ್ರಮ, ಪುಸ್ತಕ ಬಿಡುಗಡೆ, ನಾಮಕರಣ, ಲಿಂಗೈಕ್ಯ ಗಣಾರಾಧನೆ, ಲಿಂಗೈಕ್ಯರ ಸಂಸ್ಮರಣೆ, ಜನ್ಮದಿನೋತ್ಸವ, ವಿವಾಹ ವಾರ್ಷಿಕೋತ್ಸವ, ವಿವಾಹ ಮುಂತಾದ ಕಾರ್ಯಕ್ಕೆ ದೊರೆಯುತ್ತದೆ. ಕೆಲವೊಂದು ನಿಬಂಧನೆಗೆ ಒಳಪಟ್ಟು ಪಾಕ ಗೃಹ, ಪಾತ್ರೆ ಸಾಮಾನು, ಕುರ್ಚಿ, ಟೇಬಲ್ ಮುಂತಾದ ಸಲಕರಣೆಗಳು ಮಾತ್ರವಲ್ಲ ಅಡಿಗೆ ಮಾಡುವ, ನೀಡುವ ಸಿಬ್ಬಂದಿ ಸಹ ದೊರೆಯುತ್ತಾರೆ. ಮೈಕ್ ಸೆಟ್, ಸೀರಿಯಲ್ ಸೆಟ್, ಮಾತ್ರವಲ್ಲದೆ ಓಲಗ ನಾದಸ್ವರ ಮುಂತಾದ ಮಂಗಳ ವಾದ್ಯದವರು ಸಹ ಲಭ್ಯವಿರುತ್ತಾರೆ.

ಜವಾಬ್ದಾರಿ ಹೊತ್ತು ಓಡಾಡುವ ಜನರು ಇಲ್ಲದೆ ಇರುವವರು ನಿಗದಿ ಪಡಿಸಿದ ಹಣವನ್ನು ಕೊಟ್ಟರೆ ಸಾಕು ಸೇವಾಪ್ರತಿಗಳಾದ ಗಣಾಚಾರ ದಳದವರು ಎಲ್ಲ ವ್ಯವಸ್ಥೆ ಮಾಡಿಕೊಡುವರು.

ಆರ್ಥಿಕವಾಗಿ ಅನಾನುಕೂಲತೆ ಇರುವವರು, ಸರಳವಾದ ಆದರ್ಶ ವಿವಾಹ ಮಾಡಿಕೊಳ್ಳಬೇಕು ಎನ್ನುವವರಿಗೆ ಅವರ ಅಗತ್ಯಕ್ಕೆ ಸಂಪನ್ಮೂಲಕ್ಕೆ ಅನುಸಾರವಾಗಿ ವಿವಾಹ ಮುಂತಾದ ಕಾರ್ಯಕ್ರಮ ನೆರವೇರಿಸಿಕೊಡಲಾಗುವುದು.

ಧಾರ್ಮಿಕ ವಿಧಿವಿಧಾನ (ಪೌರೋಹಿತ್ಯ) ನಡೆಸಿಕೊಡುವವರು ಸಹ ಲಭ್ಯವಿರುತ್ತಾರೆ. ಮಂತ್ರೋಪದೇಶ, ದೀಕ್ಷೆ ಮುಂತಾದ ಕ್ರಿಯೆಗಳನ್ನು ನಡೆಸಿಕೊಡುವ ಗುರುಗಳೂ ಲಭ್ಯವಿರುತ್ತಾರೆ.

### ಭಾವ ಸಂಗಮ ವಧುವರ ಹೊಂದಾಣಿಕೆ ಕೇಂದ್ರ

ವಧುವರರ ಆಯ್ಕೆಗೆ ನೆರವಾಗುವ ಭಾವ ಸಂಗಮ ಎಂಬ ಸಂಸ್ಥೆಯು ವಿಶ್ವಕಲ್ಯಾಣ ಮಿಷನ್ ಆಶ್ರಯದಲ್ಲಿ ನಡೆಯುತ್ತಿದ್ದು ಮದುವೆಯಾಗುವ ವಧು-ವರರು, ಅವರ ಪಾಲಕರು ಸಂಪರ್ಕಿಸಿ ಹೆಸರುಗಳನ್ನು ನೋಂದಾಯಿಸಬಹುದು. ವಧುವರರನ್ನು ಮುಖಾಮುಖಿ ಭೇಟಿ ಮಾಡಿಸುವ ಸಮಾವೇಶಗಳು ಒಂದು ವರ್ಷದಲ್ಲಿ ಆರು ಸಲ ನಡೆಯುತ್ತದೆ. ಆಗ ಪಾಲಕರು ತಮ್ಮ ಮಕ್ಕಳ ಸಹಿತವಾಗಿ ಬಂದು ಭಾಗಿಗಳಾಗಲು ಸುವರ್ಣಾವಕಾಶ ಲಭ್ಯವಾಗುತ್ತದೆ.

ಎಲ್ಲ ರೀತಿಯ ವಿವರಗಳನ್ನು ಪಡೆಯಲು, ಸಭಾಗೃಹವನ್ನು ಕಾಯ್ದಿರಿಸಲು ಕೆಳಗೆ ನೀಡಿರುವ ವಿಳಾಸಕ್ಕೆ ಸಂಪರ್ಕಿಸಿರಿ.

ವಿಶ್ವಕಲ್ಯಾಣ ಮಿಷನ್ (ರಿ) ಟ್ರಸ್ಟ್, ಬಸವ ಮಂಟಪ
2035, 20 ನೆಯ ಮೇನ್, 2ನೇ ಬ್ಲಾಕ್
ರಾಜಾಜಿನಗರ, ಬೆಂಗಳೂರು - 560010
ದೂ: 3325335/3322790 ಫ್ಯಾಕ್ಸ್: 3919736

**ಸೂಚನೆ : 2003 ಆಗಸ್ಟ್ 15 ರಂದು ಬಸವ ಮಂಟಪದಲ್ಲಿ ಭಾವ ಸಂಗಮ ಕಾರ್ಯಕ್ರಮವನ್ನು ಏರ್ಪಡಿಸಲಾಗಿದೆ.**

# ಗುರು ಸ್ಮರಣೆ

ಸ್ವಾಮಿ ಲಿಂಗಾನಂದರ ಚರಣಕೆ ಬಾಗಿ
ಹರಸೆಂದು ಬೇಡುವೆವು ಹೇ ದಿವ್ಯಯೋಗಿ ॥ಪ॥
ಮನಗೂಳಿಯಲ್ಲಿ ಹೂವಾಗಿ ಅರಳಿ
ಬಸವ ತತ್ವದ ಕಂಪು ಜಗಕ್ಕೆಲ್ಲ ಬೀರಿ
ಸಂಗಮ ಕ್ಷೇತ್ರದಿ ಶರಣರ ಮೇಳೈಸಿ
ಅರಿವುಳ್ಳ ಶಿಷ್ಯರ ಕಟೆದ ರೂಹಾರಿ ॥1॥
ಆತ್ಮವಿಶ್ವಾಸದ ಚಿದ್ಬೆಳಕಿನಲಿ
ಬಸವ ಪಥದಲ್ಲಿ ಸವೆದ ಮಹಾತ್ಯಾಗಿ
ಶರಣ ಸಂದೇಶವ ಹೊತ್ತು ಸಾಗಿದ ಧೀರಯೋಗಿ
ಸಾರಿದೆ ಎಲ್ಲೆಡೆ ಪ್ರವಚನ ಪಿತರಾಗಿ ॥2॥
ಬಂದಿರಿ ಹಿರಿಯೂರಿಗೆ ಪ್ರವಚನ ಮಾಡಲು
ತಂದಿರಿ ನಮ್ಮೆದೆಯಲಿ ಸಂತಸದ ಹೊನಲು
ಆತುರದಿ ಬಂದಿತ್ತು ಲಿಂಗದೇವನ ಕರೆಯು
ಕೇಳದಾಯ್ತು ನಿಮಗೆ ಭಕ್ತರ ಮೊರೆಯು ॥3॥
ಮರ್ತ್ಯದ ಹಂಗನ್ನು ತೊರೆದಿರಿ ನೀವು
ಬಸವ ಭಾನಿನಲಿ ಬಯಲಾದಿರಿ ನೀವು
ಪ್ರವಚನದ ಗುಂಗು ಕಳೆದಿಲ್ಲ ನಮಗಿನ್ನು
ನಿಮ್ಮ ನೆನಪೇ ನಮಗೆಲ್ಲ ಸ್ಫೂರ್ತಿ ಜೇನು ॥4॥

- ಶರಣೆ. ವಿ. ನಿರ್ಮಲಾ ಪ್ರಭಾಕರ
ಗನ್ನಾಯ್ಕನ ಹಳ್ಳಿ

---



---


## ಗುರುವಿಗೆ ನಮನ

ಅಡಿಯ ಇಟ್ಟು ನಡೆದಲ್ಲೆಲ್ಲ ದೀಪ ಹಚ್ಚಿ ಬಂದಿರಿ
ಬಸವ ಭಾನು ಕ್ರಾಂತಿ ಉಷೆಯು ಆಗಿ ಮುಂದೆ ನಡೆದಿರಿ
ಎನಿತು ಪುಣ್ಯ ನಮ್ಮದಿತ್ತೋ ಇಂಥ ಗುರುವ ಪಡೆಯಲು
ಶಿವರಕ್ಷೆಯ ಅಭಯ ಹೊತ್ತು ದಿವ್ಯ ಪಥದಿ ನಡೆಯಲು •





ಪರಮ ಪೂಜ್ಯ ಜಗದ್ಗುರು ಮಾತೆ ಗಂಗಾದೇವಿಯವರ 46ನೇ
ವರ್ಧಂತ್ಯೋತ್ಸವ ದಿ. 31-8-2003



CPMG/KA/BGW -50/2003-2005
WPP (W)-17 R.No. 19980/70